ಕರ್ನಾಟಕ ಸರ್ಕಾರ

# ಸಿರಿ ಕನ್ನಡ

## ಪ್ರಥಮ ಭಾಷೆ ಕನ್ನಡ ಪಠ್ಯಪುಸ್ತಕ

## ಭಾಗ–2

ಅ

## ಎಂಟನೆಯ ತರಗತಿ

@KTBS
NOT TO BE REPUBLISHED

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

D8Z6T1

# ಪರಿವಿಡಿ


| ಕ್ರ.ಸಂ | ಗದ್ಯ ಭಾಗ | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೧ | ಹೂವಾದ ಹುಡುಗಿ | – ಎ.ಕೆ. ರಾಮಾನುಜನ್ | ೧ |
| ೨ | ತಲಕಾಡಿನ ವೈಭವ | – ಹಿರೇಮಲ್ಲೂರು ಈಶ್ವರನ್ | ೧೦ |
| ೩ | ಅಮ್ಮ | – ಯು.ಆರ್. ಅನಂತಮೂರ್ತಿ | ೨೧ |
| ೪ | ಸಪ್ತಾಕ್ಷರಿ ಮಂತ್ರ | – ಮುದ್ದಣ | ೩೧ |
| | | ಪದ್ಯ ಭಾಗ | |
| ೧ | ಬಹುಮಾನ | – ಕುವೆಂಪು | ೪೩ |
| ೨ | ಗೆಳೆತನ | – ಚೆನ್ನವೀರ ಕಣವಿ | ೪೯ |
| ೩ | ವಚನಾಮೃತ | – ಅಲ್ಲಮಪ್ರಭು – ಆಯ್ದಕ್ಕಿಮಾರಯ್ಯ<br>– ಅಮುಗೆರಾಯಮ್ಮ– ಶಿವಶರಣೆ ಲಿಂಗಮ್ಮ | ೫೪ |
| ೪ | ರಾಮಧಾನ್ಯ ಚರಿತೆ | – ಕನಕದಾಸರು | ೬೪ |
| | | ಪಠ್ಯಪೂರಕ ಅಧ್ಯಯನ | |
| ೫ | ಕಟ್ಟುವೆವು ನಾವು (ಪದ್ಯ) | – ಎಂ. ಗೋಪಾಲಕೃಷ್ಣ ಅಡಿಗ | ೭೬ |
| ೧ | ಆಟೋರಿಕ್ಷಾದ ರಸಪ್ರಸಂಗಗಳು (ಗದ್ಯ) | – ಎಚ್. ನರಸಿಂಹಯ್ಯ | ೭೯ |
| ೨ | ಸೀಮೆ (ಗದ್ಯ) | – ಚಂದ್ರಶೇಖರ ಕಂಬಾರ | ೮೩ |


@KTBS NOT TO BE REPUBLISHED

ಗದ್ಯ ಭಾಗ

# ೫. ಹೂವಾದ ಹುಡುಗಿ

N2J2L6

– ಎ.ಕೆ. ರಾಮಾನುಜನ್

**ಪ್ರವೇಶ :** ಇಂದಿನ ಶಿಷ್ಟ ಸಾಹಿತ್ಯ ಸಂಪದ್ಭರಿತವಾಗಿ ಬೆಳೆಯಲು, ಜನಪದ ಸಾಹಿತ್ಯವೇ ಬುನಾದಿಯಾಗಿದೆ. ಆದುದರಿಂದ ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂಬ ಕವಿರಾಜಮಾರ್ಗಕಾರನ ಮಾತು ಜನಪದ ಸಾಹಿತ್ಯದ ಮಹತ್ತ್ವವನ್ನು ಸಾರುತ್ತದೆ. ನಮ್ಮ ಜನಪದರು ತಮ್ಮ ಬದುಕಿನ ಸುಖ–ದುಃಖ, ನೋವು–ನಲಿವು, ಸರಸ–ವಿರಸ, ಪ್ರೀತಿ–ವಾತ್ಸಲ್ಯ, ಆಸರಿಕೆ–ಬೇಸರಿಕೆಗಳನ್ನು ಗಂಡು ಹೆಣ್ಣೆಂಬ ಭೇದವಿಲ್ಲದೆ ಅನುಭವಗಳನ್ನು ಹಾಡುಗಳ ಮೂಲಕ, ಕತೆಗಳ ರೂಪದಲ್ಲಿ, ಹಾಡುಗಬ್ಬವಾಗಿ ವ್ಯಕ್ತ ಪಡಿಸಿದ್ದಾರೆ.

ಹಿಂದೆ ಅವಿಭಕ್ತ ಕೌಟುಂಬಿಕ ವ್ಯವಸ್ಥೆಯಲ್ಲಿ ಅಜ್ಜ–ಅಜ್ಜಿಯರು ಹೇಳುತ್ತಿದ್ದ, ರೋಮಾಂಚನವನ್ನು ಉಂಟುಮಾಡುತ್ತಿದ್ದ ಕಥೆಗಳು ಕುತೂಹಲ ಕೆರಳಿಸುವ, ಕಲ್ಪನಾ ಲೋಕದ ಬಾಗಿಲು ತೆರೆಸುವ, ಮನಸ್ಸಿಗೆ ಮುದ ನೀಡುವ ಮೂಲಕ ಮಕ್ಕಳಲ್ಲಿ ಜ್ಞಾಪಕಶಕ್ತಿ, ಕಲ್ಪನಾಶಕ್ತಿ ಬೆಳೆಸುತ್ತಿದ್ದವು. ಇವೆಲ್ಲ ಇಂದು ಕಣ್ಮರೆಯಾಗುತ್ತಿವೆ. ಇಂಥಹ ಒಂದು ಅನುಭವವನ್ನು ಜನಪದಕಥೆಗಳ ಮೂಲಕ ಮಕ್ಕಳಿಗೆ ಕಟ್ಟಿ ಕೊಡುವ ಅಗತ್ಯವಿದೆ. ಈ ಉದ್ದೇಶದಿಂದ ಪ್ರಕೃತ ಕತೆಯನ್ನು ನಿಗದಿಗೊಳಿಸಿದೆ.

©KTBS NOT TO BE REPUBLISHED

ಒಂದು ಪಟ್ಟಣ. ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗ ದೊರೆಯ ಮೊದಲನೆಯ ಹೆಣ್ಣು ಮಗಳಿಗೆ ಲಗ್ನವಾಗಿತ್ತು.

ಅದೇ ಊರಿನಲ್ಲಿ ಒಬ್ಬಳು ಮುದುಕಿಯಿದ್ದಳು. ಅವಳಿಗೆ ಇಬ್ಬರು ಹೆಣ್ಣುಮಕ್ಕಳು. ಆ ಮುದುಕಿ ಕೂಲಿಮಾಡಿ ತನ್ನ ಮಕ್ಕಳನ್ನು ಸಾಕುತ್ತಿದ್ದಳು. ಒಂದು ದಿನ ತಂಗಿ, "ಅಕ್ಕಯ್ಯ ಹೋದಷ್ಟು ದಿನಕ್ಕೆ ಅಮ್ಮ ಕೂಲಿಮಾಡಿ ನಮ್ಮನ್ನು ಸಾಕಬೇಕು ಅಂದ್ರೆ ಕಷ್ಟ. ಆದ್ದರಿಂದ ನಾನು ಹೂವಿನ ಗಿಡ ಆಗ್ತೀನಿ, ನೀನು ಹೂ ತಕ್ಕೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ" ಎಂದು ಅಕ್ಕನಿಗೆ ಹೇಳಿದಳು. ಅಕ್ಕನಿಗೆ ಕುತೂಹಲ ಕೆರಳಿ, "ಅದು ಹೇಗೆ ಹೂವಿನ ಗಿಡ ಆಗ್ತೀಯೆ?" ಎಂದು ಕೇಳಿದಳು. "ಅದೆಲ್ಲ ನಾನು ಆಮೇಲೆ ಹೇಳ್ತೀನಿ ಕಣೆ, ಮೊದಲು ಮನೆಯೆಲ್ಲ ಸಾರಿಸಿಬಿಡು. ನೀನು ಸ್ನಾನಮಾಡಿ ಬಾವಿಯಿಂದ ಚಿಳ್‌ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರು ತಗೊಂಡು ಬಾ" ಅಂದಳು. ಅಕ್ಕ ಹಾಗೆ ಮಾಡಿದಳು. ಇವರ ಮನೆ ಎದುರಿಗೆ ಒಂದು ದೊಡ್ಡ ಮರವಿತ್ತು. ಅಲ್ಲೂ ಗುಡಿಸಿ ಸಾರಿಸಿದಳು. ಅಲ್ಲಿಗೆ ಇಬ್ಬರೂ ಹೋದರು. ತಂಗಿ ಅಕ್ಕನನ್ನು ಕರೆದು, "ನೋಡಕ್ಕಯ್ಯ ನಾನಿಲ್ಲಿ ದೇವರ ಧ್ಯಾನಮಾಡಿ ಕುಳಿತ್ಕೋತೀನಿ. ನೀನು ಒಂದು ತಂಬಿಗೆ ನೀರನ್ನೆಲ್ಲ ನನ್ನ ಮೈಮೇಲೆ ಸುರಿದುಬಿಡು. ನಾನು ಹೂವಿನ ಗಿಡ ಆಗ್ತೀನಿ. ಸುಳಿ ಮುರಿಯದ ಹಾಗೆ, ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂ ಕಿತ್ಕೋ. ನಿನಗೆ ಸಾಕಾದ ಮೇಲೆ ಇನ್ನೊಂದು ತಂಬಿಗೆ ನೀರನ್ನು

ನನ್ನ ಮೇಲೆ ಸುರಿದುಬಿಡು. ಪುನಃ ನಾನು ಮನುಷ್ಯಳಾಗ್ತೀನಿ" ಅಂದಳು. ತಂಗಿ ದೇವರನ್ನು ನೆನೆದು ಕುಳಿತಳು. ಅಕ್ಕ ಒಂದು ಬಿಂದಿಗೆ ನೀರನ್ನು ಅವಳ ಮೇಲೆ ಸುರಿದಳು. ಸರಿ, ಹೂವಿನ ಗಿಡವಾದಳು. ಅಕ್ಕ, ಸುಳಿ, ಎಲೆ, ತೊಟ್ಟು ಮುರಿಯದ ಹಾಗೆ ಹೂವನ್ನು ಬಿಡಿಸಿಕೊಂಡಳು. ನಂತರ ಮತ್ತೊಂದು ತಂಬಿಗೆ ನೀರನ್ನು ಗಿಡದ ಮೇಲೆ ಸುರಿದಳು. ಯಥಾಸ್ಥಿತಿಯಂತೆ ತಂಗಿ ಲಕ್ಷಣವಾಗಿ ಮನುಷ್ಯಳಾದಳು. ಅನಂತರ ಇಬ್ಬರೂ ಆ ಹೂವನ್ನೆಲ್ಲ ಬುಟ್ಟಿಗೆ ತುಂಬಿ ಮನೆಗೆ ತಂದರು. ಇಬ್ಬರೂ ಸೇರಿ ಹೂವು ಕಟ್ಟಿದರು. ಎಲ್ಲಿಗೆ ತೆಗೆದುಕೊಂಡು ಹೋಗಿ ಮಾರಲಿ ಅಂದಳು ದೊಡ್ಡವಳು. "ಅಕ್ಕಯ್ಯ, ದೊರೆಮನೆಗೆ ತಗೊಂಡು ಹೋಗು. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅಮ್ಮ ನಮಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚು ಹಣ ಕೂಡಿಹಾಕಿ ಅಮ್ಮನಿಗೆ ತೋರಿಸೋಣ" ಅಂದಳು ಚಿಕ್ಕವಳು.



ಅಂದು ಒಂದು ಬುಟ್ಟಿಯಲ್ಲಿ ಹೂವನ್ನೆಲ್ಲ ಇಟ್ಟುಕೊಂಡು, "ಹೂವು ಬೇಕೇನಮ್ಮ ಹೂವು" ಎಂದು ಕೂಗಿಕೊಂಡು ದೊರೆಯ ಮನೆ ಮುಂದೆ ಬಂದಳು. ದೊರೆಯ ಚಿಕ್ಕ ಮಗಳು "ಅಮ್ಮ, ಹೂವು ಗಮಗಮ ಅಂತಾವೆ ಕೊಡಿಸಿ ಕೊಡು" ಅಂದಳು. ದೊರೆಯ ಹೆಂಡತಿ ಹೂವನ್ನು ನೋಡಿದಳು, ಎಷ್ಟು ಬೆಲೆ? ಅಂತ ಕೇಳಿದಳು. "ಎಷ್ಟಾನ ಕೊಡಿರವ್ವ; ನಾವು ಬಡವರು" ಎಂದಳು ಅಕ್ಕ. ದೊರೆ ಹೆಂಡತಿ ಹೂವು ತಗೊಂಡು ಒಂದು ಮೊಗೆ ಹಣ ಕೊಟ್ಟಳು. ಅಕ್ಕ ಮೊಗೆ ಹಣವನ್ನು ತಂದು ತಂಗಿಗೆ ತೋರಿದಳು. "ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು" ಅಂದಳು. ಹೀಗೆ ಕೆಲವು ದಿನ ಮಾಡಿದರು. ಒಟ್ಟು ಐದು ಮೊಗೆ ಹಣವಾಯಿತು. ಅಕ್ಕ ಅಮ್ಮನಿಗೆ ತೋರಿಸೋಣ? ಅಂದಳು. ಬೇಡವೆ ತಂಗಿ, ಅಮ್ಮ ಹೊಡೀತಾಳೆ ಅಂತ ಅವರವರೆ ಮಾತಾಡಿಕೊಂಡರು. ಈ ಹುಡುಗಿಯರಿಗೆ ಸಂಪಾದನೆ ಮಾಡೋ ಆಸೆ.

© KTBS NOT TO BE REPUBLISHED

ಈ ಹೂವು ದೊರೆಮಗನ ಕಣ್ಣಿಗೆ ಬಿತ್ತು. ಒಳ್ಳೆ ಗಮಗಮ ಅನ್ನುತ್ತಿತ್ತು. ಇಂತಹ ಸೊಗಸಾದ ಹೂವನ್ನು ಅವನೆಂದೂ ನೋಡೇ ಇರಲಿಲ್ಲ. ಈ ಹೂವನ್ನು ಯಾರು ತಂದು ಕೊಡುತ್ತಾರೆ ಎಂದು ಯೋಚಿಸಿ ಆ ದೊಡ್ಡ ಹುಡುಗಿ ತಂದು ಕೊಡುವುದನ್ನು ನೋಡಿ, ಅವಳನ್ನೇ ಹಿಂಬಾಲಿಸಿ ಹೋಗಿ ನೋಡಿದ. ಈ ಮನೆಯ ಸುತ್ತ ಮುತ್ತ ಹೂವಿನ ಗಿಡಗಳಿಲ್ಲದ್ದನ್ನು ಗಮನಿಸಿ ಇಂಥ

ಹೂವು ಇವರಿಗೆಲ್ಲಿಂದ ಬರುತ್ತವೆ ಎಂದು ಯೋಚನೆ ಮಾಡಿ ಅರಮನೆಗೆ ಬಂದ. ಮಾರನೆ ದಿನ ಸೂರ್ಯ ಹುಟ್ಟುವ ಮೊದಲೇ ಹೋಗಿ ಹುಡುಗಿಯರಿದ್ದ ದೊಡ್ಡ ಮರದ ಮೇಲೆ ಕುಳಿತುಕೊಂಡ.



ಅಂದು ಸಹ ಹುಡುಗಿಯರು, ಆ ಮರದಡಿ ಸಾರಿಸಿ ಗುಡಿಸಿದರು. ತಂಗಿ ಯಥಾಪ್ರಕಾರ ಹೂವಿನ ಗಿಡವಾದಳು. ಅಕ್ಕ ಎಚ್ಚರಿಕೆಯಿಂದ ಹೂ ಬಿಡಿಸಿಕೊಂಡಳು. ಆನಂತರ ಪುನಃ ಹೂವಿನ ಗಿಡವಾಗಿದ್ದ ತಂಗಿ ಮನುಷ್ಯಳಾದಳು. ಇದೆಲ್ಲವನ್ನೂ ಮರದ ಮೇಲಿದ್ದ ದೊರೆಮಗ ನೋಡಿಕೊಂಡ. ಆ ಮೇಲೆ ಸೀದಾ ಅರಮನೆಗೆ ಬಂದು ಮಂಚದ ಮೇಲೆ ಮಕಾಡೆ ಮಲಗಿಕೊಂಡ. ತಂದೆ – ತಾಯಿ ಬಂದು ಕೇಳಿದರೂ ಏನು ಹೇಳಲಿಲ್ಲ. ಆಗ ಮಂತ್ರಿಯ ಮಗ ಬಂದು ಕೇಳಲಾಗಿ ಹೂವಿನ ಗಿಡವಾಗುವ ಹುಡುಗಿಯ ವಿಚಾರವೆಲ್ಲ ಹೇಳಿದ. ದೊರೆಗೆ ಈ ವಿಚಾರ ತಿಳಿದು ಆ ಮುದುಕಿಯನ್ನು ಕರೆಸಿ ಮದುವೆಗೆ ಸಕಲ ಸಿದ್ಧತೆ ಮಾಡಿದನು. ಒಳ್ಳೆ ಮುಹೂರ್ತದಲ್ಲಿ ಹೂವಿನ ಗಿಡವಾಗುತ್ತಿದ್ದ ಹುಡುಗಿಯ ಜೊತೆಯಲ್ಲಿ ರಾಜಕುಮಾರನಿಗೆ ಮದುವೆಯಾಗುತ್ತದೆ. ಅರಮನೆಯಲ್ಲಿ ಅವರಿಬ್ಬರನ್ನು ಏಕಾಂತದಲ್ಲಿ ಬಿಟ್ಟರು. ಇವನಿಷ್ಟಕ್ಕೆ ಇವನಿದ್ದಾನೆ ಅವಳಿಷ್ಟಕ್ಕೆ ಅವಳಿದ್ದಾಳೆ. ಅವರೇ ಮಾತನಾಡಲಿ ಅಂತ ಅವಳು. ಅವಳೇ ಮಾತಾಡಲಿ ಅಂತ ಅವನು. ಹೀಗೆ ಇಬ್ಬರೂ ಗುಮ್ಮಾಗಿ ಸುಮ್ಮನಿದ್ದರು. "ಏನು ಅವರು ಮಾತಾಡಿಸಲೇ ಇಲ್ಲವಲ್ಲ, ಮತ್ತೇಕೆ ಮದುವೆಯಾದರು" ಅಂತ ಯೋಚನೆಮಾಡಿ, "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?" ಅಂತ ರಾಜಕುಮಾರನನ್ನು ಕೇಳಿದಳು. "ನಾನು ಹೇಳಿದ ಹಾಗೆ ಕೇಳಿದ್ರೆ ಮಾತಾಡ್ತಿನಿ. ಇಲ್ದೇ ಇದ್ರೆ ಇಲ್ಲ." ಎಂದು ಒರಟಾಗಿ ಹೇಳಿದ ದೊರೆಮಗ. "ಪತಿ ಮಾತು ಕೇಳದೆ ಉಂಟೇ? ಅದೇನು ಹೇಳಿ ಅಂದಳು. ಮತ್ತೆ ನೀನು ಹೂವಿನ ಗಿಡ ಆಗ್ತೀಯಲ್ಲ ಆಗು, ಹೂವ ಹಾಸಿಕೊಂಡು, ಹೊದ್ದುಕೊಂಡು ಮಲಿಕೋಬೇಕು ಅಂದ. ಸ್ವಾಮಿ, ನಾನು ದೇವರಲ್ಲ, ದೆವ್ವವಲ್ಲ. ಎಲ್ಲಾರ ಹಾಗೆ ನಾನೂ ನರಮನುಷ್ಯಳು. ನರಮನುಷ್ಯರು ಹೂವಿನಗಿಡ ಆಗೋದುಂಟೇ? ಎಂದಳು ದೈನ್ಯದಿಂದ.

@KTBS NOT TO BE REPUBLISHED

ಈ ಕಳ್ಳಾಟವೆಲ್ಲ ಬೇಡ ಆವತ್ತು ನೀನು ಹೂವಿನಗಿಡ ಆಗಿದ್ದನ್ನು ಕಣ್ಣಾರೆ ನಾನು ನೋಡಿದೆ. ನನ್ನ ಮುಂದೆ ನೀನು ಹೂವಿನಗಿಡ ಆಗದಿದ್ದಮೇಲೆ ಇನ್ನಾರಮುಂದೆ ಆಗ್ತೀಯಾ ಎಂದು ಸಿಟ್ಟಾದ. ಕಣ್ಣೀರನ್ನು ಸೆರಗಿನಿಂದ ಒರೆಸಿಕೊಂಡು, ಸ್ವಾಮಿ ಸಿಟ್ಟಾಗಬೇಡಿ, ಎರಡು ತಂಬಿಗೆ ನೀರನ್ನು ತರಿಸಿ, ಮಂತ್ರಿಸಿಕೊಟ್ಟು ನೀರನ್ನು ಹಾಕುವ ವಿಧಾನ ಹಾಗೂ ಹೂವನ್ನು ಬಿಡಿಸುವ ವಿಧಾನವನ್ನು ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ದೊರೆಮಗ ನೀರನ್ನು ಸುರಿದ ಕೂಡಲೇ ಹೂವಿನ ಗಿಡವಾದಳು. ತಮಗೆ ಬೇಕಾದಷ್ಟು ಹೂವನ್ನು ಬಿಡಿಸಿಕೊಂಡು ಮತ್ತೊಂದು ತಂಬಿಗೆ ನೀರನ್ನು ಸುರಿದನು ಮನುಷ್ಯಳಾದಳು. ಇಬ್ಬರೂ ಆನಂದದಿಂದ ಹೂವು ಹಾಸಿಕೊಂಡು ಹೊದ್ಕೊಂಡು ಮಲಗಿದರು.

ಹೀಗೇ ಕೆಲವು ದಿನ ಕಳೆಯಲು ಅರಮನೆಯ ಪಕ್ಕದಲ್ಲಿ ಬಾಡಿದ ಹೂವಿನ ರಾಸಿಯನ್ನು ನೋಡಿದ ದೊರೆಯ ಕಿರಿಮಗಳು. ಅತ್ತಿಗೆ ಮುಡಿದು ಬಿಸಾಕಿದ ಹೂವೇ ಒಂದು ರಾಸಿಯಾಗಿದೆ ನನಗೆ ಹೂವು ಕೊಟ್ಟಿಲ್ಲವೆಂದು ತಾಯಿಗೆ ದೂರು ಹೇಳಿದಳು. ಹೂಬೇಕಾದರೆ ಕೊಡಿಸಿ ಕೊಡ್ತೀನಿ, ಸುಮ್ಮನಿರಮ್ಮ  ಎಂದು ತಾಯಿ ಸಮಾಧಾನ ಮಾಡಿದಳು.

ಒಂದು ದಿನ ದೊರೆ ಮಗ ಎಲ್ಲೋ ಹೊರಗೆ ಹೋಗಿದ್ದ. ಆಗ ದೊರೆ ಮಗಳು ತನ್ನ ಸ್ನೇಹಿತೆಯರಿಗೆಲ್ಲ, "ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ; ನಮ್ಮ ಅತ್ತಿಗೆ ಹೂವಿನಗಿಡ ಆಗ್ತಾಳೆ ನೀವೆಲ್ಲರೂ ಬನ್ನಿ. ಗಮಗಮ ಅನ್ನೋ ಹೂವು ಬೇಕಾದಷ್ಟು ಕೊಡ್ತೀನಿ". ಎಂದು ಹೇಳಿ ಬಂದಳು. ತಾಯಿಗೆ ಅತ್ತಿಗೆಯನ್ನು ಕಳಿಸಿ ಕೊಡುವಂತೆ ಕೇಳ್ತಾಳೆ. ತಾಯಿ "ಅಣ್ಣನ ಕೇಳ್ಕೊಂಡು ಕರ್ಕೊಂಡೋಗು" ಅನ್ತಾಳೆ. ಅಣ್ಣ ಕೇಳಿದರೆ "ನನ್ನಿಷ್ಟ ಅಲ್ಲಮ್ಮ ಕಳ್ಸಕೆ, ಅಮ್ಮನ್ನ ಕೇಳು" ಅಂತಾನೆ. ತಾಯಿಯನ್ನು ಕೇಳಿದಳು. ಹೋಗಿ ಸಂಜೆ ಹೊತ್ತಿಗೆ ಜೋಪಾನವಾಗಿ ಬನ್ನಿ ಅಂತ ತಾಯಿ ಹೇಳಿದಳು.

ಎಲ್ಲರೂ ಸುರಹೊನ್ನೆ ತೋಟಕ್ಕೆ ಹೋದರು. ಉಯ್ಯಾಲೆ ಹಾಡುತ್ತಾ ಇದ್ದಾಗ ಇದ್ದಕಿದ್ದಂತೆ ದೊರೆ ಮಗಳು ಅತ್ತಿಗೆಗೆ "ನೀನು ಹೂವಿನಗಿಡ ಆಗ್ತೀಯಲ್ಲ ಆಗು" ಎಂದಳು. "ಅಯ್ಯೋ ದೇವರೇ, ಇದ್ಯಾರು ನಿನಗೆ ಹೇಳಿದ್ದು. ನಾನು ನಿಮ್ಮ ಹಾಗೆ ಮನುಷ್ಯಳೇ! ಹುಚ್ಚು ಹುಚ್ಚಾಗಿ ಆಡಬೇಡ" ಎಂದು ಗದರಿಸಿದಳು ಅತ್ತಿಗೆ. "ಆಹಾ... ಅಲ್ಲ ಅತ್ತಿಗೆ ನಮ್ಮುಂದೆ ಆಗದೆ, ಇನ್ನಾರ ಮುಂದೆ ಹೂವಿನಗಿಡ ಆಗಾಕೆ ಹೋಗ್ತೀಯಾ" ಎಂದು ನಿಷ್ಠುರವಾಗಿ ಮಾತಾಡಿದಳು. ವ್ಯಥೆಪಟ್ಟು ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿ ಕೊಟ್ಟು ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ಹುಡುಗಿಯರು ಸರಿಯಾಗಿ ಆಲಿಸದೆ ನಿರ್ಲಕ್ಷದಿಂದ ತಂಬಿಗೆ ನೀರು ಅಡ್ಡಾದಿಡ್ಡಿಯಾಗಿ ಸುರಿದರು ಆಕೆ ಅರ್ಧಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು; ಗುಡುಗುಸಿಡಿಲಿನ ಮಳೆ ಪ್ರಾರಂಭವಾಯಿತು. ಆಗ ಅವರು ಹೂವು ಕೀಳೋ ಸಂಭ್ರಮದಲ್ಲಿ ತೊಟ್ಟು, ಎಲೆ ಸುಳಿ ಕಿತ್ತು, ರೆಂಬೆಯನ್ನೆಲ್ಲ ತರದು ಬಿಟ್ಟರು.

@KTBS NOT TO BE REPUBLISHED

ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಸುರಿದು ಹೊರಟು ಹೋದರು. ಆಕೆ ಮನುಷ್ಯಳಾದಾಗ ಕೈಯಿಲ್ಲದ ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು, ಮೈಯೆಲ್ಲ ಗಾಯವಾಗಿತ್ತು. ಆ ಮಳೆಯ ನೀರಿನಲ್ಲಿ ತೇಲಿಕೊಂಡು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಬಿದ್ದಿದ್ದಳು.

ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದವು. ಹ್ಹಾ..... ಹ್ಹಾ..... ಅಂತ ಕೊರಗುತ್ತ ಬಿದ್ದಿರುವುದನ್ನು ಗಾಡಿಯವನೊಬ್ಬ ನೋಡ್ತಾನೆ. ಒಂದು ದೇಹದ ಮುದ್ದೆ! ಮುಖ ಮಾತ್ರ ಚೆನ್ನಾಗಿತ್ತು. ಬಟ್ಟೆಯಿಲ್ಲ ಬರೆಇಲ್ಲ. ಅಯ್ಯೋ ಮನುಷ್ಯ ಕಣಪ್ಪ ಅಂತ ಹೇಳಿ ತನ್ನ ತಲೆಯಲ್ಲಿದ್ದ ವಸ್ತ್ರ ಹಾಕಿ ಗಾಡಿಮೇಲೆ ಕೂರಿಸಿಕೊಂಡು ಮುಂದೂರಿನ ಹಾಳು ಮಂಟಪದಲ್ಲಿ ಗಾಡಿ ನಿಲ್ಲಿಸಿ, ಅವಳನ್ನು ಆ ಮಂಟಪದಲ್ಲಿಟ್ಟು ಯಾರಾದರು ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ ಅಂತ ಹೇಳಿ ಹೋಯ್ತಾನೆ. ಇತ್ತ ನಿಜವಾದ ಸಂಗತಿ ತಿಳಿದೇ ದೊರೆಮಗ ಬೇಜಾರಾಗಿ ಗೋಸಾಯಿ ದಿರ್ಸು ಹಾಕಿಕೊಂಡು ದೇಶಾಂತರ ಹೊರಟ.


ಇತ್ತ ಮೈಯೆಲ್ಲ ಗಾಯವಾಗಿ ಅರ್ಧಂಬರ್ಧ ದೇಹವಾಗಿದ್ದ 'ಇವಳು' ತನ್ನ ಗಂಡನ ದೊಡ್ಡಕ್ಕಳ ಮದುವೆ ಮಾಡಿಕೊಟ್ಟಿದ್ದ ಪಟ್ಟಣದಲ್ಲಿ ಬಿದ್ದಿದ್ದಳು. ಆ ಪಟ್ಟಣದ ದಾದೇರು, ಗೌಡೇರು ದಿನವಹಿ ನೀರಿಗೆ ಹೋಗಿ ಬರುವಾಗ ಇವಳನ್ನು ನೋಡುತ್ತಿದ್ದು, ಈ ವಿಚಾರನ ರಾಣಿಗೆ ಅಮ್ಮ..... ಅಮ್ಮ, ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ, ಕರೆತರಲೇ ಎನ್ತಾರೆ. ಹೋಗ್ರೆ, ಹೋಗ್ರೆ ಅವಳ ಸೇವೆ ಮಾಡಿ ಅನ್ನ ಹಾಕಬೇಕಾಗುತ್ತೆ ಎಂದು ತಾತ್ಸಾರ ಮಾಡ್ತಾಳೆ. ದಾದೇರು ಗೋಗರೆದದ್ದಕ್ಕೆ ಒಪ್ಪತಾಳೆ. ಅವಳ ಸೇವೆ ನೀವೇ ಮಾಡಬೇಕು ಅಂದಳು ರಾಣಿ. ಆಯಿತು ನಾವೇ ಮಾಡ್ತೀವಮ್ಮ ಎಂದು ಒಪ್ಕೊಂಡು ಅವಳನ್ನು ಕರೆತಂದು ನೀರು ನಿಡಿ ಒಯ್ದು, ಬಟ್ಟೆ ಉಡಿಸಿ, ಅರಮನೆ ಬಾಗಿಲಲ್ಲಿ ಕುಳ್ಳಿರಿಸಿದರು ದಿನವಹಿ ಮೈ ಮೇಲಿನ ಗಾಯಗಳಿಗೆ ಔಷಧ ಹಾಕಿ, ವಾಸಿಮಾಡಿದರು.

ಇತ್ತ ದೊರೆಮಗ ದೇಶದೇಶವೆಲ್ಲ ತಿರುಗಿ ತನ್ನ ಅಕ್ಕನ ಪಟ್ಟಣಕ್ಕೆ ಬಂದ. ಬಂದು ಪಟ್ಟಣದ ಬಾಗಿಲ ಬಳಿ ಕುಳಿತ. ತಿಕ್ಕಲು ಮನುಷ್ಯನ ಹಾಗೆ ಅವನಿಗೆ ಗಡ್ಡಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದೇರು ಇವನನ್ನು ನೋಡಿ ಅರಮನೆಗೆ ಬಂದು ಅಮ್ಮಾವ್ರೇ, ಯಾರೋ ನಿಮ್ಮ ತಮ್ಮ ಕುಳಿತಂಗ ಕಾಣುತ್ತೆ ಅಂತ ಗೋಗರೆದರು. ದುರಬೀನು ಹಾಕಿ ನೋಡಿ, ಕರೆಸಿ, ರಾಣಿ ಚೆನ್ನಾಗಿ ನೋಡಿದಳು. ನನ್ನ ತಮ್ಮನೇ ಇರಬೇಕೆಂದು ಕೊಂಡಳು. ಕೊಪ್ಪ–ಕೊಪ್ಪರಿಗೆ ಎಣ್ಣೆ ಕಾಯಿಸಿ ನೆತ್ತಿಗೆ ತಿಕ್ಕಿಸಿ, ಹಂಡೆ–ಹಂಡೆ ನೀರು ಹಾಕ್ಸಿ, ತನ್ನ ತಮ್ಮನೇ ವರತು ಬೇರಲ್ಲವೆಂದು ತಿಳಿದುಕೊಂಡಳು. ದಿನಕ್ಕೊಂದು ಅಡುಗೆ, ದಿನಕ್ಕೊಂದು ದಿರ್ಸು ಕೊಟ್ಟಳು. ಆದರೆ ಆತ ಮಾತನಾಡಲೇ ಇಲ್ಲ. ಅಷ್ಟು ಹೊತ್ತಿಗೆ ಇಬ್ಬರಿಗೂ ತಾವು ಅಕ್ಕ–ತಮ್ಮ ಅನ್ನೋದು ಚೆನ್ನಾಗಿ ಗೊತ್ತಾಗಿತ್ತು.

©KTBS NOT TO BE REPUBLISHED

ನಾನೆಷ್ಟು ಉಪಚಾರ ಮಾಡಿದರೂ ನನ್ನ ತಮ್ಮ ಮಾತಾಡಲಿಲ್ಲ. ಏನು ಕಾರಣ? ಎಂದು ಯೋಚಿಸಿ. ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳುಹಿಸಿದಳು ಆದರೂ ಯಾರೊಂದಿಗೂ ಮಾತಾಡಲಿಲ್ಲ. ಆಗ ಮಾರನೆಯ ದಿನ ರಾತ್ರಿ ದಾದೇರೆಲ್ಲ ಸೇರಿ ಅರಮನೆಯ ಮುಂದಿದ್ದ ಇವಳಿಗೆ ಶೃಂಗಾರಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಇವನ ಮಂಚದ ಮೇಲೆ ಕೂರಿಸಿದರು. ಇವನು ದಾದೇರ್ನ ನೋಡಲು ಇಲ್ಲ ಮಾತನಾಡಿಸಲೂ ಇಲ್ಲ. ಆದರೆ ರಾತ್ರಿ ಇದು ಮೋಟುಗೈಯಲ್ಲಿ ಇವನ ಕಾಲನ್ನು ಒತ್ತುತ್ತ, ಹೂ.....ಹೂ..... ಅಂತ ಕೊರಗುತ್ತಿತ್ತು. ಆಗ ಎದ್ದು ನೋಡಿದ, ಇವಳೇ ನನ್ನ ಹೆಂಡತಿಯೆಂದು ತಿಳ್ಕೊಂಡ. ನಿಂತಿದ್ದ ಮಾತು ಬಂತು. ಆಗ ಏನು? ಎತ್ತ? ಎಂದು ಅವಳನ್ನು ವಿಚಾರಿಸಿದ. ಆಕೆ "ನಿಮ್ಮ ತಂಗಿಯಿಂದಾಗಿ ಹೀಗಾಯ್ತು" ಎಂದು ಎಲ್ಲವನ್ನು ಹೇಳಿದಳು. "ಅದಕ್ಕೆ ಈಗೇನು ಮಾಡಬೇಕು ?" ಅಂತ ಕೇಳಿದ. "ಹೆಚ್ಚಿಗೇನು ಮಾಡಬೇಡಿ, ಚಿಳ್‌ಉಗುರು ಸೋಕದ ಹಾಗೆ ಎರಡು ತಂಬಿಗೆ ನೀರನ್ನು ತನ್ನಿ" ಎಂದಳು. ಆತ ಯಾರಿಗೂ ಗೊತ್ತಾಗದ ಹಾಗೆ ಎರಡು ತಂಬಿಗೆ ನೀರನ್ನು ತಂದು ಕೊಟ್ಟ. ಎರಡು ತಂಬಿಗೆ ನೀರನ್ನು ಮಂತ್ರಿಸಿ ಕೊಟ್ಟು "ಮೊದಲು ಈ ತಂಬಿಗೆ ನೀರು ಹೊಯ್ದುಬಿಡಿ, ಹೂವಿನಗಿಡ ಆಗ್ತೀನಿ. ಆಗ ಎಲ್ಲಿ ಎಲೆ ಹೋಗಿದೆಯೋ ಅಲ್ಲಿಗೆ ಎಲೆ ಜೋಡಿಸಿ, ಎಲ್ಲಿ ರೆಂಬೆ ಹೋಗಿದೆಯೋ ಅಲ್ಲಿಗೆ ರೆಂಬೆ ಜೋಡಿಸಿ, ಆನಂತರ ಇನ್ನೊಂದು ತಂಬಿಗೆ ನೀರನ್ನು ಸುರಿಯಿರಿ" ಎಂದು ಹೇಳಿ, ದೇವರನ್ನು ನೆನೆದು ಕುಳಿತುಕೊಂಡಳು. ಒಂದು ತಂಬಿಗೆ ನೀರು ಸುರಿದು ನೋಡ್ತಾನೆ, ಕೊಂಬೆ ರಂಬೆನೆಲ್ಲ ತರದುಬಿಟ್ಟಿದ್ದಾರೆ. ಅದನ್ನೆಲ್ಲ ಸರಿಪಡಿಸಿ ಇನ್ನೊಂದು ತಂಬಿಗೆ ನೀರನ್ನು ಸುರಿದನು. ಆಗ ಪುನಃ ಮನುಷ್ಯಳಾಗಿ, ಎದ್ದು ತನ್ನ ಗಂಡನ ಕಾಲಿಗೆ ನಮಸ್ಕಾರ ಮಾಡ್ತಾಳೆ. ನಾದಿನಿಯಾದ ರಾಣಿಯನ್ನೆಬ್ಬಿಸಿ, ಆಕೆಯ ಕಾಲಿಗೂ ನಮಸ್ಕಾರ ಮಾಡಿದಳು. ನಡೆದ ಸಂಗತಿಯನ್ನೆಲ್ಲ ತಿಳಿಸಿದಳು. ಆಕೆ ಈಕೆಯನಪ್ಪಿ ಮುದ್ದಾಡಿ ಅತ್ತಳು. ಕಡೆಗೆ ಚೆನ್ನಾಗಿ ಉಪಚಾರ ಮಾಡಿ ನಾಲ್ಕಾರು ವಾರ ತನ್ನ ಮನೆಯಲ್ಲಿಟ್ಟುಕೊಂಡು, ಅವರಿಬ್ಬರನ್ನು ತನ್ನ ತಂದೆಯ ಪಟ್ಟಣಕ್ಕೆ ಹೋಗುವಾಗ ಬೇಕಾದಷ್ಟು ಐಸಿರಿಯ ಉಡುಗೊರೆ ಕೊಟ್ಟು ಕಳುಸಿದಳು.

NOT TO BE REPUBLISHED ©KTBS



## ಕೃತಿಕಾರರ ಪರಿಚಯ

**ಎ.ಕೆ. ರಾಮಾನುಜನ್:** ಕವಿ, ಚಿಂತಕ, ಪ್ರಾಧ್ಯಾಪಕ, ಜಾನಪದತಜ್ಞ ಹೀಗೆ ವಿವಿಧ ಪ್ರತಿಭೆಗಳ ಸಂಗಮವೆಂದು ಖ್ಯಾತರಾದವರು ಎ.ಕೆ. ರಾಮಾನುಜನ್. ಇವರ ಪೂರ್ಣ ಹೆಸರು **ಅತ್ತಿಪಟ್ ಕೃಷ್ಣಸ್ವಾಮಿ ರಾಮಾನುಜನ್**. ಇವರು **ಮಾರ್ಚ್ ೧೬– ೧೯೨೯ರಲ್ಲಿ ಮೈಸೂರಿನಲ್ಲಿ** ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿ ಗಳಿಸಿದ ಇವರು ದಕ್ಷಿಣಭಾರತ ಮತ್ತು ಅಮೆರಿಕಾದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆಸಲ್ಲಿಸಿ, ೧೯೯೩ರಲ್ಲಿ ನಿಧನರಾದರು.

ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡದಲ್ಲಿ **'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು'**, **'ಕುಂಟೋಬಿಲ್ಲೆ'**, **'ಮತ್ತೊಬ್ಬನ ಆತ್ಮ ಚರಿತ್ರೆ'** ಪ್ರಸಿದ್ಧ ಕೃತಿಗಳು.

ಕನ್ನಡ ವಚನ ಸಾಹಿತ್ಯವನ್ನು **'ಸ್ಪೀಕಿಂಗ್ ಆಫ್ ಶಿವ'** ಎಂದು ಅನುವಾದಿಸಿದ್ದಾರೆ. ಇವರ ಸಾಹಿತ್ಯದಲ್ಲಿನ ಸಾಧನೆಗೆ ೧೯೭೬ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೧೯೮೩ರಲ್ಲಿ ಪ್ರಸಿದ್ಧ **'ಮ್ಯಾಕ್‌ಅರ್ಥರ್ ಫೆಲೋಶಿಪ್'** ಗೌರವ ಸಂದಿದೆ.

ಪ್ರಸ್ತುತ **'ಹೂವಾದ ಹುಡುಗಿ'** ಜನಪದ ಕಥೆಯನ್ನು ಶ್ರೀ ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ **'ಸಾಲು ಸಂಪಿಗೆ ನೆರಳು'** ಕೃತಿಯಿಂದ ಆಯ್ದು ನಿಗದಿಪಡಿಸಿದೆ.

## ಆಶಯ

ಕೂಲಿಮಾಡಿ ತಮ್ಮನ್ನು ಸಾಕುತಿದ್ದ ತಾಯಿಯ ಕಷ್ಟವನ್ನು ನೋಡಿದ ಹೆಣ್ಣು ಮಗಳು ತಾಯಿಗೆ ನೆರವಾಗಲು ತಾನು ಹೂವಿನಗಿಡವಾಗಿ ಹೂಮಾರಿ ಹಣವನ್ನು ಸಂಗ್ರಹಿಸುವ, ಈ ಹೂವಿನ ರಹಸ್ಯವನ್ನು ತಿಳಿದು ಆಕೆಯನ್ನೇ ಮದುವೆಯಾಗುವ ದೊರೆಮಗ. ಹೂವಿನ ಗಿಡವಾಗುವ ಹುಡುಗಿಯು ತನ್ನ ಗಂಡನ ತಂಗಿಯಿಂದಲೇ ಕಷ್ಟಕ್ಕೆ ಸಿಲುಕಿ ಯಾತನೆಯನ್ನನುಭವಿಸಿ, ಕೊನೆಗೆ ಎಲ್ಲಾ ತೊಂದರೆಗಳಿಂದ ಪಾರಾಗಿ ದಂಪತಿಗಳು ಒಂದಾಗುವ ಜನಪದ ಸೊಗಡಿನ ಕಥೆಯಿದು. ಇಲ್ಲಿ ಹೆಣ್ಣಿನ ಸಹನೆ, ದಾಂಪತ್ಯದ ಅನ್ಯೋನ್ಯತೆ, ಪ್ರೀತಿ, ಸಹಕಾರ ಮನೋಭಾವಗಳ ಮೌಲ್ಯವನ್ನು ತಿಳಿಸುವ ಆಶಯ ಇಲ್ಲಿದೆ.

## ಪದಗಳ ಅರ್ಥ

ಐಸಿರಿ–ಐಶ್ವರ್ಯ, ಸಂಪತ್ತು; ಕುತೂಹಲ–ಅನುಭವಿಸುವ ತಿಳಿದುಕೊಳ್ಳುವ ಹಂಬಲ, ಆಶ್ಚರ್ಯ, ಉತ್ಸುಕತೆ; ಕೊಪ್ಪರಿಗೆ–ಕಡಾಯಿ; ಗುಮ್ಮಾಗಿ–ಸುಮ್ಮನೆ, ಯಾರ ಬಳಿಯಲ್ಲಿ ಮಾತನಾಡದೇ; ಗೋಸಾಯಿ–ಸನ್ಯಾಸಿ, ಬೈರಾಗಿ; ತಿಕ್ಕಲು–ಬುದ್ಧಿಭ್ರಮಣೆ, ಹುಚ್ಚು; ದಾದೇರು–ಸೇವಕಿಯರು; ದಿರ್ಸು–ವಸ್ತ್ರ, ಬಟ್ಟೆ; ಮೊಗೆ–ಬೊಗಸೆ ತುಂಬ; ಮೋರಿ–ಚರಂಡಿ, ಗಟಾರ; ಯಥಾಸ್ಥಿತಿ–ಮೊದಲು ಇದ್ದ ರೀತಿ; ಸಂಭ್ರಮ–ಸಂತೋಷ; ಸುರಹೊನ್ನೆ–ಒಂದು ಜಾತಿಯ ಹೂವಿನ ಮರ, ಪನ್ನಾಗ;

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು?

೨. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು?

೩. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದ?

೪. ದೊರೆಯ ಚಿಕ್ಕಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು?

೫. ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಏನು ಉಡುಗೊರೆ ನೀಡಿದಳು?

© KTBS NOT TO BE REPUBLISHED

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿ.**

೧. ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ದೊರೆಮಗ ಹೇಗೆ ಕಂಡು ಹಿಡಿದನು?

೨. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು?

೩. ದೊರೆಯ ಮಗ ದೇಶಾಂತರ ಹೋಗಲು ಕಾರಣವೇನು?

೪. ಅರ್ಧಂಬರ್ಧ ದೇಹವಾಗಿದ್ದವಳು ಹೇಗೆ ರಾಣಿಯ ಅರಮನೆ ಸೇರಿದಳು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯದಲ್ಲಿ ಉತ್ತರಿಸಿ.**

೧. ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ಮಾಡಿದ ದ್ರೋಹವೇನು?

೨. ದೊರೆಯ ಮಗ ತನ್ನ ಹೆಂಡತಿಯನ್ನು ಹೇಗೆ ಪುನಃ ಪಡೆದನು?

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು"

೨. "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?"

೩. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ"

೪. "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ,"

**ಉ. ಖಾಲಿ ಬಿಟ್ಟ ಜಾಗವನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ನೋಡಕ್ಕಯ್ಯ ನಾನಿಲ್ಲಿ ________ ಧ್ಯಾನಮಾಡಿ ಕುತುಕೋತಿನಿ.

೨. ಅವರು ಮಾತಾಡಲೇ ಇಲ್ಲವಲ್ಲ, ಮತ್ತೇಕೆ ________ ಯಾದರು.

೩. ನರಮನುಷ್ಯರು ________ ಆಗೋದುಂಟೆ ?

೪. ದಿನವಹಿ ಮೈಮೇಲಿನ ಗಾಯಗಳಿಗೆ ________ ಹಾಕಿ ವಾಸಿಮಾಡಿದರು.

NOT TO BE REPUBLISHED @KTBS

## ಪ್ರಾಯೋಗಿಕ ಭಾಷಾಭ್ಯಾಸ

**೧. ಕೊಟ್ಟಿರುವ ಪದಗಳಲ್ಲಿ ರೂಢ, ಅಂಕಿತ ಮತ್ತು ಅನ್ವರ್ಥನಾಮಗಳನ್ನು ವಿಂಗಡಿಸಿ ಬರೆಯಿರಿ.**

ಕಾಲ ಕಾಳಿ ದೇವಸ್ಥಾನ ವ್ಯಾಪಾರಿ ರಾಜ ಅಡಗೂರು

**೨. ಕೊಟ್ಟಿರುವ ಪದಗಳಲ್ಲಿರುವ ಪ್ರಥಮ ಪುರುಷ, ಮಧ್ಯಮ ಪುರುಷ ಮತ್ತು ಉತ್ತಮ ಪುರುಷ ಪದಗಳನ್ನು ಆರಿಸಿ ಬರೆಯಿರಿ.**

ಇವನು ನೀನು ಅವರು ನಾನು ಅವಳು ಇವಳು

## ಚಟುವಟಿಕೆ

**೧. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ.**

ಧ್ಯಾನಮಾಡು ಬಡವರು ಸಂಪಾದನೆ ಉಡುಗೊರೆ

**೨. ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

೧. ನೀನು ಹೂ ತಕ್ಕೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ.

೨. ದಾದೇರು ಗೋಗರೆದದ್ದಕ್ಕೆ ಒಪ್ಕತಾಳೆ.

೩. ತಾಯಿ ಅಣ್ಣನ ಕೇಳ್ಕೊಂಡು ಕರ್ಕೊಂಡೋಗು ಅನ್ತಾಳೆ.

## ಪೂರಕ ಓದು

೧. ಎ. ಕೆ. ರಾಮಾನುಜನ್ ರವರು ಸಂಪಾದಿಸಿರುವ **'ಸಾಲು ಸಂಪಿಗೆ ಮರದ ನೆರಳು'** ಜನಪದ ಕಥೆಗಳನ್ನು ಓದಿರಿ.

೨. ಡಾ. ಜೀ.ಶಂ.ಪರಮಶಿವಯ್ಯ ಅವರು ಸಂಗ್ರಹಿಸಿರುವ ಆಯ್ದ ಜನಪದ ಕಥೆಗಳನ್ನು ಓದಿರಿ.

೩. ಡಾ. ಡಿ.ಕೆ. ರಾಜೇಂದ್ರ ಅವರು ಸಂಪಾದಿಸಿರುವ ಬೆದರುಗೊಂಬೆ ಮತ್ತು ಇತರ ಜನಪದ ಕಥೆಗಳನ್ನು ಓದಿರಿ.

@KTBS NOT TO BE REPUBLISHED

# ೬. ತಲಕಾಡಿನ ವೈಭವ

K2L7A9

– ಹಿರೇಮಲ್ಲೂರು ಈಶ್ವರನ್

**ಪ್ರವೇಶ :** ನಾವು ಇಂದು ಧಾರ್ಮಿಕ ಭಾವನೆ, ಪ್ರಕೃತಿವೀಕ್ಷಣೆ, ಶೈಕ್ಷಣಿಕ ಅರಿವು, ಮನೋರಂಜನೆ, ಮೊದಲಾದ ಉದ್ದೇಶಗಳಿಗಾಗಿ ದೇಶ ವಿದೇಶಗಳ ಪ್ರವಾಸ ಕೈಗೊಂಡು ಲೋಕಾನುಭವ ಪಡೆಯುತ್ತಿದ್ದೇವೆ. ತಾವು ಪಡೆದ ಅನುಭವಗಳನ್ನು ಬರೆದು ಕಥಾ ರೂಪದಲ್ಲಿ ಪ್ರಕಟಿಸಿ ಇತರರಿಗೂ ಮಾರ್ಗದರ್ಶನವಾಗುವಂತೆ ಮಾಡುವ ಕಾರ್ಯವನ್ನು ಕೆಲ ಸಾಹಿತಿಗಳು ಕವಿಗಳು ಮಾಡುತ್ತಾ ಬಂದಿದ್ದು, ಇಂದು ಕನ್ನಡ ಸಾಹಿತ್ಯಚರಿತ್ರೆಯಲ್ಲಿ 'ಪ್ರವಾಸ ಕಥನ'ವು ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದಿದೆ. ಇದು ವಾಚಕರಿಗೆ ಪ್ರವಾಸದ ಪರೋಕ್ಷ ಮಾಹಿತಿಯನ್ನು ದಟ್ಟವಾಗಿ ಕಟ್ಟಿಕೊಡುತ್ತವೆ. ಈ ಪ್ರವಾಸ ಸಾಹಿತ್ಯವನ್ನು ಸ್ಥಳೀಯಪ್ರವಾಸ, ದೇಶೀ ಪ್ರವಾಸ ಮತ್ತು ವಿದೇಶಿ ಪ್ರವಾಸವೆಂದು ಮೂರು ಭಾಗಗಳಾಗಿ ಮಾಡಿ ಅಧ್ಯಯನ ಮಾಡುವಷ್ಟು ಸಮರ್ಥವಾಗಿ ಪ್ರವಾಸಸಾಹಿತ್ಯ ಬೆಳೆದಿದೆ. ಪ್ರಕೃತ ಪ್ರವಾಸಕಥನವು ಸ್ಥಳೀಯ ಪ್ರವಾಸವಾಗಿದ್ದು ತಲಕಾಡಿನ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸ್ಥಳಪುರಾಣವನ್ನು ತಿಳಿಸುತ್ತಾ ಸಮಗ್ರ ಇತಿಹಾಸವನ್ನು ಓದುಗರ ಮನಮಿಡಿಯುವಂತೆ ವಿವರಿಸಲಾಗಿದೆ.

© KTBS NOT TO BE REPUBLISHED



೧೯೫೦ನೆಯ ಇಸವಿ ಅಕ್ಟೋಬರ್ ತಿಂಗಳು ಮಂಗಳವಾರ ೨೦ನೆಯ ತಾರೀಖು, ಶಿವನ ಸಮುದ್ರದ ಪ್ರವಾಸಿಗರ ನಿಲ್‌ಮನೆಯಲ್ಲಿ ಕುಳಿತುಕೊಂಡು ಈ ದಿನದ ಪಯಣದ ವಿವರ ಬರೆಯುತ್ತಿದ್ದೇನೆ. ಈಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿದೆ. ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ. ನನ್ನ ಬಳಿ ಈ ತಂಗು ಮನೆಯಲ್ಲಿ ನನ್ನ ಗೆಳೆಯರು, ಕನ್ನಡದ ಯಾತ್ರಿಕರು ಮಲಗಿಕೊಂಡಿದ್ದಾರೆ. ಇಂದು ದಿನವೆಲ್ಲ ಅಲೆದು ಅಲೆದು ಅವರು ದಣಿದು ನಿದ್ರೆ ಹೋಗಿದ್ದಾರೆ.

ಶಿವನಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು. ನಿಲ್ಮನೆಯನ್ನು ಕೂಡಲೆ ಖಾಲಿ ಮಾಡಿಸಿದರು. ಹಾಸಿಗೆ ಹಾಸಿಕೊಟ್ಟರು. ಊಟ ಉಪಚಾರದ ಬಗೆಗೆ ಕೇಳಿದರು. ಕೊನೆಗೆ ಹೋಗುವಾಗ ‘ಗುಡ್‌ನಾಯಿಟ್’ ಅಂದರು. ಸುಬ್ರಹ್ಮಣ್ಯಮ್ ನೌಕರನೇನೋ ಅಹುದು. ಆದರೆ ಅವರಿತ್ತ ಸ್ವಾಗತ, ವಿಶ್ವಾಸದ ನುಡಿ ನೆನೆದರೆ ನಾವು ಸುಬ್ರಹ್ಮಣ್ಯನಿಗಿಂತ ಸಣ್ಣವರು ಎನ್ನುವಲ್ಲಿ ಸಂದೇಹವಿಲ್ಲ!

ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ, ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ, ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಡಿ ಮಡಿದ ವೀರರ ಉಜ್ವಲ ಚರಿತ್ರೆ ಇದೆ. ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ. ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ.ಶ. ೫೦೦ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು. ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ಹತ್ತನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ತಲಕಾಡು ಪುಣ್ಯಭೂಮಿ. ಅವರೊಂದಿಗೆ ಕೊನೆಯವರೆಗೂ ಒಂದು ಹಿರಿಯ ಜೀವ ಇದ್ದಿತು. ಅವನ ಹೆಸರು ಚಾವುಂಡರಾಯ. ಆತ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿ. ಅವನನ್ನು ಜನ ಹೆಸರು ಹಿಡಿದು ಕರೆಯುತ್ತಿರಲಿಲ್ಲ. ‘ರಾಯ’, ‘ಅಣ್ಣ’ ಎಂದು ಸಂಬೋಧಿಸುತ್ತಿದ್ದರು. ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತ: ಕವಿ. ‘ಚಾವುಂಡರಾಯ ಪುರಾಣ’ ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ, ಅವನು ಕನ್ನಡಕ್ಕೆ ಕೊಟ್ಟ ಕಾಣಿಕೆ.

ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ತಂದೆತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿ ಬಂದನು. ಏನು ನಂಬಿ ಬಂದ? ತಲಕಾಡಿನ ಮಣ್ಣನ್ನು! ಇಲ್ಲಿ ರಾಯನಿದ್ದಾನೆ. ಅತ್ತಿಮಬ್ಬೆ ಇದ್ದಾಳೆ. ಅಜಿತಸೇನ ಗುರುಗಳ ಶಿಷ್ಯವೃಂದವಿದೆ. ಅದು ಕಲಾಶ್ರೀ ವಿಹರಿಸುವ ನಂದನವನ.

@KTBS NOT TO BE REPUBLISHED

ಗಂಗವಾಡಿಯು ಹಬ್ಬಿ, ಕನ್ನಡದ ಬಾವುಟವನ್ನು ಬಿತ್ತರದ ಬಾನಿನೆಡೆ ಹಾರಿಸುತ್ತ "ಓಹೋ! ಕನ್ನಡನಾಡು, ಆಹಾ! ಕನ್ನಡನುಡಿ, ಹಾರಿಸಿ, ತೋರಿಸಿ ಕೆಚ್ಚೆದೆಯ ಬಾವುಟ" ಎಂದು ಹಾಡುತ್ತಿರುವ ಹೊತ್ತಿಗೆ ಚೋಳ ದೇಶದ ಕಡೆಯಿಂದ ಬಿರುಗಾಳಿ ಬೀಸಿತು. ಚೋಳರು ಬಂದರು. ಗುಡಿಗೋಪುರಗಳನ್ನು ಕಟ್ಟಿಸಿದರು. ರಾಜೇಶ್ವರ, ವೈಕುಂಠನಾರಾಯಣ, ಮರಳೇಶ್ವರ, ಪಾತಾಳೇಶ್ವರ, ವೈದ್ಯೇಶ್ವರ ಗುಡಿಗಳನ್ನು ಕಟ್ಟಿಸಿದರು. ೧೧೧೬, ವಿಷ್ಣುವರ್ಧನ ದೊರೆಯ ಆಳ್ವಿಕೆ ಪ್ರಾರಂಭವಾಯಿತು. ವಿಷ್ಣುವರ್ಧನ ದೊರೆಯ ಕಾರ್ಯವನ್ನು ಕೇಳುತ್ತೀರಾ? ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಮನೆಗೆ ಕಳುಹಿಸಿ ಹೊಯ್ಸಳರ ಕನ್ನಡ ಬಾವುಟವನ್ನು ಹಾರಿಸಿ, ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿಕಟ್ಟಿ ಮನೆಗೆ ಬಂದು ಗೆಲುವಿನ ಕಥನವನ್ನು ಬಣ್ಣಿಸಿಯೇ ಬಣ್ಣಿಸಿದರು. ಹೊಯ್ಸಳರು ಹೋದ ನಂತರ ವಿಜಯನಗರದ ರಾಯರು ಬಂದರು. ಮೈಸೂರಿನ ಒಡೆಯರು ಬಂದರು. ಆದರೆ ಯಾರು ಬಂದರೇನು? ಯಾರು ಹೋದರೇನು? ತಿರುಗುವ ಕಾಲಚಕ್ರವನ್ನು ನಿಲ್ಲಿಸುವುದಕ್ಕೆ ಯಾರಿಗೆ ಸಾಧ್ಯ? ತಲಕಾಡಿಗೆ ಕೆಟ್ಟ ಹೊತ್ತು ಕಾಯ್ದುಕೊಂಡು ಕುಳಿತಿದೆ. ತಪ್ಪಿಸಲು ಏನು ತಪಸ್ಸು ಮಾಡಿದರೂ ಸಾಧ್ಯವೇ ಇಲ್ಲವಾಗಿದೆ .....!

ನಾ ಮುಂದೆ ನೀ ಮುಂದೆ ಎಂದು ತಲಕಾಡಿನ ಕಡೆಗೆ ಪ್ರವಾಸಿಗರನ್ನು ಹೊತ್ತುಕೊಂಡೊಯ್ಯುತ್ತಿದ್ದ ಎರಡು ಮೋಟಾರುಗಳು ಓಡುತ್ತಿರುವಾಗ ನನ್ನ ಕಣ್ಮುಂದೆ ತಲಕಾಡಿನ ನೆಲದ ಮೇಲೆ ವೈಭವದಿಂದ ರಾಜ್ಯವಾಳಿದವರ ಕಥೆ ಹಕ್ಕಿಯಂತೆ ಚಲಿಸಿ ಪಾತರಗಿತ್ತಿಯಂತೆ ಕುಣಿದು ಮೃಗಜಲದಂತೆ ಮಾಯವಾಯಿತು. ಇದು ಕೀರ್ತಿನಾರಾಯಣನ ದೇಗುಲ. ಕ್ರಿಸ್ತಶಕಾಬ್ದ ೧೧೧೭ನೆಯ ವರ್ಷದಲ್ಲಿ ವಿಷ್ಣುವರ್ಧನದೇವ ತಲಕಾಡಿನ ವಿಜಯದ ನಿಮಿತ್ತ ವೀರನಾರಾಯಣನ ಹೆಸರಿನಲ್ಲಿ ಗುಡಿ ಕಟ್ಟಿಸಿದನು.

ಕೀರ್ತಿನಾರಾಯಣ ದೇವಾಲಯದ ಆಚೆಗೆ ೧೫೦ ಗಜದ ಅಂತರದಲ್ಲಿ ವೈದ್ಯೇಶ್ವರ ದೇವಾಲಯ! ಈ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು. ದೇವಾಲಯದ ಹೊರವಲಯದಲ್ಲಿ ಇರುವ ಕಲಶಗಳೂ ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ದೇಶಿಸುವುವು. ಇವು ಶೃಂಗೇರಿಯ ವಿದ್ಯಾಶಂಕರ ದೇಗುಲ, ಹಂಪೆಯ ಹಜಾರರಾಮರ ಗುಡಿ, ತಾಡಪತ್ರಿಯ ಲೇಪಾಕ್ಷಿ ಮಂದಿರ, ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ.

NOT TO BE REPUBLISHED @KTBS

ಸಂಜೆ ಧಾವಿಸಿ ಬರುತ್ತಲಿದ್ದಿತು. ಕಪ್ಪುಪರದೆ ಇಳೆಯ ಮೇಲೆ ರಭಸದಿಂದ ಇಳಿಯುತ್ತಲಿದ್ದಿತು. ನಾವಾಗ ಪಾತಾಳೇಶ್ವರನ ಗುಡಿಯಿಂದ ಮರಳೇಶ್ವರ ದೇಗುಲದೆಡೆಗೆ, ಮರಳೇಶ್ವರನಿಂದ ಗೋಕರ್ಣೇಶ್ವರ ಅಲ್ಲಿಂದ ವೀರಭದ್ರನೆಡೆಗೆ ಮರಳಿನಲ್ಲಿ ಸಿಕ್ಕಿ ಬೀಳುತ್ತಿದ್ದ ಕಾಲುಗಳನ್ನು ಕಸುವಿನಿಂದ ಕೀಳುತ್ತ ಮುಂದಕ್ಕೆ ಬಾಗಿ ಉದ್ವೇಗ ಅನುತಾಪಗಳನ್ನು ಬೆಂದ ಹೃದಯದಲ್ಲಿರಿಸಿಕೊಂಡು ನಾಗಾಲೋಟಕ್ಕೆ ತೊಡಗಿದ್ದೆವು.

ಮೂರು ಮೈಲುಗಳಾಚೆ ವಿಜಯಪುರ, ವಿಜಯಪುರದ ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ನಂಬಿ ಆ ದಾರಿಯಲ್ಲಿ ನಡೆದಾಗ ಮೂಡಣ ದಿಗಂತದಲ್ಲಿ ಕಾರ್ತಿಕ ಮಾಸ ಹುಣ್ಣಿಮೆಯೆಡೆಗೆ ನಡೆದಿದ್ದ ಚಂದ್ರಮ ಮೆಲ್ಲಮೆಲ್ಲಗೆ ಮೇಲೇರುತ್ತಿದ್ದ. ದಾರಿ ಕೊರಕಲು, ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಹಳ್ಳವೊಂದು ಇದಿರಾಯಿತು. ಮೋಟಾರು ನಿಂತೇ ಬಿಟ್ಟಿತು. ಸಾರಥಿಗೆ ಹೇಳಿದೆ! ಅರ್ಕೇಶ್ವರ ದೇವಾಲಯ ಕಾಣದೆ ಹೋದರೆ ಮನಸ್ಸಿನಲ್ಲಿ ಕೊನೆಯವರೆಗೂ ಅತೃಪ್ತಿ ಉಳಿಯುತ್ತದೆ. ಏನು ಮಾಡಲಿ?

ನನ್ನ ಮನದ ಇಂಗಿತವನ್ನು ಅರಿತ ಸಾರಥಿ "ಬನ್ನಿ, ನಾವಿಬ್ಬರೂ ಮುಂದಕ್ಕೆ ಹೋಗಿ ನೋಡಿಕೊಂಡು ಬರೋಣ, ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದುಕೊಂಡು ಹೋಗೋಣ" ಎಂದನು. ಇಬ್ಬರೂ ಹೋದೆವು. ರಾತ್ರಿ ಒಂದು ಗಂಟೆ. ಎಡಬಲಕ್ಕೆ ಶಾಲಿವನ, ನರಿಗಳು ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ ಹಿಮ್ಮೇಳದವರಂತೆ ಕೂಗುತ್ತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡ ಮರಗಳ ಪೊದೆಯಲ್ಲಿ ಏನೋ ಬೆಳ್ಳಬೆಳ್ಳಗೆ, ಮಸುಕುಮಸುಕಾಗಿ ಕಂಡಿತು. ಎದೆ ಜೋರಿನಿಂದ ಹಾರತೊಡಗಿತು. ಧಾವಿಸಿದೆವು, ಸಮೀಪಿಸಿದೆವು, ಯುರೇಕಾ! ಯುರೇಕಾ!

ಆನಂದದ ಆವೇಶದಲ್ಲಿ ನನ್ನ ಯಾತ್ರಿಕರಿಗೆ ಕೇಳುವಂತೆ ಚೀರು ಧ್ವನಿಯಿಂದ "ಬರ್ರೋ ಗುಡಿ ಸಿಕ್ಕಿತು. ಬರ್ರೋ ದೇವಾಲಯ ದೊರಕಿತು", ಎಂದು ಕೂಗಿದೆ. ಇವರೆಲ್ಲ ಬಂದರು, ನೋಡಿದೆವು! ಅರ್ಕೇಶ್ವರ ಲಿಂಗ ತಲಕಾಡಿನ ಪಂಚಲಿಂಗಕ್ಕೆ ಸೇರಿದ್ದು. ಗೋಕರ್ಣ ತೀರ್ಥದಲ್ಲಿ ಮಿಂದು ಐದೂ ಲಿಂಗಗಳನ್ನು ಒಂದೊಂದು ಸಾರಿ ಸಂದರ್ಶಿಸಿ ವೈದ್ಯೇಶ್ವರ ಲಿಂಗಕ್ಕೆ ವರದಿಯನ್ನೊಪ್ಪಿಸಿ ಸಂಜೆ ಮುಗಿಯುವುದರೊಳಗೆ ಪಂಚಲಿಂಗಗಳ ದರ್ಶನವನ್ನು ಪೂರೈಸಿದರೆ ಶ್ರದ್ಧಾವಂತನಾದ ಭಕ್ತನಿಗೆ ಮುಕ್ತಿ ದೊರಕುವುದೇ ನಿಜ!

ನಾವೀಗ ಹೊಯ್ಸಳರ ನಾಡಿನಲ್ಲಿ ಸಂಚರಿಸುತ್ತಿದ್ದೇವೆ. ಕಪಿಲಾನದಿಯನ್ನು ಆ ಕಡೆಗೆ ಬಿಟ್ಟು ಈಚೆಗೆ ಉತ್ತರಾಭಿಮುಖವಾಗಿ ಹೊರಟು ಮುಂದಕ್ಕೆ ಬಂದರೆ ಹೊಯ್ಸಳ ಬಲ್ಲಾಳರ ಅಭಿಮಾನದ ಕಲಾಸಂಪದವಾಗಿ ನಿಂತಿರುವ ಅನರ್ಘ್ಯ ವಾಸ್ತುಶಿಲ್ಪ ಕಲಾರತ್ನವೊಂದನ್ನು ಕಾಣುತ್ತೇವೆ. ಅದೇ ಸೋಮನಾಥ ದೇವಾಲಯ.


©KTBS NOT TO BE REPUBLISHED

ಹೊಯ್ಸಳ ಬಲ್ಲಾಳರು ಕನ್ನಡದ ಕುಲದೀಪಕರು. ಕ್ರಿಸ್ತಶಕಾಬ್ದ ಸಾವಿರದ ಇಸವಿಯಿಂದ ಹದಿಮೂರು ನೂರರವರೆಗೆ ಎಂದರೆ ಅಖಂಡ ಮೂನ್ನೂರು ವರ್ಷಗಳ ಪರ್ಯಂತ ಕನ್ನಡದ ನಂದಾದೀವಿಗೆಯನ್ನು ಹಚ್ಚಿ ನಾಡುನುಡಿಯನ್ನು ಸಂರಕ್ಷಿಸಿದರು. ಈ ವಂಶದ ಮೂಲಪುರುಷನ ಹೆಸರು ಸಳ. ಮೂಡಿಗೆರೆ ತಾಲೂಕಿನಲ್ಲಿರುವ ಸೊಸೆವೂರು ಇವನ ಜನ್ಮಸ್ಥಳ. ಆಗಿನ ಸೊಸೆವೂರಿಗೆ ಈಗ **ಅಂಗಡಿ** ಎಂದು ಮರುನಾಮಕರಣವಾಗಿದೆ. ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ, ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತಂದು ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತ ಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ **ಹೊಯ್‌ಸಳ** ಎಂದು ಆದೇಶವಿತ್ತನೆಂದೂ ಸಳ ಕೂಡಲೆ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೊಯ್ದನೆಂದೂ ತಿಳಿಯುವುದು. ಅಂದಿನಿಂದ ಸಳನ ಮನೆತನಕ್ಕೆ **ಹೊಯ್ಸಳ** ಎಂಬ ಹೆಸರು ಬಂದಿತು.

ನಮ್ಮ ದೇಗುಲಗಳೇ ನಮ್ಮ ರಾಷ್ಟ್ರದ ಚರಿತ್ರೆಯ ಹೆಗ್ಗುರುತು. ಇಂತಹ ದೇಗುಲಗಳ ಅಭ್ಯಾಸದಿಂದ ನಮ್ಮ ಬದುಕು ನಯವಾಗುತ್ತದೆ, ನಿರ್ಮಲವಾಗುತ್ತದೆ. ಕವಿಕಂಡ ಸತ್ಯ, ಶಿಲ್ಪಿ ಕಂಡ ಸೌಂದರ್ಯಗಳೇ ನಮ್ಮ ಬಾಳಿನ ಅಲಂಕಾರ.

NOT TO BE REPUBLISHED ©KTBS

## ಕೃತಿಕಾರರ ಪರಿಚಯ



**ಹಿರೇಮಲ್ಲೂರು ಈಶ್ವರನ್** (೧೧.೦೧.೧೯೨೨ – ೨೨.೦೬.೧೯೯೮) **ಅವರ ಊರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರು.** ಸಮಾಜಶಾಸ್ತ್ರಜ್ಞರಾದ ಇವರು ಅಂತಾರಾಷ್ಟ್ರೀಯ ಪುರಸ್ಕೃತ ಸಾಹಿತಿ. ಲಿಂಗರಾಜ ಮಹಾವಿದ್ಯಾಲಯದಲ್ಲಿ ಎಂ.ಎ. ಪದವಿ ಪಡೆದ ಇವರು ಕೊಲ್ಲಾಪುರದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಆರಂಭಿಸಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಶ್ರೀಯುತರು ಕೆನಡಾದ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. **ಕವಿ ಕಂಡ ನಾಡು** (ಪ್ರವಾಸ ಕಥನ), **ವಿಷ ನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕತೆ, ಹಾಲಾಹಲ, ರಾಜಾರಾಣಿ ದೇಖೋ, ಶಿವನ ಬುಟ್ಟಿ, ತಾಯಿನೋಟ** ಮೊದಲಾದವು ಇವರ ಕೃತಿಗಳು. ಶ್ರೀಯುತರ **ಹರಿಹರನ ಕೃತಿಗಳು ಒಂದು ಸಂಖ್ಯಾ ನಿರ್ಣಯ** ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರಕಿದೆ.

**ಹಿರೇಮಲ್ಲೂರು ಈಶ್ವರನ್** ಅವರ **ಕವಿಕಂಡ ನಾಡು ಪ್ರವಾಸ ಕಥನ** ದಿಂದ ಪ್ರಕೃತ ಭಾಗವನ್ನು ಆರಿಸಿ ಸಂಪಾದಿಸಿ ನಿಗದಿಪಡಿಸಿದೆ.

## ಆಶಯ

ಕರ್ನಾಟಕ, ಶ್ರೀಗಂಧ ಮತ್ತು ಚಂದನಗಳ ನಾಡು; ಚಿನ್ನದ ಖನಿ ಎಂಬ ಪ್ರತೀತಿ ಇದೆ. ಚಾಲುಕ್ಯ, ಹೊಯ್ಸಳ ಮುಂತಾದ ಶೈಲಿಗಳ ದೇವಾಲಯಗಳು ಹೇರಳವಾಗಿರುವುದರಿಂದ ಕರ್ನಾಟಕ ದೇವಾಲಯಗಳ ನಾಡೂ ಹೌದು. ಕರ್ನಾಟಕದ ತಲಕಾಡು ಪ್ರಕೃತಿ ಸೌಂದರ್ಯದಿಂದ ಕೂಡಿರುವುದರ ಜತೆಗೆ ರಾಜಮನೆತನಗಳ ವೈಭವಗಳನ್ನೂ ದೇವಾಲಯಗಳ ಸೌಂದರ್ಯವನ್ನೂ ಹೊಂದಿರುವುದು ವಿಶೇಷ. ಅದರಲ್ಲೂ ಪಂಚ ಶಿವಾಲಯಗಳು ಆಸ್ತಿಕರ ಚಿತ್ತವನ್ನು ಗಮನ ಸೆಳೆಯುವಲ್ಲಿ ಮಹತ್ತ್ವದ ಪಾತ್ರವಹಿಸಿವೆ. ಪ್ರವಾಸಿಗರ, ಯಾತ್ರಾರ್ಥಿಗಳ, ವಾಸ್ತುತಜ್ಞರ ಕೇಂದ್ರಬಿಂದು ತಲಕಾಡಿನ ಚಿತ್ರಣವನ್ನು ಈ ಗದ್ಯಭಾಗ ಒಳಗೊಂಡಿದೆ.

* * *

## ಪದಗಳ ಅರ್ಥ

ಅನರ್ಘ್ಯ – ಶ್ರೇಷ್ಠ
ತಾಸು – ಗಂಟೆ
ಪಡುವಣ – ಪಶ್ಚಿಮ
ಬಣ್ಣಿಸು – ವರ್ಣಿಸು
ಮಸುಕು – ಅಸ್ಪಷ್ಟ
ವಾಸ್ತುಶಿಲ್ಪ – ಕಟ್ಟಡ ರಚನೆಯ ಕಲೆ
ಸಂಬೋಧಿಸು– ಕುರಿತು ಹೇಳು
ಉದ್ರೇಕ – ಅತಿಶಯ, ಮೇರೆಮೀರು
ಕೆಚ್ಚೆದೆಯ – ಭಯವಿಲ್ಲದ ಮನಸ್ಸಿನ
ತಂಗುಮನೆ – ಪ್ರವಾಸಿಗರ ವಾಸ್ತವ್ಯಕ್ಕಾಗಿ ಇರುವ ಮನೆ
ನಂದನವನ – ದೇವೇಂದ್ರನ ಉಪವನ, ಸಂತಸ ನೀಡುವ ಪ್ರದೇಶ
ನಿಲ್‌ಮನೆ – ಪ್ರವಾಸಿಗರು ಉಳಿದುಕೊಳ್ಳುವ ಮನೆ, ಅತಿಥಿಗೃಹ
ಬಿರುಗಾಳಿ – ಜೋರಾಗಿ ಬೀಸುವ ಗಾಳಿ
ಸಾರಥಿ – ರಥವನ್ನು ಓಡಿಸುವವ, ವಾಹನ ಚಾಲಕ;
ಉಜ್ವಲ – ಶ್ರೇಷ್ಠ
ನೇಸರು – ಸೂರ್ಯ
ಪಾತರಗಿತ್ತಿ – ಚಿಟ್ಟೆ, ಪತಂಗ
ಬಿತ್ತರ – ವಿಸ್ತಾರ
ಮೃಗಜಲ – ಬಿಸಿಲ್ಗುದುರೆ, ಮರೀಚಿಕೆ
ಸಂಪದ – ಸಂಪತ್ತು, ಐಶ್ವರ್ಯ
ಸ್ಮಾರಕ – ನೆನಪಿಗಾಗಿ ಕಟ್ಟಿದ್ದು.

## ಟಿಪ್ಪಣಿ

**ಮೃಗಜಲ:** ವಿಶಾಲ ಮರುಭೂಮಿಯಲ್ಲಿ, ಸಮತಟ್ಟಾದ ಬಟ್ಟಬಯಲಿನಲ್ಲಿ ನೀರಿಲ್ಲದಿದ್ದರೂ ಬಿಸಿಲಿನ ಝಳದಿಂದಾಗಿ ದೂರದಿಂದ ನೋಡುವಾಗ ನೀರಿದ್ದಂತೆ ಭಾಸವಾಗುವುದು. ಇದನ್ನು ಕಂಡು ಬಿಸಿಲಿನ ಝಳಕ್ಕೆ ಕಂಗಾಲಾಗಿ ಬಾಯಾರಿದ ಪ್ರಾಣಿಗಳು (ಮೃಗಗಳು) ನೀರು ಸಿಕ್ಕಿತೆಂದು ಸಂತೋಷದಿಂದ ಬಂದಾಗ ನಿರಾಶೆಗೆ ಒಳಗಾಗುತ್ತವೆ. ಮತ್ತೆ ಮುಂದೆ ನೋಡುತ್ತವೆ. ಆಗ ಅನತಿ

@KTBS NOT TO BE REPUBLISHED

ದೂರದಲ್ಲಿ ನೀರಿದ್ದಂತೆ ಕಂಡು ಓಡುತ್ತವೆ. ಅಲ್ಲಿಯೂ ನೀರು ಕಾಣದೆ ನಿರಾಸೆಗೊಳ್ಳುತ್ತವೆ. ಹೀಗೆ ನೀರಿಲ್ಲದ ಜಾಗದಲ್ಲಿ ನೀರಿದ್ದಂತೆ ಭಾಸವಾಗುವುದೇ **ಮೃಗಜಲ**.

**ಯುರೇಕಾ:** ಆರ್ಕಿಮಿಡಿಸ್ ಸ್ನಾನದ ತೊಟ್ಟಿಯಲ್ಲಿ ಸ್ನಾನಕ್ಕಾಗಿ ಇಳಿದಾಗ ಸ್ವಲ್ಪ ನೀರು ಹೊರಗೆ ಚೆಲ್ಲಿತು. ನೀರು ಚೆಲ್ಲಲು ಕಾರಣವೇನಿರಬಹುದೆಂದು ಚಿಂತಿಸಿದಾಗ ತನ್ನನ್ನು ಕಾಡುತ್ತಿದ್ದ ಕಿರೀಟದ ಸಮಸ್ಯೆಗೆ ಪರಿಹಾರ ದೊರೆಯಿತು. ತಕ್ಷಣ **ಯುರೇಕಾ** (ತಿಳಿಯಿತು, ಸಿಕ್ಕಿತು) ಎಂದು ಬೊಬ್ಬಿಡುತ್ತಾ ಓಡಿದನು. ಅದೇ ರೀತಿ ಇಲ್ಲಿ ಲೇಖಕರು ಮತ್ತು ವಾಹನ ಚಾಲಕರು ವಿಜಯಪುರದ ಅರ್ಕೇಶ್ವರನ ಗುಡಿಯನ್ನು ಹುಡುಕುತ್ತಾ ಹೋಗಿ ಸಿಕ್ಕಿದಾಗ **ಯುರೇಕಾ** ಎಂದು ಕೂಗಿಕೊಂಡರು.

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?

೨. ಗಂಗರ ಮೊದಲ ರಾಜಧಾನಿ ಯಾವುದು?

೩. 'ರಾಯ', 'ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?

೪. ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣಿಕೆ ಏನು?

೫. ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?

೬. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?

೨. ಚಾವುಂಡರಾಯ ಯಾರು? ಆತನ ವಿಶೇಷತೆಯೇನು?

೩. ಚೋಳರ ಸಾಧನೆಯೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ವೈದ್ಯೇಶ್ವರ ದೇವಾಲಯದ ನಿರ್ಮಾಣದ ಕಾಲನಿರ್ಣಯಕ್ಕೆ ಸಹಕಾರಿಯಾಗುವ ಅಂಶಗಳಾವುವು? ವಿವರಿಸಿ.

೨. ಲೇಖಕರು 'ಯುರೇಕಾ' ಎಂದು ಕೂಗಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೩. ಸಳನ ವಂಶಕ್ಕೆ 'ಹೊಯ್ಸಳ' ಹೆಸರು ಬರಲು ಕಾರಣವೇನು?

NOT TO BE REPUBLISHED ©KTBS

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ"

೨. "ಅದು ಕಲಾಶ್ರೀ ವಿಹರಿಸುವ ನಂದನವನ"

೩. "ಮೋಟರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು"

೪. "ಬರ್ರೋ ಗುಡಿ ಸಿಕ್ಕಿತು ಬರ್ರೋ ದೇವಾಲಯ ದೊರಕಿತು"

**ಊ. ಗುಂಪಿಗೆ ಸೇರದ ಪದಗಳನ್ನು ಆರಿಸಿ ಬರೆಯಿರಿ.**

೧. ಸಾಹಿತ್ಯಾವಲೋಕನ, ಭಕ್ತಿಭಂಡಾರಿ ಬಸವಣ್ಣ, ಹಿರೇಮಲ್ಲೂರು, ವಚನಧರ್ಮಸಾರ.

೨. ಮಾರಸಿಂಹ, ಚಾವುಂಡರಾಯ, ರಾಚಮಲ್ಲ, ರಕ್ಕಸಗಂಗ.

೩. ರಾಜೇಶ್ವರ, ಮರಳೇಶ್ವರ, ಮಹಾಲಿಂಗೇಶ್ವರ, ಪಾತಾಳೇಶ್ವರ.

೪. ಮುಚ್ಚಿಟ್ಟು, ಹಾಡುತ್ತಿರುವ, ಉದ್ಯಮವನ್ನು, ಬಾನಿನೆಡೆ.

## ಸೈದ್ಧಾಂತಿಕ ಭಾಷಾಭ್ಯಾಸ

### ಸಂಧಿ ಪರಿಚಯಾತ್ಮಕ ವಿವರ

ಮಾತನಾಡುವಾಗ ಕೆಲವು ಪದಗಳನ್ನು ಬಿಡಿಬಿಡಿಯಾಗಿ ಹೇಳದೆ ಕೂಡಿಸಿ ಹೇಳುತ್ತೇವೆ. ಉದಾ: ಅಲ್ಲಿಅಲ್ಲಿ ಎಂಬ ಎರಡು ಪದಗಳನ್ನು **'ಅಲ್ಲಲ್ಲಿ'** ಎಂದು ಒಂದೇ ಪದವಾಗಿ ಹೇಳುತ್ತೇವೆ. ಇಲ್ಲಿ ಎರಡು ಪದಗಳ ನಾಲ್ಕು ಅಕ್ಷರಗಳು ಒಟ್ಟು ಸೇರಿ ಮೂರು ಅಕ್ಷರಗಳ ಒಂದು ಪದವಾಗಿದೆ.

**– ಪದ ರಚನೆ ಆಗುವಾಗ ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಒಟ್ಟು ಸೇರುವುದೇ ಸಂಧಿ.** ಈ ರೀತಿಯಲ್ಲಿ ಪದಗಳು ಒಟ್ಟು ಸೇರುವಾಗ **ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಬರಬಾರದು.** ಅರ್ಥಕ್ಕೆ ಲೋಪ ಬರುವುದಾದಲ್ಲಿ ಸಂಧಿ ಮಾಡಬಾರದೆಂಬ ನಿಯಮವುಂಟು.

ಹೀಗೆ ಸಂಧಿಯಾಗುವಾಗ **ಸ್ವರದ ಮುಂದೆ ಸ್ವರ ಇದ್ದು** ಸಂಧಿಯಾದರೆ ಅದು **ಸ್ವರ ಸಂಧಿ. ಸ್ವರದ ಮುಂದೆ ವ್ಯಂಜನ** ಅಥವಾ **ವ್ಯಂಜನದ ಮುಂದೆ ಸ್ವರ ಅಥವಾ ವ್ಯಂಜನದ ಮುಂದೆ ವ್ಯಂಜನ ಇದ್ದು** ಸಂಧಿಯಾದರೆ ಅದು **ವ್ಯಂಜನ ಸಂಧಿ.** ಈ ಸಂಧಿಗಳಲ್ಲಿ **'ಕನ್ನಡ ಸಂಧಿ'** ಮತ್ತು **'ಸಂಸ್ಕೃತ ಸಂಧಿ'** ಗಳೆಂದು ಎರಡು ವಿಧಗಳಿವೆ.

**ಕನ್ನಡ** ಪದಗಳೇ ಸೇರಿ ಅಥವಾ **ಕನ್ನಡ** ಮತ್ತು **ಸಂಸ್ಕೃತ** ಪದಗಳು ಸೇರಿ ಸಂಧಿಯಾದರೆ **'ಕನ್ನಡ ಸಂಧಿ'** ಎಂತಲೂ **ಸಂಸ್ಕೃತ** ಪದಗಳು ಸೇರಿ ಸಂಧಿಯಾದರೆ **'ಸಂಸ್ಕೃತ ಸಂಧಿ'** ಎಂತಲೂ ಕರೆಯಲ್ಪಡುತ್ತವೆ.

@KTBS NOT TO BE REPUBLISHED

ಸಂಧಿಯಾಗುವಾಗ ಕೆಲವು ವ್ಯತ್ಯಾಸಗಳಾಗುತ್ತವೆ. ಈ ವ್ಯತ್ಯಾಸವೇ **ಸಂಧಿಕ್ರಿಯೆ.** ಈ ವ್ಯತ್ಯಾಸ ಪೂರ್ವಪದದ ಅಂತ್ಯದಲ್ಲಿ ಅಥವಾ ಪರಪದದ (ಉತ್ತರಪದ) ಆದಿಯಲ್ಲಿ ಇಲ್ಲವೇ ಎರಡೂ ಪದಗಳ ಮಧ್ಯದಲ್ಲಿ ನಡೆಯುತ್ತದೆ. ಈ ವರ್ಣ ವ್ಯತ್ಯಾಸಕ್ಕನುಗುಣವಾಗಿ **ಲೋಪ, ಆಗಮ, ಆದೇಶ** ಎಂಬ **ಮೂರು ವಿಧದ ಸಂಧಿಕ್ರಿಯೆಗಳು** ನಡೆಯುತ್ತವೆ.

**ಉದಾ : ಬೇರೆ** + **ಒಬ್ಬ** > **ಬೇರೊಬ್ಬ**

**ರ್** + **ಎ** + **ಒ** > **ರ್** + **ಒ**

ಇಲ್ಲಿ ಸಂಧಿಕ್ರಿಯೆಗೆ ಒಳಪಟ್ಟ ಅಕ್ಷರಗಳನ್ನು ಗೆರೆ ಹಾಕಿ ಗುರುತಿಸಿದೆ. ಸಂಧಿಕ್ರಿಯೆ ನಡೆಯುವ ಮೊದಲು **ಬೇರೆ** ಮತ್ತು **ಒಬ್ಬ** ಎಂಬ ಎರಡು ಪದಗಳಿರುವುದನ್ನು ಗಮನಿಸಬಹುದು. ಪೂರ್ವಪದದ ಅಂತ್ಯದಲ್ಲಿ **ರ್** ಮತ್ತು **ಎ** ಎಂಬ ಎರಡು ಅಕ್ಷರಗಳಿವೆ. ಪರಪದದ ಆದಿಯಲ್ಲಿ **ಒ** ಎಂಬ ಅಕ್ಷರವಿದೆ. ಸಂಧಿಯಾದಾಗ **ಬೇರೊಬ್ಬ** ಎಂಬ ಪದ ರಚನೆಯಾಗಿದ್ದು ಸಂಧಿಗೊಳಪಟ್ಟ **ರೊ** ಅಕ್ಷರದಲ್ಲಿ **ರ್** ಮತ್ತು **ಒ** ಎಂಬ ಎರಡು ಅಕ್ಷರಗಳಿವೆ. ಹಾಗಾಗಿ ಪೂರ್ವಪದದ ಅಂತ್ಯದಲ್ಲಿದ್ದ **ಎ** ಎಂಬ ಸ್ವರಾಕ್ಷರ ಲೋಪವಾಗಿದೆ. ಇದೇ **ಲೋಪಕ್ರಿಯೆ.**

**ಉದಾ: ಮನೆ** + **ಅಲ್ಲಿ** > **ಮನೆಯಲ್ಲಿ**

**ನ್** + **ಎ** + **ಅ** > **ನ್** + **ಎ** + **ಯ್** + **ಅ**

@KTBS NOT TO BE REPUBLISHED

ಈ ಉದಾಹರಣೆಯಲ್ಲಿ ಪೂರ್ವಪದದ ಅಂತ್ಯ ಮತ್ತು ಪರ (ಉತ್ತರ) ಪದದ ಆದಿಯ ಮಧ್ಯೆ **ಯ್** ಎಂಬ ವ್ಯಂಜನಾಕ್ಷರ ಸೇರಿಕೊಂಡಿದೆ. ಹೀಗೆ ಹೊಸತಾಗಿ ಅಕ್ಷರ ಬಂದು ಸೇರುವುದೇ **ಆಗಮಕ್ರಿಯೆ.**

**ಉದಾ: ಮಳೆ** + **ಕಾಲ** > **ಮಳೆಗಾಲ**

**ಳ್** + **ಎ** + **ಕ್** + **ಆ** > **ಳ್** + **ಎ** + **ಗ್** + **ಆ**

ಇಲ್ಲಿ ಪರಪದದ ಆದಿಯಲ್ಲಿದ್ದ **ಕ್** ಅಕ್ಷರದ ಬದಲಿಗೆ **ಗ್** ಅಕ್ಷರ ಬಂದಿದೆ. ಹೀಗೆ ಒಂದು ಅಕ್ಷರದ ಬದಲಿಗೆ ಮತ್ತೊಂದು ಅಕ್ಷರ ಬರುವುದೇ **ಆದೇಶ ಕ್ರಿಯೆ.** ಸಂಧಿಕ್ರಿಯೆಯ ಹೆಸರಿನಿಂದಲೇ ಕನ್ನಡ ಸಂಧಿಗಳನ್ನು ಹೆಸರಿಸಲಾಗುವುದು.

೧. **ಲೋಪಕ್ರಿಯೆ ಆದರೆ ಲೋಪಸಂಧಿ, ಆಗಮಕ್ರಿಯೆ ಆದರೆ ಆಗಮಸಂಧಿ ಮತ್ತು ಆದೇಶಕ್ರಿಯೆ ಆದರೆ ಆದೇಶಸಂಧಿ.** ಹೀಗೆ ಕನ್ನಡದಲ್ಲಿ **ಲೋಪ, ಆಗಮ** ಮತ್ತು **ಆದೇಶ** ಎಂಬ **ಮೂರು** ವಿಧದ ಸಂಧಿಗಳಿವೆ.

**ಲೋಪಸಂಧಿ: ಸಂಧಿಕ್ರಿಯೆ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಸ್ವರ ಲೋಪವಾದರೆ ಅದು ಲೋಪಸಂಧಿ.**

**ಉದಾ:** ಊರು + ಊರು > ಊರೂರು    ಬಲ್ಲೆನು + ಎಂದು > ಬಲ್ಲೆನೆಂದು
ಊರು + ಇಂದ > ಊರಿಂದ

೨. **ಆಗಮಸಂಧಿ: ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ 'ಯ' ಕಾರ ಅಥವಾ 'ವ' ಕಾರವು ಈ ಸ್ವರಗಳ ಮಧ್ಯೆ ಹೊಸದಾಗಿ ಸೇರಿದರೆ ಅದು ಆಗಮಸಂಧಿ.**

**ಉದಾ:** ಕೈ + ಅನ್ನು > ಕೈಯನ್ನು    ಚಳಿ + ಇಂದ > ಚಳಿಯಿಂದ
ಗುರು + ಅನ್ನು > ಗುರುವನ್ನು    ಪುಸ್ತಕ + ಅನ್ನು > ಪುಸ್ತಕವನ್ನು

೩. **ಆದೇಶಸಂಧಿ: ಸಂಧಿಕ್ರಿಯೆ ಆಗುವಾಗ ಪರಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶಸಂಧಿ. ಕ ತ ಪ** ಗಳಿಗೆ **ಗ ದ ಬ** ಗಳೂ ಕೆಲವೊಮ್ಮೆ **ಪ ಬ ಮ** ಗಳ ಬದಲಿಗೆ **ವ** ಕಾರವೂ **ಆದೇಶವಾಗಿ ಬರುತ್ತವೆ.**

**ಉದಾ:** ಹುಲ್ಲು + ಕಾವಲು > ಹುಲ್ಲುಗಾವಲು    ಬೆನ್ + ಪತ್ತು > ಬೆಂಬತ್ತು
ಮೈ + ತೊಳೆ > ಮೈದೊಳೆ    ಕೆನೆ + ಪಾಲ್ > ಕೆನೆವಾಲ್

**ಪ್ರಕೃತಿಭಾವ :** ಆ + ಆಡು    ಅಯ್ಯೋ + ಇದೇನು
ಓಹೋ + ಅಜ್ಜಿ ಬಂದರೇ    ಅಕ್ಕಾ + ಇತ್ತಬಾ

ಕೊಟ್ಟಿರುವ ಉದಾಹರಣೆಗಳನ್ನು ಗಮನಿಸಿದಾಗ ಸ್ವರದ ಮುಂದೆ ಸ್ವರ ಬಂದಿರುವುದರಿಂದ **ಲೋಪ** ಅಥವಾ **ಆಗಮ** ಸಂಧಿ ಆಗಬೇಕಿತ್ತು. ಹಾಗೆ ಸಂಧಿ ಮಾಡಿದರೆ ಅರ್ಥ ಕೆಡುತ್ತದೆ. ಹಾಗಾಗಿ ಸಂಧಿ ಮಾಡುವುದಿಲ್ಲ. **ಪ್ಲುತ ಸ್ವರದ ಮುಂದೆ ಸ್ವರ ಬಂದಾಗ; ಅಯ್ಯೋ, ಆಹಾ, ಓಹೋ** ಮುಂತಾದ **ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ** ಹಾಗೂ **ಆ** ಎಂಬ ಪದದ ಮುಂದೆ (ಅಕ್ಷರದ ಮುಂದೆ ಅಲ್ಲ) **ಸ್ವರ ಬಂದಾಗ** ಸಂಧಿ ಮಾಡಬಾರದು.

ಹೀಗೆ – **ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇದ್ದ ಹಾಗೆಯೇ ಇರುವುದು ಪ್ರಕೃತಿಭಾವ.**

© KTBS NOT TO BE REPUBLISHED

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಸಂಧಿ ಎಂದರೇನು? ಅದರ ವಿಧಗಳನ್ನು ಹೇಳಿ.

೨. ಸಂಧಿಕ್ರಿಯೆ ಎಂದರೇನು? ಅದರ ವಿಧಗಳನ್ನು ವಿವರಿಸಿ.

೩. ಪ್ರಕೃತಿಭಾವ ಎಂದರೇನು? ಉದಾಹರಣೆ ಕೊಡಿ.

**ಆ. ಕೊಟ್ಟಿರುವ ಪದಗಳನ್ನು ವಿಂಗಡಿಸಿ ಸಂಧಿ ಹೆಸರಿಸಿ.**

| | | | |
|---|---|---|---|
| ನಿಮಿಷವಾಗಿದೆ | ದಿನವೆಲ್ಲ | ನಿಲ್ಮನೆಯನ್ನು | ಸಂದೇಹವಿಲ್ಲ |
| ಕಥನವಿದೆ | ಮಿಗಿಲಾಗಿ | ಚರಿತ್ರೆಯಿದೆ | ಹೆಸರಾಗಿದೆ |
| ತಲೆಯೆತ್ತಿ | ಮುಚ್ಚಿಟ್ಟು | ಬಾನಿನೆಡೆ | ಪೂರ್ತಿಯಾಗು |
| ಹಳ್ಳವೊಂದು | ತಾಸಾಗಿದೆ | ಊರಿಂದ | |

## ಪೂರಕ ಓದು

- **ಡಾ. ಪ್ರಭುಶಂಕರ** ಅವರ **ಅಮೆರಿಕದಲ್ಲಿ ನಾನು ಮತ್ತು ಶಾಂತಿ** ಪ್ರವಾಸ ಕಥನವನ್ನು ಓದಿ.
- **ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ** ಅವರ **ಗಂಗೆಯ ಶಿಖರಗಳಲ್ಲಿ** ಪ್ರವಾಸ ಕಥನವನ್ನು ಓದಿ.

✦ ✦ ✦ ✦ ✦

@KTBS NOT TO BE REPUBLISHED

# ೭. ಅಮ್ಮ

– ಯು.ಆರ್. ಅನಂತಮೂರ್ತಿ


R1P9S5

**ಪ್ರವೇಶ :** ಕನ್ನಡ ಸಾಹಿತ್ಯದಲ್ಲಿ ಆತ್ಮಕಥನಕ್ಕೆ ವಿಶಿಷ್ಟ ಸ್ಥಾನವಿದೆ. 'ವ್ಯಕ್ತಿಯೊಬ್ಬ ತಾನು ಬದುಕಿದ ರೀತಿಯನ್ನು ಮತ್ತು ತನ್ನ ಜೀವನದಲ್ಲಿ ತಾನು ಕಂಡುಂಡ ನೋವು, ನಲಿವುಗಳ ರೀತಿಯನ್ನು ತಾನೇ ಬರೆದುಕೊಳ್ಳುವುದು ಆತ್ಮಕಥೆಯಾಗಿದೆ'. ವ್ಯಕ್ತಿ ತನ್ನ ಬದುಕನ್ನು ಕುರಿತು ಸಿಂಹಾವಲೋಕನ ಮಾಡಿಕೊಂಡ ಜೀವನದ ಯಶೋಗಾಥೆ ಇದಾಗಿದೆ. ವಾಸ್ತವದ ಜೊತೆಗೆ ಕಲಾತ್ಮಕತೆ ಈ ಸಾಹಿತ್ಯ ರಚನೆಯ ಜೀವನಾಡಿಯಾಗಿರುತ್ತದೆ. ಈ ಸಾಹಿತ್ಯದ ವಿಷಯದ ವ್ಯಾಪ್ತಿಯು ಸಮಕಾಲೀನ ಮತ್ತು ಚಾರಿತ್ರಿಕ ಸಂಗತಿಗಳಾದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ – ಹೀಗೆ ಹಲವಾರು ಪರಿಸರಗಳಿಂದ ಕೂಡಿದ್ದಾಗಿದ್ದು, ವಾಚಕರ ಮನವನ್ನು ತನ್ನೆಡೆಗೆ ಸೆಳೆಯುತ್ತದೆ.

ಮಾನವನ ಬದುಕಿನಲ್ಲಿ ಬಾಲ್ಯ ಕಟ್ಟಿಕೊಡುವ ನೆನಪುಗಳು ಅಪಾರ ಹಾಗೂ ಅಮೋಘ, ಬಾಲ್ಯದ ಈ ನೆನಪಿನಂಗಳದಲ್ಲಿ ತುಂಬಿಬರುವ ಈ ನೆನಪಿನ ಬುತ್ತಿಯು ಬದುಕಿನುದ್ದಕ್ಕೂ ಎಷ್ಟು ಸವಿಯುತ್ತಿದ್ದರೂ ಮುಗಿಯದ ಅಕ್ಷಯಪಾತ್ರೆಯಾಗಿರುತ್ತದೆ. ಮಲೆನಾಡಿನ ಪ್ರಕೃತಿಯ ಮಡಿಲಿನಲ್ಲಿ ಬರುವ ತನ್ನೂರಿನ ಜನಜೀವನದೊಂದಿಗೆ ತನ್ನ ಶಾಲಾದಿನಗಳ ನೆನಪನ್ನು ಓದುಗರ ಮನಮುಟ್ಟುವಂತೆ ಲೇಖಕರು ಇಲ್ಲಿ ಚಿತ್ರಿಸಿದ್ದಾರೆ.

ಈ ಊರಿನಲ್ಲಿ ಹುಲಿಗಳ ಕಾಟ ಬಹಳ ಇತ್ತು. ನಮ್ಮಮ್ಮನಿಗೆ ದೂರದಲ್ಲಿ ಹುಲಿ ಕೂಗುತ್ತಿದ್ದರೆ ಥಟ್ಟನೆ ತಿಳಿದುಬಿಡುತಿತ್ತು. ಹುಲಿಗಳ ಶಬ್ದಕ್ಕೆ ತುಂಬ ಸೂಕ್ಷ್ಮವಾಗಿದ್ದ ಜೀವಿಗಳೆಂದರೆ ಕೊಟ್ಟಿಗೆಯ ದನಗಳು. ಅವು ಗಡಗಡ ನಡುಗಲು ಶುರುಮಾಡುತ್ತಿದ್ದವು. ಕೊರಳಿನ ಗಂಟೆ ಜೋರು ಶಬ್ದ ಮಾಡುತ್ತಿತ್ತು. ನಾನು, ನಮ್ಮಮ್ಮ, ನಮ್ಮಜ್ಜ, ಚಿಮಣಿ ದೀಪದ ಬೆಳಕಲ್ಲಿ ಒಳಗಡೆ ಕೂತು ಎಲ್ಲಿ ಹುಲಿ ನಮ್ಮ ಕೊಟ್ಟಿಗೇಗೂ ನುಗ್ಗಿಬಿಡುತ್ತದೆಯೋ ಎಂದು ಕಾಯುತ್ತಿದ್ದೆವು. ಮನೆಗೆ ನಿತ್ಯ ಆಳುಗಳು ಬಂದಾಗ ಮಾತು ಶುರುವಾಗುತ್ತಿದ್ದುದು ಯಾವುದೋ ಹುಲಿ ಯಾವುದೋ ದನವನ್ನು ಕಾಡಲ್ಲಿ ಹಿಡೀತು, ಅವರ ಮನೆ ದನ ಹೋಯ್ತು. ಇವರ ಮನೆ ದನ ಹೋಯ್ತು – ಹೀಗೆ. ಮಲೆನಾಡಿನಲ್ಲಿ ಹುಲಿ ಆಗ ನಿಜವಾದ ಹಸಿದ ಕಣ್ಣುಗಳ ಕೋರೆದಾಡೆಯ ಮುಖವಾಗಿತ್ತು. ನಮಗೆ ತುಂಬಾ ಭಯವಾದಾಗ ಹೇಳಿಕೊಳ್ಳಲು ಅರ್ಜುನ ಮಂತ್ರವಿತ್ತು. "ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತವಾಹನಃ" ಇದು ನಮ್ಮಜ್ಜ ಹೇಳಿಕೊಟ್ಟಿದ್ದು. ಅದನ್ನು ಹೇಳಿಬಿಟ್ಟರೆ ಭಯ ನಿವಾರಣೆ ಆಗುತ್ತೆ ಅಂತ ಹೇಳಿದ್ದರು. ಅದನ್ನು ಹೇಳುತ್ತ ಹೇಳುತ್ತ ನಾವು ನಿದ್ದೆ ಹೊಗುತ್ತಿದ್ದೆವು, ಅಮ್ಮ ಮಾತ್ರ ನಿದ್ದೆ ಮಾಡುತ್ತಿರಲಿಲ್ಲ. ಬೆಳಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂದು ಗೊತ್ತಾದಾಗ ಮನಸ್ಸಿಗೆ ಸಮಾಧಾನ.

© KTBS NOT TO BE REPUBLISHED



ನನ್ನ ಮೊದಲ ವಿದ್ಯಾಗುರು ನನ್ನ ಅಮ್ಮ. ಅಮ್ಮ ಸ್ಕೂಲಿಗೆ ಹೋಗಿ ಸ್ವಲ್ಪ ಓದಿ ಬರೆಯಲು ಕಲಿತಿದ್ದಳು. ಸ್ಕೂಲಿನಲ್ಲಿ ಅವಳು ಎಸ್.ವಿ. ಪರಮೇಶ್ವರ ಭಟ್ಟರ ಸಹಪಾಠಿಯಾಗಿದ್ದವಳು. ಕೆರೆಕೊಪ್ಪದ ಮನೆಯಲ್ಲಿದ್ದಾಗಲೇ ನನಗೆ ಅಕ್ಷರಾಭ್ಯಾಸ ಪ್ರಾರಂಭವಾಗಿದ್ದು. ಆಗ ಸ್ಕೂಲ್ ಹತ್ತಿರ ಇರಲಿಲ್ಲ. ಹಬ್ಬದ ದಿನ ಅದು. "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣೀ, ವಿದ್ಯಾರಂಭಂ ಕರಿಷ್ಯಾಮಿ । ಸಿದ್ಧಿರ್ಭವತು ಮೇ ಸದಾ" ಎಂದು ಹೇಳಿ ಅಮ್ಮ ನೆಲದಲ್ಲಿ ಮರಳು ಹರಡಿ ಕೂರಿಸಿ ನನ್ನ ಬೆರಳನ್ನು ಹಿಡಿದುಕೊಂಡು 'ಅ' ಎಂಬ ಅಕ್ಷರವನ್ನು ಬರೆಯಿಸಿದ್ದಳು. ಅಮ್ಮ ನಿತ್ಯ ಹೀಗೆ ಮಾಡಿಸುತ್ತಿದ್ದುದರಿಂದ ನಾನು ಶಾಲೆಯಲ್ಲಿ ಅಕ್ಷರ ಕಲಿಯುವುದಕ್ಕೆ ಆರಂಭಿಸುವ ಹೊತ್ತಿಗೆ ಅನೇಕ ಅಕ್ಷರಗಳನ್ನು ಕಲಿತು ಬಿಟ್ಟಿದ್ದೆ.

©KTBS NOT TO BE REPUBLISHED

ಹುಲಿಯ ಭಯದಿಂದಾಗಿ ನನ್ನನ್ನು ಆ ದಿನಗಳಲ್ಲಿ ಶಾಲೆಗೆ ಕಳುಹಿಸುತ್ತಿರಲಿಲ್ಲ. ಪಾಠ ಹೇಳಲು ಮನೆಗೇ ಒಬ್ಬರು ಬರುತ್ತಿದ್ದರು. ಅವರ ಹೆಸರು ಕೃಷ್ಣಪ್ಪಯ್ಯ. ಬಹಳ ಕಟ್ಟುನಿಟ್ಟಿನ ಮೇಷ್ಟ್ರು ಅವರು. ನನಗೋ ಆಗ ರಂಜದ ಹೂವನ್ನು ತಂದು ಪೋಣಿಸಿ ದೊಡ್ಡ ದೊಡ್ಡ ಸರಗಳನ್ನು ಮಾಡಿ ಅಮ್ಮನಿಗೆ ಮುಡಿಯುವುದಕ್ಕೆ ಕೊಡುವುದು, ನಾನು ಮುಡಿದು ಕೊಳ್ಳುವುದು ಇದರಲ್ಲೆ ಹೆಚ್ಚು ಆಸಕ್ತಿ. ಆಗ ನನಗಿನ್ನೂ ಚೌಲವಾಗಿರಲಿಲ್ಲ. ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು. ಮಗಳು ಬೇಕೆಂಬ ಅಮ್ಮನ ಆಸೆ ಪೂರೈಕೆಯಾದದ್ದು ಅವರ ಮೂರನೇ ಹೆರಿಗೆಯಲ್ಲಿ. ಅಮ್ಮ ಒಂದೊಂದು ಸಾರಿ ನನಗೆ ಹುಡುಗಿಯರ ಉಡುಪು ತೊಡಿಸಿ ಹೂವು ಮುಡಿಸುತ್ತಿದ್ದಳು. ನಾನು ರಂಜದ ಹೂವನ್ನು ಪೋಣಿಸುತ್ತಾ ಕುಳಿತಿದ್ದನ್ನು ಕಂಡರೆ ಕೃಷ್ಣಪ್ಪಯ್ಯನವರಿಗೆ ಸಿಟ್ಟು ಬರುತ್ತಿತ್ತು. ಕೃಷ್ಣಪ್ಪಯ್ಯನವರೇ ಅಧಿಕೃತವಾಗಿ ನನ್ನ ಮೊದಲ ಶಿಕ್ಷಕರು. ಕೃಷ್ಣಪ್ಪಯ್ಯ ಬರುವಾಗಲೇ ಒಂದು ಬೆತ್ತ ತಂದಿರುತ್ತಿದ್ದರು. ಪೆಟ್ಟು ತಿಂದು ಅದೇನು ಕಲಿತೆ ಎಂಬುದು ಮರೆತು ಹೋಗಿದೆ. ಆದರೆ ಕೃಷ್ಣಪ್ಪಯ್ಯ ಮಾತ್ರ ನೆನಪಿನಲ್ಲಿದ್ದಾರೆ.

ಇದಾದ ಮೇಲೆ ನಾನು ಅಮ್ಮನ ಊರು ಮೇಳಿಗೆಗೆ ಹೋಗಿ ಅಲ್ಲಿನ ಶಾಲೆಯಲ್ಲಿ ಕೆಲವು ಕಾಲ ಕಲಿತೆ. ನನಗಾಗ ಆರು ವರ್ಷ ಇದ್ದಿರಬಹುದು. ಅಲ್ಲಿದ್ದ ಶೇಷಗಿರಿ ಮೇಷ್ಟ್ರು ನನ್ನ ಅಮ್ಮನಿಗೂ ಶಿಕ್ಷಕರಾಗಿದ್ದವರು. ಅದು ಏಕೋಪಾಧ್ಯಾಯ ಶಾಲೆ. ಶಾಲೆಯ ಹೊರಗೆ ಧೂಳು ತುಂಬಿದ ಅಂಗಳವಿತ್ತು. ಆ ಧೂಳಿನಲ್ಲಿ ದುಂಡಗಿನ ಸಣ್ಣ ಸಣ್ಣ ಕುಳಿಗಳ ಒಳಗೆ ಇರುವ ಒಂದು ಕಪ್ಪುಹುಳು ಇರುತ್ತಿತ್ತು. ಅದನ್ನು 'ತನ್ನಾದೇವಿ', 'ಗುಬ್ಬಿ' ಎಂದೆಲ್ಲಾ ಕರೆಯುತ್ತಾರೆ. ಅದನ್ನು ಆ ಕುಳಿಗಳಿಂದ ಎಬ್ಬಿಸಿ, 'ಕಾಶಿಗೆ ಹೋಗೋ ದಾರಿ ತೋರಿಸು, ಕಾಶಿಗೆ ಹೋಗೋ ದಾರಿ ತೋರಿಸು' ಎಂದು ಹೇಳುತ್ತ ಬೆರಳಿನಿಂದ ಸುತ್ತು ಬರುತ್ತಿದ್ದೆವು. ಆಗ ಅದು ಹಿಂದೆ ಹಿಂದೆ ಹೋಗುತ್ತಿತ್ತು. ಮೇಷ್ಟ್ರು ಗದರಿಸಿ ನಮ್ಮನ್ನು ಒಳ ಕರೆದು ಪಾಠ ಮಾಡಬೇಕಾಗುತ್ತಿತ್ತು. ನಮಗೆ ತರಗತಿಯೊಳಗೆ ಕುಳಿತುಕೊಳ್ಳುವುದಕ್ಕಿಂತ ಹೊರಗೆ ಹೋಗಿ ಆಡುವುದೇ ಪ್ರಿಯವಾದುದರಿಂದ ಹೊರಗೆ ಹೋಗುವುದಕ್ಕೆ ಉಪಾಯ ಯೋಚಿಸುತ್ತಲೇ ಇರುತ್ತಿದ್ದೆವು. ಸುಲಭದ ಉಪಾಯವೆಂದರೆ 'ಒಂದಕ್ಕೆ ಸಾರ್' ಎಂದು ಎದ್ದು ನಿಂತು ಕೇಳುವುದು. ಅವರು ಹೊರಗೆ ಹೋಗಲು ಅನುಮತಿ ಕೊಡುತ್ತಿದ್ದರು.

ಸತತ ಮಳೆ ಸುರಿಯುತ್ತಿದ್ದ ಮಳೆಗಾಲದಲ್ಲಿ ಮನೆಯಲ್ಲಿ ಸೋರದ ಭಾಗವನ್ನು ನಾವು ಹುಡುಕಬೇಕಾಗುತ್ತಿತ್ತು. ಮಳೆಗಾಲದ ಆರಂಭಕ್ಕೆ ಮೊದಲೇ ಮನೆಯ ಕೆಲಸಕ್ಕೆ ನಮ್ಮ ಸಂಬಂಧಿಕರು, ಅಪ್ಪನ ಸ್ನೇಹಿತರು ಒಣ ಸೌದೆ, ಅಕ್ಕಿ, ಬೇಳೆ, ಜೋನಿ ಬೆಲ್ಲವನ್ನು ಸಂಗ್ರಹಿಸಲು ನೆರವಾಗುತ್ತಿದ್ದರು. ಆಗೆಲ್ಲ ಕಾಡು ಹಲಸಿನ ಹಣ್ಣು ಯಥೇಚ್ಛವಾಗಿ ಸಿಗುತ್ತಿತ್ತು. ಜೊತೆಗೆ ಅದು ಕಾಯಿಯಿಂದ ಹಣ್ಣಿನ ತನಕ ಎಲ್ಲ ಹಂತಗಳಲ್ಲೂ ಒಂದಲ್ಲ ಒಂದು ಆಹಾರ ಪದಾರ್ಥದ ತಯಾರಿಯಲ್ಲಿ ಉಪಯೋಗಕ್ಕೆ ಬರುತ್ತಿತ್ತು. ಸುರಿಯುವ ಮಳೆಯಲ್ಲಿ ನಾವು ಮಕ್ಕಳೆಲ್ಲ ಬಚ್ಚಲ ಒಲೆಯ ಬೆಂಕಿಯೆದುರು ಕುಳಿತು ಕೈಗಳನ್ನು ಮುಂಚಾಚಿ ಬೆಂಕಿ ಕಾಯಿಸುತ್ತಿದ್ದೆವು. ಆ ಜಡಿಮಳೆಯಲ್ಲಿ ಬೆಂಕಿಯ ಹಿತ ಸುಖವೆನ್ನಿಸುತ್ತಿತ್ತು. ಒಲೆಗೆ ಹಲಸಿನ ಬೀಜಗಳನ್ನು ಹಾಕಿ ಸುಟ್ಟು ತಿನ್ನುತ್ತ ನಮ್ಮ ಜೊತೆ ಇರುತ್ತಿದ್ದ ಯಾರಾದರೂ ದೊಡ್ಡವರು ಹೇಳುವ ಕತೆಗಳನ್ನು ಬಾಯಿಬಿಟ್ಟುಕೊಂಡು ಆಲಿಸುತ್ತಿದ್ದೆವು.

©KTBS NOT TO BE REPUBLISHED

ಬೇಸಿಗೆಯಲ್ಲಿ ನಮ್ಮಮ್ಮ ಮಳೆಗಾಲದ ದಿನಗಳಿಗೆಂದು ಹಪ್ಪಳ, ಸಂಡಿಗೆಯಂತಹ ಅನೇಕ ತಿಂಡಿಗಳನ್ನು ಒಣಗಿಸಿ ಇಡುತ್ತಿದ್ದರು. ಮನೆಯ ಹಿರಿಯರಿಗೆ ಮಾತ್ರ ಗೊತ್ತಿದ್ದ ಕೆಲವು ಔಷಧೀಯ ಗುಣಗಳ ಸೊಪ್ಪುಗಳನ್ನು ಬೇಯಿಸಿ ನಿತ್ಯ ಊಟದಲ್ಲಿ ಬಳಸುತ್ತಿದ್ದರು. ಅದು ಎರಡನೇ ಮಹಾಯುದ್ಧದ ಕಾಲ. ಕೆರೆಕೊಪ್ಪದಲ್ಲಿ ಅಂಗಳದ ಆಚೆ ಮನೆಯನ್ನು ಆಕ್ರಮಿಸಲು ಹೊಂಚುತ್ತ ಇರುವ ಅರಣ್ಯವಿತ್ತು. ನಸುಕಿನಲ್ಲಿ ಎದ್ದು, ಮನೆಯೆದುರು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರವೊಂದರಿಂದ ನೆಲದ ಮೇಲೆ ಚೆಲ್ಲಿರುತ್ತಿದ್ದ ನಕ್ಷತ್ರದ ಆಕಾರದ ರಂಜದ ಹೂಗಳನ್ನು ಆರಿಸುವುದು, ದೂರ್ವೆಯನ್ನು ಹುಲ್ಲಲ್ಲಿ ಹುಡುಕಿ ಕಿತ್ತು ತರುವುದು, ಕೇದಗೆ ಅರಳಿದೆಯೆ, ಮರದ ಮೇಲಿನ ಗೂಡಲ್ಲಿ ಮೊಟ್ಟೆ ಮರಿಯಾಯಿತೆ ಎಂದು ಬಿದಿರಿನ

ಸಂದಿಯಿಂದ ನಿತ್ಯ ನೋಡುವುದು ನನಗೆ ಖುಷಿಯ ಸಂಗತಿಗಳು. ದೂರ್ವೆಯನ್ನು ಅಜ್ಜಯ್ಯನಿಗೆ ಪೂಜೆಗೆ ಕೊಟ್ಟು, ಅಮ್ಮ ಕಡಗೋಲಿನಿಂದ ಮೊಸರು ಕಡೆಯುವಾಗ, 'ಏಳು ನಾರಾಯಣನೆ, ಏಳು ಲಕ್ಷ್ಮೀರಮಣ' ಎಂಬ ಹಾಡನ್ನು ಹೇಳುವುದನ್ನು ಆಲಿಸುತ್ತ, ರಂಜದ ಹೂವನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತ, ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತ 'ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ' ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತ ಇರುವುದೇ ನನ್ನ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.

ಕೆರೆಕೊಪ್ಪದಲ್ಲಿ ನಮಗೆಲ್ಲಾ ಚರಟದ ಕಾಫಿ. ಆದರೆ ಕೆಲವು ಸಾರಿ ಅಜ್ಜಯ್ಯನಿಗೆ, ನನ್ನ ತಂದೆ ಶಾನುಭೋಗರಿಗೆ ಮತ್ತು ಅವರ ಗೆಳೆಯರಾದ ಊರಿನ ಪಟೇಲರಿಗೆ ಮಾತ್ರ 'ಒರಿಜಿನಲ್' ಕಾಫಿಪುಡಿಯ ಕಾಫಿ, ಕಾಫಿ ಬೀಜವನ್ನು ಆಗಲೇ ಹುರಿದು, ಆಗಲೇ ಪುಡಿಮಾಡಿ, ಆಗಲೇ ಕುದಿಯುವ ನೀರಿಗೆ ಬೆರಸಿ, ಮುಚ್ಚಿಟ್ಟು, ಅದರ ಗಸಿ ಇಳಿಯುವಷ್ಟು ಹೊತ್ತು ಕಾದು, ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು ಹಿಂಡಿ, ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ ಹದ ಮಾಡಿ ಕಾಫಿ ಮಾಡುವುದು ಸಾಮಾನ್ಯವಾಗಿತ್ತು. ಈ ಕಾಫಿಯನ್ನು ಫಳಫಳ ಹೊಳೆಯುವ ಒಂದು ಹಿತ್ತಾಳೆ ಲೋಟದಿಂದ ಇನ್ನೊಂದು ಲೋಟಕ್ಕೆ ನೊರೆ ಬರುವಂತೆ ಎತ್ತರದಿಂದ ಹಲವು ಸಾರಿ ಹುಯ್ದು ಕುಡಿಯಲು ಅಗತ್ಯವಾದ ಬಿಸಿಗದನ್ನು ಇಳಿಸಿ, ಸೆರಗು ಮುಚ್ಚಿದ ಕೈಯ ಮೇಲೆ ಅದನ್ನು ಇಟ್ಟುಕೊಂಡು ಹಸನ್ಮುಖಿಯಾಗಿ ಅಮ್ಮ ಕುಡಿಯಲು ಕೊಡುತ್ತಿದ್ದರು. ಮಕ್ಕಳಿಗೂ ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು. ನಿತ್ಯ ಈ ಕಾಫಿಯ ಘಮಘಮದ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಅದರ ಚರಟ ಕುದಿಸಿ ಮಾಡಿದ ಕಾಫಿಯ ಸೇವನೆ ನಮಗೆ. ಇವೆಲ್ಲದರ ತಯಾರಿಯೂ ನೆನಪಾಗುತ್ತದೆ. ಕಾಫಿ ಬೀಜವನ್ನು ಬ್ಯಾರಿಯೊಬ್ಬರು ತಿಂಗಳಿಗೊಮ್ಮೆ ನಮಗೆ ತಂದುಕೊಡುತ್ತಿದ್ದರು. ಈ ವಿಶೇಷ ಪದಾರ್ಥಗಳೆಲ್ಲವನ್ನೂ ಕಡವಾಗಿ ನಾವು ಪಡೆಯುವುದು ವರ್ಷಕ್ಕೊಮ್ಮೆ, ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ, ಯುಗಾದಿಯಿಂದ ಇನ್ನೊಂದು ಯುಗಾದಿಗೆ, ಗೌರಿ ಹಬ್ಬದಿಂದ ಇನ್ನೊಂದು ಗೌರಿ ಹಬ್ಬದವರೆಗೆ ಈ ಕಡದ ಅವಧಿ. ನಾವು ಬೆಳದ ಅಡಿಕೆಯನ್ನೋ, ಭತ್ತವನ್ನೋ ಬದಲಿಗೆ ಕೊಟ್ಟು ಕಡವನ್ನು ತೀರಿಸುತ್ತಿದ್ದರು. ಜರಿ ಟೋಪಿ ತೊಟ್ಟ ಬ್ಯಾರಿ ಬಂದಾಗಲೆಲ್ಲಾ ನಮಗೆ ಸಕ್ಕರೆಯಿಂದ ಮಾಡಿದ ಮಿಠಾಯಿ ಪುಕ್ಕಟೆ ಸಿಗುತ್ತಿತ್ತು. ನನ್ನ ಭಯ ನಿವಾರಣೆಗೆಂದು ಎಂದೋ ಒಮ್ಮೆ ಕರಡಿ ಆಡಿಸುವವನು ತಂದ ಕಡುಕಪ್ಪು ಕರಡಿ ಮೇಲೆ ನನ್ನನ್ನು ಕೂರಿಸಿ ಅಂಗಳ ಸುತ್ತಿಸಿದ್ದೂ ನೆನಪಿದೆ.

NOT TO BE REPUBLISHED ©KTBS

ಕೈಯಲ್ಲಿ ಕಾಸಾಡದ ಆ ಕಾಲದಲ್ಲಿ ಹಲವು ಸಾರಿ ಮನೆಯಲ್ಲಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಇರುತ್ತಿರಲಿಲ್ಲ. ಕೆಲವೊಮ್ಮೆ ಅಮ್ಮ ಸ್ವಲ್ಪ ಕಾಫಿಪುಡಿಯಲ್ಲಿ ಒಂದು ಲೋಟ ಕಾಫಿ ಮಾಡಿ ಅಪ್ಪನಿಗೆ ಕೊಟ್ಟು ಆ ಕಾಫಿ ಮಾಡಿದ ಚರಟದಲ್ಲಿ ನನಗೆ, ತನಗೆ ಮತ್ತು ನನ್ನಜ್ಜನಿಗೆ ಕೊಡುತ್ತಿದ್ದರು. ಅಜ್ಜ ಮನೆಗೆ ಹಿರಿಯರಾದ್ದರಿಂದ 'ನನಗೆ ಚರಟದಲ್ಲಿ ಕಾಫಿಯೋ?' ಅಂತ ಕೇಳಿದ್ದಿದೆ.

ಮನೆಯಲ್ಲಿ ಅಜ್ಜಿಗೂ, ಅಮ್ಮನಿಗೂ ಕಿರಿಕಿರಿಯಾದಾಗ ಅಜ್ಜಯ್ಯ ಸೌದೆ ತರುವ ನೆಪ ಮಾಡಿ ಕತ್ತಿ ಹಿಡಿದು ಕಾಡಿಗೆ ನಡೆದು ಬಿಡುತ್ತಿದ್ದರು. ನಾನೂ ಹಠ ಹಿಡಿದು ಅವರ ಜೊತೆ ಹೋಗುತ್ತಿದ್ದೆ. ಅಮ್ಮನಿಗೆ ನಾನು ಹೀಗೆ ಅಜ್ಜಯ್ಯನ ಜೊತೆ ಪಟ್ಟಾಂಗ ಮಾಡುತ್ತ ಅಲೆಯುವುದು ಇಷ್ಟವಾಗುತ್ತಿರಲಿಲ್ಲ. ಅಂತಹ ಸಮಯದಲ್ಲಿ ಏನೇನೋ ನೆವ ಮಾಡಿಕೊಂಡು ನಾನು ಕಾಡುಹರಟೆಯಲ್ಲಿ ಕಾಲ ಕಳೆಯುತ್ತ ಅಕ್ಷರ ತಿದ್ದುತ್ತಿಲ್ಲವೆಂದು ಅಜ್ಜಯ್ಯನ ಎದುರೇ ಬಯ್ಯುತ್ತಿದ್ದರು.

## ಕೃತಿಕಾರರ ಪರಿಚಯ



ಕನ್ನಡ ಸಾಹಿತ್ಯದ ಪ್ರಮುಖ ಸಾಹಿತಿಗಳು, ಚಿಂತಕರು ಹಾಗೂ ವಿಮರ್ಶಕರೆಂದು ಪ್ರಖ್ಯಾತರಾದವರು **ಡಾ|| ಯು.ಆರ್. ಅನಂತಮೂರ್ತಿಯವರು** ಇವರ ಪೂರ್ಣ ಹೆಸರು **ಉಡುಪಿ ರಾಜಗೋಪಾಲಾಚಾರ್ಯ ಅನಂತಮೂರ್ತಿ**. ಇವರ ಕಾಲ **ಸಾ.ಶ. ೧೯೩೨–೨೦೧೪. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಗ್ರಾಮದಲ್ಲಿ** ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಎಂ.ಎ. ಪದವಿ ಪಡೆದು ಇಂಗ್ಲೆಂಡಿನ ಬರ್ಮಿಂಗ್ ಹ್ಯಾಮ್ ವಿಶ್ವವಿದ್ಯಾನಿಲಯದಿಂದ **'ಇಂಗ್ಲಿಷ್ ಮತ್ತು ತೌಲನಿಕ ಸಾಹಿತ್ಯ'** ಎಂಬ ವಿಷಯದಲ್ಲಿ ಪಿ.ಎಚ್.ಡಿ. ಪದವಿ ಪಡೆದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಆರಂಭಿಸಿ ಕೊಟ್ಟಾಯಂ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿಯೂ ಸಹ ಸೇವೆ ಸಲ್ಲಿಸಿದರು. ಇವರ ಪ್ರಮುಖ ಕೃತಿಗಳು **ಸಂಸ್ಕಾರ, ಭವ, ಅವಸ್ಥೆ, ಭಾರತೀಪುರ ಮುಂತಾದ ಕಾದಂಬರಿಗಳು, ಆವಾಹನೆ (ನಾಟಕ) ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ – ಕಥಾ ಸಂಕಲನಗಳು, ಮಿಥುನ, ಅಜ್ಜನ ಹೆಗಲ ಸುಕ್ಕುಗಳು** ಮುಂತಾದ ಕವನಸಂಕಲನಗಳು ಹೀಗೆ ವಿವಿಧ ಸಾಹಿತ್ಯ ಪ್ರಕಾರದಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಗೌರವ ಡಿ.ಲಿಟ್. ರಾಜ್ಯೋತ್ಸವ ಪ್ರಶಸ್ತಿ, ಭಾರತ ಸರ್ಕಾರದ **ಪದ್ಮಭೂಷಣ** ಪುರಸ್ಕಾರ, ೧೯೯೪ರಲ್ಲಿ **'ಭಾರತೀಯ ಜ್ಞಾನಪೀಠ ಪ್ರಶಸ್ತಿ'** ಪುರಸ್ಕಾರಗಳು ಲಭಿಸಿವೆ. ೨೦೦೨ರಲ್ಲಿ ತುಮಕೂರಿನಲ್ಲಿ ನಡೆದ ೬೬ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಪ್ರಸ್ತುತ ಗದ್ಯಭಾಗವನ್ನು **ಯು.ಆರ್. ಅನಂತಮೂರ್ತಿಯವರ 'ಸುರಗಿ'** ಎಂಬ ಆತ್ಮಕಥನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

NOT TO BE REPUBLISHED
@KTBS

## ಆಶಯ

**'ಮನೆಯೇ ಮೊದಲ ಪಾಠಶಾಲೆ, ಜನನಿತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರೇ ಧನ್ಯರು'**. ಎನ್ನುವ ಮಾತು ಸರ್ವಕಾಲಿಕ ಸತ್ಯ ಹಾಗೂ ನೀತಿಯುಕ್ತ ನುಡಿಯಾಗಿದೆ. ಮಕ್ಕಳ ಬದುಕಿನಲ್ಲಿ ಅಮ್ಮನ ಪಾತ್ರ ಎಷ್ಟು ಮಹತ್ವದ್ದು ಎನ್ನುವುದು ಪ್ರತಿಯೊಬ್ಬರಿಗೂ ವೇದ್ಯವಾಗಿಯೇ ಇರುತ್ತದೆ. ಮಾನವನ ಸಂಸ್ಕಾರಯುತ ಜೀವನ ಆರಂಭವಾಗುವುದೇ ತಾಯಿಯ ಮಡಿಲಿನಲ್ಲಿ. ಆಕೆಯ ನಡೆನುಡಿ ಸಜ್ಜನಿಕೆ ಮಕ್ಕಳ ಬಾಲ್ಯದ ಮೇಲೆ ತೀವ್ರ ಪರಿಣಾಮವನ್ನು ಬೀರುತ್ತದೆ. ಅಮ್ಮ ಸಂಸ್ಕಾರವನ್ನು ನೀಡಿದರೆ, ಜನಿಸಿದ ಈ ತಾಯ್ನೆಲ, ಈ ಪರಿಸರವನ್ನಪ್ಪಿ ಬೆಳೆದ ಬಾಲ್ಯದ ನೆನಪುಗಳು ಮಾನವನ ಜೀವನದಲ್ಲಿ ಅಚ್ಚಳಿಯದ ಮುದ್ರೆಯನ್ನೊತ್ತುತ್ತವೆ. ಈ ಎಲ್ಲಾ ನೆನಪುಗಳ ಬುತ್ತಿಯನ್ನು ಈ ಮೂಲಕ ಕಟ್ಟಿಕೊಡುವುದೇ ಲೇಖಕರ ಆಶಯವಾಗಿದೆ.

* * * * * * *

## ಪದಗಳ ಅರ್ಥ

ಅಂಚು – ದಡ, ತೀರ; ಆತಂಕ – ಭಯ, ಅಡ್ಡಿ; ಕಡ – ಸಾಲ; ಕಾಸು – ಹಣ, ದುಡ್ಡು; ಕೊಂಚ – ಅಲ್ಪ, ಸ್ವಲ್ಪ ; ಚರಟ–ಗಸಿ, ಕಾಫಿ ಸೋಸಿದ ನಂತರದ ಉಳಿಕೆ; ಚಿಮಣಿ ದೀಪ – ಸೀಮೆಎಣ್ಣೆ ದೀಪ ; ಚೌಲ – ಮುಡಿತೆಗೆಸು, ತಲೆಕೂದಲನ್ನು ತೆಗಿಸುವುದು; ಜೋನಿಬೆಲ್ಲ – ನೀರುಬೆಲ್ಲ; ದೂರ್ವೆ – ಗರಿಕೆ; ದೈನಿಕ – ದಿನನಿತ್ಯ, ಪ್ರತಿದಿನ; ನಸುಕು – ಮುಂಜಾನೆ, ಬೆಳಗಿನ ಸಮಯ; ನಿವಾರಣೆ – ದೂರಮಾಡು, ಹೋಗಲಾಡಿಸು; ನೆವ – ಕಾರಣ, ನೆಪ. ಪಟ್ಟಾಂಗ – ಹರಟೆ, ಮಾತುಕತೆ; ಯಥೇಚ್ಛ – ಬೇಕಾದಷ್ಟು, ಮನಸ್ಸಿಗೆ ಬಂದಷ್ಟು; ಸಂಗತಿ – ವಿಷಯ; ಹಸನ್ಮುಖಿ – ನಗುಮೊಗ;

NOT TO BE REPUBLISHED @KTBS

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು?

೨. ಲೇಖಕರ ಮೊದಲ ವಿದ್ಯಾಗುರು ಯಾರು?

೩. ಸಣ್ಣ ಕುಳಿಯೊಳಗಿನ ಕಪ್ಪುಹುಳುವನ್ನು ಯಾವ ಹೆಸರಿನಿಂದ ಕರೆಯುತ್ತಾರೆ?

೪. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು?

೫. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಲೇಖಕರ ಅಕ್ಷರಾಭ್ಯಾಸ ಆರಂಭವಾದದ್ದು ಹೇಗೆ?

೨. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು?

೩. ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳಾವುವು?

೪. ವಿಶೇಷ ಪದಾರ್ಥಗಳನ್ನು ಕಡವಾಗಿ ಪಡೆಯುತ್ತಿದ್ದ ಹಾಗೂ ತೀರಿಸುತ್ತಿದ್ದ ಬಗೆ ಹೇಗೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು-ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಬಗ್ಗೆ ಹೇಗೆ ವರ್ಣಿಸಲಾಗಿದೆ?

೨. 'ಒರಿಜಿನಲ್' ಹಾಗೂ ಚರಟದ ಕಾಫಿಯನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿವರಿಸಿ.

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣಿ"

೨. "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು"

೩. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"

೪. "ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು"

೫. "ನನಗೆ ಚರಟದಲ್ಲಿ ಕಾಫಿಯೋ?"

**ಉ. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ**

೧. ಅಧಿಕೃತವಾಗಿ ಅನಂತಮೂರ್ತಿಯವರ ಮೊದಲ ಶಿಕ್ಷಕರು __________
(ಕೃಷ್ಣಪ್ಪಯ್ಯ ಅಮ್ಮ ತಂದೆ ಶೇಷಗಿರಿ)

೨. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಹಣ್ಣು ________
(ಮಾವಿನಹಣ್ಣು, ಸೀಬೆಹಣ್ಣು, ಹಲಸಿನ ಹಣ್ಣು, ಬಾಳೆಹಣ್ಣು )

೩. 'ಪಟ್ಟಾಂಗ' ಈ ಪದದ ಅರ್ಥ __________
(ಒಳ್ಳೆಯಮಾತು ಹರಟೆ ಪಟ್ಟಕಟ್ಟುವುದು ಕೆಟ್ಟಮಾತು)

೪. 'ಕಡೆಗೋಲು' ಪದವು __________ ಸಂಧಿಗೆ ಉದಾಹರಣೆಯಾಗಿದೆ
(ಆಗಮಸಂಧಿ ಗುಣಸಂಧಿ ಲೋಪಸಂಧಿ ಆದೇಶಸಂಧಿ)

೫. 'ಸಕ್ಕರೆ' ಪದದ ತತ್ಸಮರೂಪ __________
(ಸಕ್ಕರಿ ಸಕ್ಕಾರಿ ಶರ್ಕರಾ ಸರಕಾರಿ)

NOT TO BE REPUBLISHED © KTBS

## ಸೈದ್ಧಾಂತಿಕ ಭಾಷಾಭ್ಯಾಸ

**ಸಮಾಸ**

– ಜಯಪುರದ ಅರಮನೆ ಸುಂದರವಾಗಿದೆ.

– ರಸ್ತೆಯ ವಿಸ್ತರಣೆಗಾಗಿ ಹೆದ್ದಾರಿಯ ಬದಿಯಲ್ಲಿರುವ ಮರಗಳನ್ನು ಕಡಿಯಲಾಗಿದೆ.

ಈ ಎರಡು ವಾಕ್ಯಗಳಲ್ಲಿರುವ **'ಅರಮನೆ', 'ಹೆದ್ದಾರಿ'** ಎಂಬ ಎರಡು ಪದಗಳನ್ನು ಗಮನಿಸಿದಾಗ **'ಅರಮನೆ'** ಎಂಬ ಪದ **'ಅರಸನ ಮನೆ'** ಎಂಬ ಅರ್ಥವನ್ನೂ **'ಹೆದ್ದಾರಿ' ಎಂಬ ಪದ 'ಹಿರಿದಾದ ದಾರಿ'** ಎಂಬ ಅರ್ಥವನ್ನೂ ಕೊಡುವ ಪದಗಳೆಂದು ತಿಳಿಯುತ್ತದೆ. ಹೀಗೆ – **ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದವಾಗುವುದೇ ಸಮಾಸ.**

ಈ ರೀತಿ ಸಮಾಸವಾಗುವಾಗ ಸಂಸ್ಕೃತ ಪದದೊಂದಿಗೆ ಸಂಸ್ಕೃತ ಪದವೇ ಸೇರಬೇಕು. ಕನ್ನಡ ಪದದೊಂದಿಗೆ ಕನ್ನಡ ಪದವೇ ಸೇರಬೇಕು. ಸಂಸ್ಕೃತ ಪದಕ್ಕೆ ಕನ್ನಡ, ಕನ್ನಡ ಪದಕ್ಕೆ ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಬಾರದು. ಒಂದು ವೇಳೆ ಇಂತಹ ಪದಗಳೊಂದಿಗೆ ಸಮಾಸವಾದರೆ ಅದನ್ನು **'ಅರಿಸಮಾಸ'** ಎನ್ನುತ್ತಾರೆ. ಆದರೆ **ಪೂರ್ವದ ಕವಿಗಳು** ಪ್ರಯೋಗಿಸಿದ್ದರೆ, **ಬಿರುದಾವಳಿಗಳಾಗಿದ್ದರೆ** ಮತ್ತು **ಗಮಕ** ಅಥವಾ **ಕ್ರಿಯಾ** ಸಮಾಸಗಳಾಗಿದ್ದರೆ ದೋಷವಿಲ್ಲ.

ಕನ್ನಡ ಭಾಷೆಯಲ್ಲಿ **ತತ್ಪುರುಷ, ಕರ್ಮಧಾರಯ, ದ್ವಿಗು, ಅಂಶಿ, ದ್ವಂದ್ವ, ಬಹುವ್ರೀಹಿ, ಕ್ರಿಯಾ ಮತ್ತು ಗಮಕ** ಎಂಬ ಎಂಟು ವಿಧದ ಸಮಾಸಗಳು ಬಳಕೆಯಲ್ಲಿವೆ. ಸಮಾಸ ಪದಗಳನ್ನು ಬಿಡಿಸಿ ಬರೆಯುವ ಕ್ರಮವನ್ನು **ವಿಗ್ರಹವಾಕ್ಯ** ಅಥವಾ **ವಿಗ್ರಹಿಸುವುದು** ಎನ್ನುತ್ತಾರೆ. **ಉದಾ:** ತೈಲದ ಬಿಂದುಗಳು = ತೈಲ ಬಿಂದುಗಳು.

@KTBS NOT TO BE REPUBLISHED

**೧. ತತ್ಪುರುಷ ಸಮಾಸ**

**ಬೆಟ್ಟದ + ತಾವರೆ > ಬೆಟ್ಟದಾವರೆ (ಷಷ್ಠೀ ತತ್ಪುರುಷ)**

**ವಯಸ್ಸಿನಿಂದ + ವೃದ್ಧ > ವಯೋವೃದ್ಧ (ತೃತೀಯಾ ತತ್ಪುರುಷ)**

**ಹಗಲಿನಲ್ಲಿ + ಕನಸು > ಹಗಲುಗನಸು (ಸಪ್ತಮೀ ತತ್ಪುರುಷ)**

ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರಡೆರಡು ಪದಗಳು ಸೇರಿ ಒಂದು ಪದವಾಗಿರುವುದು, ಪೂರ್ವಪದದ ಅಂತ್ಯದಲ್ಲಿ ವಿಭಕ್ತಿಪ್ರತ್ಯಯವಿದ್ದು ಸಮಾಸವಾಗುವಾಗ ಆ ಪ್ರತ್ಯಯಗಳು ಲೋಪವಾಗಿರುವುದು ಕಂಡುಬರುತ್ತದೆ. ಯಾವ ವಿಭಕ್ತಿಪ್ರತ್ಯಯ ಲೋಪವಾಗಿದೆಯೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು.

**ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷ ಸಮಾಸ. ಇದರಲ್ಲಿ ಉತ್ತರಪದದ ಅರ್ಥ ಪ್ರಧಾನ.**

**೨. ಕರ್ಮಧಾರಯ ಸಮಾಸ**

**ಹಿರಿದು + ಮರ > ಹೆಮ್ಮರ**

**ಮೆಲ್ಲಿತು + ನುಡಿ > ಮೆಲ್ನುಡಿ**

**ದಿವ್ಯವಾದ + ಪ್ರಕಾಶ > ದಿವ್ಯಪ್ರಕಾಶ**

ಇಲ್ಲಿ **ಹಿರಿದು, ಮರ, ಮೆಲ್ಲಿತು, ನುಡಿ** ಎಂಬ ನಾಲ್ಕು ಪದಗಳು ಕನ್ನಡದವು. **ದಿವ್ಯ, ಪ್ರಕಾಶ** ಎಂಬ ಎರಡು ಪದಗಳು ಸಂಸ್ಕೃತ ಪದಗಳು. ಮೂರೂ ಸಮಾಸಗಳ ಪೂರ್ವಪದಗಳು ವಿಶೇಷಣಗಳಾಗಿವೆ. **'ದಿವ್ಯ'** ಸಂಸ್ಕೃತ ಪದವಾದ ಕಾರಣ ಅರ್ಥ ಸ್ಪಷ್ಟತೆಗಾಗಿ **'ಆದ'** ಎಂಬ ಪದ ಪೂರ್ವಪದಕ್ಕೆ ಸೇರಿ **'ದಿವ್ಯವಾದ'** ಎಂಬ ಪದ ರಚನೆಯಾಗಿದೆ. ಕನ್ನಡಪದಗಳಲ್ಲಿ ಹೀಗಿರುವುದಿಲ್ಲ. ಹೀಗೆ–**ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ. ಇದರಲ್ಲಿ ಉತ್ತರ ಪದದ ಅರ್ಥವೇ ಪ್ರಧಾನ.**

**ಕರ್ಮಧಾರಯ** ಸಮಾಸದಲ್ಲಿ **ವಿಶೇಷಣ ಪೂರ್ವಪದ ಕರ್ಮಧಾರಯ, ಉಪಮಾನ ಪೂರ್ವಪದ** ಅಥವಾ **ಉಪಮಾನ ಪರಪದ ಕರ್ಮಧಾರಯ, ಸಂಭಾವನಾ ಪೂರ್ವಪದ ಕರ್ಮಧಾರಯ, ಅವಧಾರಣಾ ಪೂರ್ವಪದ ಕರ್ಮಧಾರಯ ಸಮಾಸ** ಎಂಬ ನಾಲ್ಕು ವಿಧಗಳಿವೆ.

**೩. ದ್ವಿಗು ಸಮಾಸ**

**ಮೂರು + ಮಡಿ > ಮುಮ್ಮಡಿ**

**ನಾಲ್ಕು + ದೆಸೆ > ನಾಲ್ದೆಸೆ**

**ಪಂಚಗಳಾದ + ಇಂದ್ರಿಯ > ಪಂಚೇಂದ್ರಿಯ**

ಈ ಮೂರು ಸಮಾಸಗಳಲ್ಲಿ ಪೂರ್ವಪದ **ಸಂಖ್ಯಾವಾಚಕಗಳಾಗಿವೆ.** ಮೂರನೆಯದಾದ **ಪಂಚೇಂದ್ರಿಯ** ಎಂಬ ಪದದಲ್ಲಿ ಎರಡೂ ಪದಗಳು ಸಂಸ್ಕೃತವಾದುದರಿಂದ **ಆದ** ಎಂಬ ಪದ ಪೂರ್ವಪದದೊಂದಿಗೆ ಸೇರಿಕೊಂಡಿದೆ. ಹೀಗೆ–**ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿದ್ದರೆ ಅದು ದ್ವಿಗು ಸಮಾಸ.**

©KTBS NOT TO BE REPUBLISHED

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಸಮಾಸ ಎಂದರೇನು?

೨. ಸಮಾಸಗಳಲ್ಲಿ ಎಷ್ಟು ವಿಧ? ಪಟ್ಟಿಮಾಡಿ.

೩. ತತ್ಪುರುಷ ಸಮಾಸ ಎಂದರೇನು?

೪. ಕರ್ಮಧಾರಯ ಸಮಾಸದ ವಿಧಗಳಾವುವು?

೫. ದ್ವಿಗು ಸಮಾಸ ಎಂದರೇನು? ಉದಾಹರಣೆ ಕೊಡಿ.

## ಪ್ರಾಯೋಗಿಕ ಅಭ್ಯಾಸ

**ಅ. ನಿಮ್ಮ ಬಾಲ್ಯದ ಘಟನೆಗಳ ಕುರಿತು ಒಂದು ಲೇಖನವನ್ನು ರಚಿಸಿ.**

## ಪೂರಕ ಓದು

- ಯು.ಆರ್. ಅನಂತಮೂರ್ತಿಯವರ **'ಸುರಗಿ'** ಆತ್ಮಕಥನವನ್ನು ಓದಿ.
- ಕುವೆಂಪುರವರ ಆತ್ಮಕಥನ **'ನೆನಪಿನ ದೋಣಿಯಲ್ಲಿ'** ಕೃತಿಯನ್ನು ಓದಿ.

✦ ✦ ✦ ✦ ✦

@KTBS NOT TO BE REPUBLISHED

# ೯. ಸಪ್ತಾಕ್ಷರಿ ಮಂತ್ರ

Q7P3W3

**– ಮುದ್ದಣ**

**ಪ್ರವೇಶ :** ಕನ್ನಡ ಸಾಹಿತ್ಯವು ಹಂತಹಂತವಾಗಿ ಬದಲಾವಣೆಗೆ ಒಳಪಟ್ಟು ಹಳೆಗನ್ನಡ, ನಡುಗನ್ನಡ, ಹೊಸಗನ್ನಡ ಎಂಬ ರೂಪ ಪರಿವರ್ತನೆ ಪಡೆದುಕೊಂಡಿದೆ. ನಡುಗನ್ನಡ ಸಾಹಿತ್ಯವು ಹಿಂದೆ ಸರಿದು ಹೊಸಗನ್ನಡ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಹೊಸಗನ್ನಡ ಸಾಹಿತ್ಯಕ್ಕೆ ಮುನ್ನುಡಿ ಬರೆದು " ಹೊಸಗನ್ನಡದ ಅರುಣೋದಯದ ಮುಂಗೋಳಿ" ಎಂಬ ಪ್ರಶಂಸೆಗೆ ಭಾಜನರಾಗಿ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸುಭದ್ರ ಸ್ಥಾನ ಪಡೆದ ಕವಿ ಮುದ್ದಣ.

ರಾಮಾಯಣ ಮಹಾ ಕಾವ್ಯದ ಭಾಗವೊಂದರ ಕಥೆಯನ್ನು ಹೇಳ ಹೊರಡುವ ಕವಿ ಕಾವ್ಯದ ಮಧ್ಯದಲ್ಲಿ ತಮ್ಮ ಜೀವನದ ವಾಸ್ತವತೆಯನ್ನು ಬಿಚ್ಚಿಡುವುದು ಒಂದು ವೈಶಿಷ್ಟ್ಯವೇ ಸರಿ. ಇದು ಮುದ್ದಣ ಮನೋರಮೆಯರ ಸಲ್ಲಾಪವೆಂದೇ ಖ್ಯಾತಿ ಪಡೆದಿದೆ. ಕಾವ್ಯ ಧರ್ಮದೊಳಗೆ ಜೀವನ ಧರ್ಮವನ್ನು ಬೆರೆಸಿ ಹೇಳುವ ಕವಿಯ ಜಾಣ್ಮೆಯನ್ನು ಮೆಚ್ಚಲೇಬೇಕು. ಕಿತ್ತು ತಿನ್ನುವ ಬಡತನದ ವಾಸ್ತವ ಚಿತ್ರಣವನ್ನು ಲಘುಹಾಸ್ಯಮಯವಾಗಿಸುವ ಕಲೆಗಾರಿಕೆ ಮುದ್ದಣನಿಗೆ ಸಾಧ್ಯ ಎಂಬುದನ್ನು ಈ ಗದ್ಯಭಾಗದಲ್ಲಿ ಕಾಣಬಹುದಾಗಿದೆ.

ಇಂತು ಬಂದೊದವಿದ ಚಳಿಗಾಲದೊಳ್ ರಾಘವನ ಯಜ್ಞತುರಂಗಮಂ ಅರಣ್ಯಕನೆಂಬೊರ್ವ ಕಿತ್ತಡಿಯ ಪುಣ್ಯಾಶ್ರಮಮಂ ಪುಗುತರ್ಪುದುಂ, ಕಂಡು ಶತ್ರುಘ್ನಾದ್ಯರ್ ಮುನಿಯ ದರ್ಶನಕೆಂದೊಳಪೊಕ್ಕು ಮುನಿಗೆಱಗಿದರ್. ಆಗಳರಣ್ಯಕನಭ್ಯಾಗತರಂ ಮನ್ನಿಸಿ ಸರ್ವರನಾತಿಥ್ಯದಿಂ ಸತ್ಕರಿಸಿ ಶ್ರೀರಾಮಸತ್ಕಥಾ ವಿನೋದ ಗೋಷ್ಠಿಯೊಳ್....

**ಮನೋರಮೆ** : ಎನ್ನ ಚನ್ನಿಗ! ಆತಿಥ್ಯಮೆಂದೊಡೇಂ? ಬಱಿದೆ ಬಾಯುಪಚಾರಮೆ?

**ಮುದ್ದಣ** : ಅಲ್ತಲ್ತು, ಬಾಯ ಉಪಚಾರಮಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರಿತ್ತು ಕುಳ್ಳಿರಿಸಿ ಸವಿಗೂಟನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನಿರ್ದು ನುಡಿದು ನಡೆದು ಮನ್ನಿಪುದು.

**ಮನೋರಮೆ** : ಅಂತಿರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿನಿರ್ದಿದು ಪಡೆಗರಣ್ಯಕಂ ಕೂಟ್ನೀರಿತ್ತು ಸಮ್ಮನಿಸಿದನೆ?

**ಮುದ್ದಣ** : ಅಪ್ಪುದಪ್ಪುದು. ಅನಿಬರುಮಂ ಯಥೇಚ್ಛಂ ಮೃಷ್ಟಾನ್ನ ಭೋಜನದಿಂ ತಣಿಸಿದಂ.

@KTBS NOT TO BE REPUBLISHED



©KTBS
NOT TO BE REPUBLISHED

**ಮನೋರಮೆ** : ಎನಗಿದಚ್ಚರಿ. ಎಂತುಟಾರ್ತಂ?

**ಮುದ್ದಣ** : ಏಂ! ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ! ಬೇಡಿದ ಪುರುಳನುಱಿದಿಂ ತಂದೀಗುಂ.

**ಮನೋರಮೆ** : ಅಂತುಟೇಂ, ಘನಂ! ಆವುದೊ ಮಂತ್ರಂ.

**ಮುದ್ದಣ** : ಅವುದೇಂ! ಏಕಾಕ್ಷರೀ ದ್ವ್ಯಕ್ಷರೀ ತ್ರ್ಯಕ್ಷರೀ ಚತುರಾಕ್ಷರೀ ಪಂಚಾಕ್ಷರೀ ಷಡಕ್ಷರೀ ಮುಂತಪ್ಪ ಪ್ರಸಿದ್ಧ ಮಂತ್ರಂಗಳೊಳವಲ್ತೆ.

**ಮನೋರಮೆ** : ಓ! ಇನಿತೊಂದು ಜಪದ ಬಲ್ಮೆ ನೆರಮಿರ್ಪಿನಿಂ ಪೆಱತೊಂದಱ ಗೊಡವೆಯಿಲ್ಲದಿರ್ಕುಂ ತಾಪಸರ್.

**ಮುದ್ದಣ** : ಅಪ್ಪುದಪ್ಪುದು : ತಪ್ಪೇಂ?

**ಮನೋರಮೆ** : ಅಂತದಿರ್ಕೆ. ನಿನ್ನನ್ನರಪ್ಪ ಕಬ್ಬಿಗರ್ ಮನೆವಾೞ್ತೆಯೊಳಿನಿಸೊಂದುಂ ಗೊಡವೆಗೊಳ್ಳದೆ ಕೆಮ್ಮ ಕೆಮ್ಮನೆ ಪಾಟ್ಗಿತೆಯ ಕಬ್ಬದೊಳೇವೊೞ್ತುಂ ಬೆಮೆಗೊಂಡಿರ್ಪರಲೇ. ಅವರ್ಗೇಂ ಬಟ್ಟೆಯೊ? ಉಣಲೇಂ, ತಿನಲೇಂ? ಅಂತಿರೊಂದು ಜಪಮಂ ಪಿರಿಯ ತವಸಿಗಳತ್ತ ಣೆನುಪದೇಶಂ ಗೊಂಡೊಡಾಗದೆ!

| | | |
|---|---|---|
| ಮುದ್ದಣ | : | (ಮುಗುಳ್ನಗೆಯಿಂ) ಏಂ! ಎಮ್ಮವರೊಂದಿರಕೆ ನಗುವಾ? ಆ! ಎಮ್ಮನ್ನರಪ್ಪ ಕಬ್ಬಿಗರ್ಗೆಂ ಕೊಱತೆಯೊ! ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಟೆಯಿಸುವ ಪೊಗಟ್ವಿ ತೆಗಟ್ವಿ ಕೊಳ್ವಾಳ್ವ ತಾಳ್ವ ತೂಳ್ವ ಪೂಟ್ವಿ ಪೇಟ್ವಿ ಬಾಟ್ವಿ ಸಿಂಗರದ ಬಣ್ಣಗಬ್ಬಿಗರೆಮ್ಮತೆ – ಱನನಿನ್ನುಂ ನೀನಱೆಯಯ್. |
| ಮನೋರಮೆ | : | (ಬಿಸವಂದಂಗೊಂಡು) ನಿಮ್ಮವರ್ಗಮಂತಿರೆ ಮಂತ್ರಂ ಸಿದ್ಧಿವರ್ಕುಮೆ? |
| ಮುದ್ದಣ | : | ತಡೆಯೇನಳ್ಕೇಂ! |
| ಮನೋರಮೆ | : | ನಿನ್ನೊಳಮೊಳವೆ? |
| ಮುದ್ದಣ | : | ಎನ್ನೊಳಂತಿದು ಪಾಸುವೊಕ್ಕು. |
| ಮನೋರಮೆ | : | ಆ! ನೀನುಂ ಬಲ್ ಮೈಮೆಗಾಱಂ. ನಿನಗಾರತ್ತಣಿನೆಂದು ಪದೇಶಮಾಯ್ತು? |
| ಮುದ್ದಣ | : | ಗುರುವತ್ತಣಿನಂದೆಳವೆಯೊಳೆ. |
| ಮನೋರಮೆ | : | ಎನ್ನಱಕೆಯ! ಅದಾವುದೊ ಮಂತ್ರಮೆನ್ನೊಳುಸಿರ? |
| ಮುದ್ದಣ | : | ಎಲೆ ಪೆಣ್ಣೆ! ನೀನಾರೊಳಮೆಂದೆಂದಿಂಗುಮುಸಿರಲ್ಬಾರದು, ಜೋಕೆ! |
| ಮನೋರಮೆ | : | ಎಂದುಮೆಂತುಮುಸಿರನಾಡೆಂ. |
| ಮುದ್ದಣ | : | ಅಂತಾದೊಡಿಂತಿದು, ಕೇಳ್....ಭ....ವ....ಪೆಱರೊಳಾಡೆನೆಂಬ ನಂಬುಗ್ಗೆಯಂ ಪೊಯ್. |
| ಮನೋರಮೆ | : | ಇದೆ. ಪಿಡಿ ನಂಬುಗ್ಗೆಯಂ, ನಿನ್ನಾಣೆ, ಕುಲದ್ಯೆವದಾಣೆ! ಎಂದುಂ ಪೆಱವರೊಳೊರೆಯೆಂ. |
| ಮುದ್ದಣ | : | ಉಂ! ......ಭವತಿ......ಭಿ.....ನೀನೆಂತೊ ಮಱವೆಯೊಳ್ ಪೆಱರೊಡನುಸಿರ್ದು ಗುಟ್ಟಂ ಬಿಟ್ಟೊಡೆಮ್ಮನ್ನರ ಬಾಟ್ ಪಾಟಕ್ಕುಂ. |
| ಮನೋರಮೆ | : | ಆನೇಂ ಮೋಡೆಯೆ! ಪೋ! ತನ್ನಾಣೆ, ಕಣ್ಣಾಣೆ, ಕೇಳ್ವೆಂ. |
| ಮುದ್ದಣ | : | (ಎಕ್ಕಟಿಯೊಳ್) 'ಭವತಿ ಭಿಕ್ಷಾಂ ದೇಹಿ' ಎಂಬುದಿದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತಾಕ್ಷರೀ ಮಂತ್ರಂ. ಆರೊಳಾನುಮುಸಿರದಿರ್. |
| ಮನೋರಮೆ | : | (ಅರೆಮುನಿಸಿಂ) ಪೋ ಮಾಣೆಲೆ ರಮಣ! ನಿನ್ನ ನುಡಿಯಂ ಸಾಜಂ ನಿಕ್ಕುವಮೆಂದೇ ಬಗೆದೆನೀ ತೆಱನ ಮಾಟದ ಕವಡುನುಡಿಯ ಕೊಂಕೆಂಬುದನಱೆಯದಾದೆಂ. ನೀಂ ಕಬ್ಬಿಗನೊ, ಸಬ್ಬವಕಾಱನೊ! ನಿನ್ನೀ ಕಬ್ಬದ ಸೊಗಸನೆಮ್ಮನ್ನರಪ್ಪ ಜಾಣಿಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ? |
| ಮುದ್ದಣ | : | ಸಾಲ್ಗುಮೀಪರಿಹಾಸಂ. ಮುಂಗತೆಯಂ ಕೇಳ್. |

NOT TO BE REPUBLISHED ©KTBS

## ಕೃತಿಕಾರರ ಪರಿಚಯ



**ಲಕ್ಷ್ಮೀನಾರಾಯಣಪ್ಪ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ನಂದಳಿಕೆಯ ಶ್ರೀಮಹಾಲಿಂಗೇಶ್ವರ ದೇವಳದಲ್ಲಿ** ಮಾಲೆಗಾರರಾಗಿದ್ದ ತಿಮ್ಮಪ್ಪಯ್ಯ ಮತ್ತು ಮಹಾಲಕ್ಷ್ಮಮ್ಮ ದಂಪತಿಗಳ ಮಗ. **೧೮೭೦ ಜನವರಿ ೨೪** ರಂದು ಜನಿಸಿದ ಈತನನ್ನು ತಾಯಿ **'ಮುದ್ದಣ'** ಎಂದು ಮುದ್ದಿನಿಂದ ಕರೆಯುತ್ತಿದ್ದಳು. ಹಾಗಾಗಿ **'ಲಕ್ಷ್ಮೀನಾರಾಯಣ'** ಎಂದು ನಾಮಕರಣ ಮಾಡಿದ್ದರೂ ಕನ್ನಡನಾಡು ಈತನನ್ನು **'ಮುದ್ದಣ'** ಎಂದೇ ಕರೆಯಿತು. ಈತ ನಂದಳಿಕೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ ಉಡುಪಿಗೆ ಬಂದರೂ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಾಗದೆ ವ್ಯಾಯಾಮ ಶಿಕ್ಷಕನ ತರಬೇತಿ ಪಡೆದು ೧೮೮೯ರಲ್ಲಿ ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಾಗಿ ಹತ್ತು ರೂಪಾಯಿ ಮಾಸಿಕ ವೇತನ ಪಡೆದು ವೃತ್ತಿ ಜೀವನ ಆರಂಭಿಸಿದರು.

©KTBS NOT TO BE REPUBLISHED

ಅದೃಷ್ಟವಶಾತ್ ಮಳಲಿ ಸುಬ್ಬರಾಯರೆಂಬ ವಿದ್ವಾಂಸರ ಪರಿಚಯವಾಗಿ ಮುದ್ದಣನಲ್ಲಿ ಸಾಹಿತ್ಯಾಸಕ್ತಿ ಬೆಳೆಯಿತು. ತತ್ಪರಿಣಾಮವಾಗಿ **'ರತ್ನಾವತಿ ಕಲ್ಯಾಣ'** ಮತ್ತು **'ಕುಮಾರ ವಿಜಯ'** ಎಂಬ ಯಕ್ಷಗಾನ ಪ್ರಸಂಗಗಳು, ವಾರ್ಧಕ ಷಟ್ಪದಿಯಲ್ಲಿ ರಚಿಸಲ್ಪಟ್ಟ **'ಶ್ರೀರಾಮಪಟ್ಟಾಭಿಷೇಕಂ'** ಕಾವ್ಯ, ಹಳಗನ್ನಡ ಶೈಲಿಯಲ್ಲಿ ಬರೆಯಲ್ಪಟ್ಟ **'ಅದ್ಭುತ ರಾಮಾಯಣ'** ಮತ್ತು **'ಶ್ರೀರಾಮಾಶ್ವಮೇಧಂ'** ಗದ್ಯಕಾವ್ಯಗಳು ಮುದ್ದಣನಿಂದ ರಚಿತವಾದುವು. ಉಡುಪಿಯಿಂದ ಕುಂದಾಪುರದ ಬೋರ್ಡ್ ಹೈಸ್ಕೂಲಿಗೆ ವರ್ಗಾವಣೆಗೊಂಡು ಕೆಲವು ಸಮಯದ ಬಳಿಕ ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದರು.

**'ಹೊಸಗನ್ನಡ ಅರುಣೋದಯದ ಮುಂಗೋಳಿ'** ಎಂಬ ಪ್ರಶಂಸೆಗೆ ಭಾಜನನಾದ ಮುದ್ದಣ, ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸುಭದ್ರ ಸ್ಥಾನ ಗಳಿಸಿದ್ದಾನೆ. ಒಂದು ಕಡೆ ಕಡುಬಡತನ ಇನ್ನೊಂದು ಕಡೆ ಆಗಿನ ಕಾಲದಲ್ಲಿ ಗುಣಪಡಿಸಲು ಸಾಧ್ಯವಾಗದಿದ್ದ ಕಾಯಿಲೆ–ಇವೆರಡರಿಂದ ಜರ್ಜರಿತನಾದ ಮುದ್ದಣ ಅಲ್ಪಾಯುಷಿಯಾಗಿ ೧೯೦೧ರ ಫೆಬ್ರವರಿ ಹದಿನೈದರಂದು ಇಹಲೋಕ ತ್ಯಜಿಸಿದರು.

**'ಸಪ್ತಾಕ್ಷರಿ ಮಂತ್ರ'** ಗದ್ಯಭಾಗವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ, **'ಮುದ್ದಣ ಭಂಡಾರ'** – ಸಂಪುಟ ಎರಡು – ಇದರ **'ತ್ರಯೋದಶಾಶ್ವಾಸಂ – ಅರಣ್ಯಕ ಮುನಿದರ್ಶನಂ'** ಭಾಗದಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಲಾಗಿದೆ.

## ಆಶಯ

ಎಷ್ಟೇ ಕಷ್ಟಗಳಿದ್ದರೂ ಮನಸ್ಸನ್ನೇ ಸುಡುವ ಚಿಂತೆಯಿದ್ದರೂ ನವಿರಾದ ಹಾಸ್ಯ ಅವುಗಳನ್ನು ಸ್ವಲ್ಪಕಾಲ ಮರೆಯುವಂತೆ ಮಾಡುತ್ತದೆ. 'ನಗು' ಮಾನವನನ್ನು ಗೆಲುವಿನ ಹಾದಿಗೆ ತರುವ ದಿವ್ಯೌಷಧ. 'ಶ್ರೀರಾಮಾಶ್ವಮೇಧಂ' ಕೃತಿಯಲ್ಲಿ ಮಡದಿ ಮನೋರಮೆ (ನಿಜನಾಮ ಕಮಲಾಬಾಯಿ) ಯೊಡನೆ ಸಂವಾದದಲ್ಲಿ ನಿರತನಾದಾಗ ವ್ಯಕ್ತವಾಗುವ ಮಾತುಗಳು ಮುದ್ದಣನ ಕಷ್ಟ ಜೀವನದ ಪ್ರತೀಕವೇ ಆಗಿವೆ. ಪ್ರಕೃತ ಗದ್ಯಭಾಗದಲ್ಲಿ 'ಸಪ್ತಾಕ್ಷರೀ ಮಂತ್ರದ' ಶ್ರೇಷ್ಠತೆಯ ನೆಪದೊಂದಿಗೆ ತನ್ನ ಹಾಗೂ ಅಂದಿನ ಕವಿಗಳ ದಾರಿದ್ರ್ಯವನ್ನು ಪರೋಕ್ಷವಾಗಿ ಮುದ್ದಣ ವ್ಯಕ್ತಪಡಿಸಿದ್ದಾನೆ. ಹೊರನೋಟಕ್ಕೆ ಕುತೂಹಲಕಾರಿಯೂ ಹಾಸ್ಯಮಯವೂ ಆಗಿದ್ದರೆ ಒಳಗೆ ದಾರುಣವ್ಯಥೆಯ ಕಥೆ ಅಡಗಿಕೊಂಡು ಕರುಣಾರಸ ಅಂತರ್ಗತವಾಗಿ ಹರಿಯುವುದನ್ನು ಇಲ್ಲಿ ಕಾಣಬಹುದು.

* * *

### ಪೂರ್ವ ಕಥೆ

ಶ್ರೀರಾಮನು ರಾವಣಾದಿಗಳನ್ನು ಸಂಹರಿಸಿ ಹರಿಭಕ್ತನೂ ರಾವಣನ ಸೋದರನೂ ಆದ ವಿಭೀಷಣನಿಗೆ ಲಂಕೆಯ ಪಟ್ಟಕಟ್ಟಿ ಸೀತಾ ಸಮೇತ ಅಯೋಧ್ಯೆಗೆ ಬಂದು ರಾಜ್ಯಭಾರ ಮಾಡುತ್ತಿದ್ದನು. ಹೀಗೆ ಹಲವು ವರ್ಷಗಳು ಕಳೆಯುತ್ತಿರಲು ಸೀತೆ ಗರ್ಭಿಣಿಯಾದಳು. ಅದೊಂದು ದಿನ ಸೀತೆಯೊಡನೆ ಶ್ರೀರಾಮಚಂದ್ರನು ರಾಣೀವಾಸದ ಮೊಗಸಾಲೆಯಲ್ಲಿ ಕುಳಿತು ಸಲ್ಲಾಪಗೈಯುತ್ತಿರುವಾಗ ಸೀತೆ ತನ್ನಮನದ ಬೇಸರ ಕಳೆಯಲೋಸುಗ ಕಾಡಿನ ಋಷಿಯಾಶ್ರಮಕ್ಕೆ ಹೋಗಿಬರಬೇಕೆಂಬ ಆಸೆಯನ್ನು ಪ್ರಕಟಿಸಿದಳು. ಇದಕ್ಕೊಪ್ಪಿದ ಶ್ರೀರಾಮ ಆದಷ್ಟು ಬೇಗ ಲಕ್ಷ್ಮಣನ ಮೂಲಕ ವ್ಯವಸ್ಥೆ ಮಾಡುವೆನೆಂಬ ಭರವಸೆ ನೀಡಿದ. ಅದೇ ದಿನ ರಾತ್ರಿ ಪ್ರಜೆಯೊಬ್ಬ ಆಡಿದ ಮಾತನ್ನು ಬೇಹುಗಾರರಿಂದ ತಿಳಿದ ರಾಮ, ಸೀತೆ ನಿಷ್ಕಳಂಕಿನಿ ಎಂದು ತಿಳಿದಿದ್ದರೂ ಪ್ರಜಾಭಿಪ್ರಾಯಕ್ಕೆ ಮನ್ನಣೆ ನೀಡಬೇಕಾದುದು ರಾಜನ ಆದ್ಯಕರ್ತವ್ಯ ಎಂಬ ದೃಷ್ಟಿಯಿಂದ ಆಕೆಯನ್ನು ತೊರೆಯಲು ನಿರ್ಧರಿಸಿದ. ರಾಜಾಜ್ಞೆಯನ್ನು ಮೀರಲಾರದ ಲಕ್ಷ್ಮಣ ಋಷ್ಯಾಶ್ರಮದರ್ಶನದ ನೆಪವೊಡ್ಡಿ ಸೀತೆಯನ್ನು ಕರೆದೊಯ್ದು ಗೊಂಡಾರಣ್ಯದಲ್ಲಿ ಬಿಟ್ಟುಬಂದನು.

ಇತ್ತ ರಾಜಾರಾಮನೆನಿಸಿಕೊಂಡ ಶ್ರೀರಾಮ ಸೀತಾಪರಿತ್ಯಾಗದಿಂದ ವೈಯಕ್ತಿಕವಾಗಿ ನೊಂದಿದ್ದರೂ ರಾಜ್ಯಭಾರದಲ್ಲಿ ಎಳ್ಳಷ್ಟೂ ಅಪಚಾರ ಎಸಗದೆ ಪ್ರಜಾಪಾಲನೆಯಲ್ಲಿ ತೊಡಗಿದ್ದ. ಅದೊಂದು ದಿನ ಅಗಸ್ತ್ಯಮಹರ್ಷಿಗಳು ಶಿಷ್ಯರೊಂದಿಗೆ ಅಯೋಧ್ಯೆಗೆ ಬಂದಾಗ ಅವರನ್ನು ಗೌರವಾದರಗಳಿಂದ ಬರ ಮಾಡಿಕೊಂಡ ರಾಮ ಋಷಿಪರಿವಾರವನ್ನು ಷೋಡಶೋಪಚಾರದಿಂದ ಸತ್ಕರಿಸಿದ. ತನ್ನಿಂದ ಹತನಾದ ರಾವಣ ಬ್ರಹ್ಮಮಾನಸ ಪುತ್ರ ಪುಲಸ್ತ್ಯರ ಮಗನಾದ ವಿಶ್ರವಸುವಿನ ಮಗನೆಂದೂ ವೇದ ಪಾರಂಗತನೆಂದೂ ಅಗಸ್ತ್ಯರಿಂದ ಕೇಳಿತಿಳಿದ ರಾಮ, ರಾವಣನ ಹತ್ಯೆಯಿಂದ ತನಗೆ ಬ್ರಹ್ಮಹತ್ಯಾ ದೋಷ ಪ್ರಾಪ್ತಿಯಾಯಿತೆಂದು ದು:ಖಿತನಾದ. "ಪಾಪಿಗಳ ಪಾಪನಾಶ ಮಾಡಬಲ್ಲ ನಿನಗೆಂತಹ ಪಾಪವಯ್ಯಾ, ದುಷ್ಟಸಂಹಾರಕ್ಕಾಗಿ ಧರೆಗಿಳಿದು ನಿನ್ನ ಕರ್ತವ್ಯವನ್ನು ಮಾಡಿರುವ ನೀನು ಅಂಜಬೇಕಿಲ್ಲ" ಎಂದು

©KTBS NOT TO BE REPUBLISHED

ಅಗಸ್ತ್ಯರು ಸಮಾಧಾನಪಡಿಸಿದರೂ ರಾಮ ಒಪ್ಪಲಿಲ್ಲ. ಅಶ್ವಮೇಧವನ್ನು ಮಾಡಿದರೆ ಬ್ರಹ್ಮಹತ್ಯಾದೋಷ ನಿವಾರಣೆಯಾಗುವುದೆಂದು ಅಗಸ್ತ್ಯರು ಹೇಳಿದ ಮೇರೆಗೆ ರಾಮನು ಅಶ್ವಮೇಧ ಕೈಗೊಳ್ಳಲು ನಿರ್ಧರಿಸಿದ.

ಯಜ್ಞಾಶ್ವದ ಬೆಂಗಾವಲಿಗೆ ಶತ್ರುಘ್ನನ ಮುಂದಾಳತ್ವದಲ್ಲಿ ಜಾಂಬವ, ಹನುಮಂತ, ಸುಗ್ರೀವಾದಿ ಕಪಿವೀರರು ಹಾಗೂ ಅಯೋಧ್ಯೆಯ ಸೈನ್ಯ ಹೊರಟಿತು. ಯಜ್ಞಾಶ್ವ ತನ್ನಿಚ್ಛಾನುಸಾರ ನಾನಾ ಕಡೆಗಳಲ್ಲಿ ಸಂಚರಿಸುತ್ತಿರುವಾಗ ಕೆಲವು ರಾಜರು ಇದು ರಾಮನ ಯಜ್ಞಾಶ್ವವೆಂದು ತಿಳಿದ ತಕ್ಷಣ ಕಪ್ಪಕಾಣಿಕೆ ನೀಡಿ ತಾವೂ ಅಶ್ವದ ಬೆಂಗಾವಲಿಗೆ ಹೊರಟರು. ಕೆಲವರು ಅಶ್ವವನ್ನು ಕಟ್ಟಿ ಕದನಕ್ಕಿಳಿದು ಸೋತು ಶರಣಾದರು. ಹೀಗೆ ಸಂಚರಿಸುತ್ತಾ ಚಳಿಗಾಲದಲ್ಲಿ ಒಂದು ದಿನ, ಯಜ್ಞಾಶ್ವ ಅರಣ್ಯಕಮುನಿಯ ಆಶ್ರಮವನ್ನು ಹೊಕ್ಕಿತು. ವಿಷಯ ತಿಳಿದ ಶತ್ರುಘ್ನಾದ್ಯರು ಮುನಿಯ ದರ್ಶನ ಮಾಡಿ ಆಶೀರ್ವಾದ ಪಡೆಯುವ ಸಲುವಾಗಿ ಆಶ್ರಮವನ್ನು ಪ್ರವೇಶಿಸಿ ವಂದಿಸಿದರು. ತಮ್ಮಾಶ್ರಮಕ್ಕೆ ಬಂದ ಶತ್ರುಘ್ನ ಹಾಗೂ ಅವನ ಪರಿವಾರವನ್ನು ಅರಣ್ಯಕ ಆಶೀರ್ವದಿಸಿ ಸತ್ಕರಿಸಿದನು.

ಅದುವರೆಗೆ ರಾಮಾಶ್ವಮೇಧದ ಕತೆಯನ್ನು ಮುದ್ದಣನಿಂದ ಕೇಳುತ್ತಿದ್ದ ಮನೋರಮೆಗೆ ಸಂದೇಹವೊಂದು ಮೂಡಿತು. ಆ ಸಂದೇಹ ಯಾವುದು? ಮುದ್ದಣ ಅದನ್ನು ಹೇಗೆ ಪರಿಹರಿಸಿದ? ಇದರ ಒಳಗುಟ್ಟೇನು? ಎಂಬುದೇ ಪಠ್ಯಭಾಗದ ಸಾರ.

© KTBS NOT TO BE REPUBLISHED

## ಪದ ವಿಂಗಡಣೆ

ಇಂತು ಬಂದು + ಒದವಿದ ಚಳಿಗಾಲದೊಳ್ ರಾಘವನ ಯಜ್ಞ ತುರಂಗಮಂ ಅರಣ್ಯಕನ್ + ಎಂಬ + ಒರ್ವ ಕಿತ್ತಡಿಯ ಪುಣ್ಯ + ಆಶ್ರಮಮಂ ಪುಗುತರ್ಪುದುಂ; ಕಂಡು ಶತ್ರುಘ್ನ + ಆದ್ಯರ್ ಮುನಿಯ ದರ್ಶನಕೆ + ಎಂದು + ಒಳಪೊಕ್ಕು ಮುನಿಗೆ + ಎಱ(ರ)ಗಿದರ್. ಆಗಳ್ + ಅರಣ್ಯಕನ್ + ಅಭ್ಯಾಗತರಂ ಮನ್ನಿಸಿ ಸರ್ವರಂ + ಆತಿಥ್ಯದಿಂ ಸತ್ಕರಿಸಿ ಶ್ರೀರಾಮ ಸತ್ಕಥಾ ವಿನೋದ ಗೋಷ್ಠಿಯೊಳ್....

**ಮನೋರಮೆ** : ಎನ್ನ ಚನ್ನಿಗ! ಅತಿಥ್ಯಂ + ಎಂದೊಡೆ + ಏಂ? ಬಱೆ(ರಿ)ದೆ ಬಾಯ +ಉಪಚಾರಮೆ?

**ಮುದ್ದಣ** : ಅಲ್ತು + ಅಲ್ತು, ಬಾಯ ಉಪಚಾರಂ + ಅಲ್ತು. ಬಂದರ್ಗೆ ಕೈಗೆ ಕಾಲ್ಗೆ ನೀರು + ಇತ್ತು ಕುಳ್ಳಿರಿಸಿ ಸವಿ + ಕೂೞ(ಳ)ನ್ + ಇಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನೆ + ಇರ್ದು ನುಡಿದು ನಡೆದು ಮನ್ನಿಪುದು.

**ಮನೋರಮೆ** : ಅಂತೆ + ಇರ್ಪುದುಂ, ಶತ್ರುಹನ ಸಾಯಿರ ಸಾಯಿರ ಲೆಕ್ಕದಿ + ಇನಿ + ಪಿರಿದು ಪಡೆಗೆ + ಅರಣ್ಯಕಂ ಕೂೞ್(ಳ್) + ನೀರು + ಇತ್ತು ಸಮ್ಮನಿಸಿದನೆ?

**ಮುದ್ದಣ** : ಅಪ್ಪುದು + ಅಪ್ಪುದು. ಅನಿಬರುಮಂ ಯಥಾ + ಇಚ್ಛಂ ಮೃಷ್ಟ+ ಅನ್ನ ಭೋಜನದಿಂ ತಣಿಸಿದಂ.

**ಮನೋರಮೆ** : ಎನಗೆ + ಇದು + ಅಚ್ಚರಿ ಎಂತುಟು + ಆರ್ತಂ?

**ಮುದ್ದಣ** : ಏಂ! ಮುನಿಗಳ + ಒಂದು ಜಪದ ತಪದ ಮಂತ್ರದ ಬಲ್ಮೆ + ಏಂ ಕಿಱ(ರಿ)ದೆ! ಬೇಡಿದ ಪುರುಳಂ + ಉಱ(ರ)ದಿಂ ತಂದು + ಈಗುಂ.

**ಮನೋರಮೆ** : ಅಂತುಟು + ಏಂ, ಘನಂ! ಆವುದೊ ಮಂತ್ರಂ?

**ಮುದ್ದಣ** : ಆವುದು + ಏಂ! ಏಕ + ಅಕ್ಷರೀ ದ್ವಿ + ಅಕ್ಷರೀ ತ್ರಿ + ಅಕ್ಷರೀ ಚತುರ್ + ಅಕ್ಷರೀ ಪಂಚ + ಅಕ್ಷರೀ ಷಟ್ + ಅಕ್ಷರೀ ಮುಂತೆ + ಅಪ್ಪ ಪ್ರಸಿದ್ಧ ಮಂತ್ರಂಗಳ್ + ಒಳವು + ಅಲ್ತೆ.

**ಮನೋರಮೆ** : ಓ! ಇನಿತು + ಒಂದು ಜಪದ ಬಲ್ಮೆ ನೆರಮ್ + ಇರ್ಪಿನಿಂ ಪೆಱ(ರ)ತು + ಒಂದಱ(ರ ಗೊಡವೆ + ಇಲ್ಲದೆ + ಇರ್ಕುಂ ತಾಪಸರ್.

**ಮುದ್ದಣ** : ಅಪ್ಪುದು + ಅಪ್ಪುದು ; ತಪ್ಪು + ಏಂ?

**ಮನೋರಮೆ** : ಅಂತೆ + ಅದು + ಇರ್ಕೆ. ನಿನ್ನ + ಅನ್ನರ್ + ಅಪ್ಪ ಕಬ್ಬಿಗರ್ ಮನೆವಾೞ್ತೆ(ಳ್ತೆ) ಯೊಳ್ + ಇನಿಸು + ಒಂದುಂ ಗೊಡವೆ + ಕೊಳ್ಳದೆ ಕೆಮ್ಮಕೆಮ್ಮನೆ ಪಾೞ್(ಳ್) + ಕತೆಯ ಕಬ್ಬದೊಳ್ ಏ + ಪೊೞ್ತುಂ(ಳ್ತುಂ) ಬೆಮೆಗೊಂಡು + ಇರ್ಪರ್+ ಅಲೇ. ಅವರ್ಗೆ + ಏಂ ಬಟ್ಟೆಯೊ? ಉಣಲ್ + ಏಂ, ತಿನಲ್ + ಏಂ? ಅಂತೆ+ ಇರೆ + ಒಂದು ಜಪಮಂ ಪಿರಿಯ + ತವಸಿಗಳ + ಅತ್ತಣಿಂ + ಉಪದೇಶಂ + ಕೊಂಡೊಡೆ + ಆಗದೆ!

**ಮುದ್ದಣ** : (ಮುಗುಳ್ನಗೆ + ಇಂ) ಏಂ + ಎಮ್ಮ + ಅವರ + ಒಂದು + ಇರಕೆ ನಗುವಾ? ಆ ! ಎಮ್ಮ + ಅನ್ನರ್ + ಅಪ್ಪ ಕಬ್ಬಿಗರ್ಗೆ ಏಂ ಕೊಱ(ರ)ತೆಯೊ ! ತಮ್ಮ + ಒಂದೆ ನುಡಿಯ ಬಲ್ಪಿಂ ಮೂಜಗಮುಮಂ + ಅೞೆ(ಳಿ)ಯಿಸುವ ಪೊಗೞ್ವ(ಳ್ವ), ತೆಗೞ್ವ(ಳ್ವ), ಕೊಳ್ + ಆಳ್ವ, ತಾಳ್ವ, ತೂಳ್ವ ಪೂೞ್ವ(ಳ್ವ), ಪೇೞ್ವ(ಳ್ವ), ಬಾೞ್ವ(ಳ್ವ), ಸಿಂಗರದ ಬಣ್ಣ + ಕಬ್ಬಿಗರ್ + ಎಮ್ಮ ತೆರನಂ + ಇನ್ನುಂ ನೀನ್ + ಅಱೆ(ರಿ)ಯಯ್.

**ಮನೋರಮೆ** : (ಬಿಸವಂದಂ+ಕೊಂಡು) ನಿಮ್ಮ + ಅವರ್ಗಮ್ + ಅಂತೆ + ಇರೆ ಮಂತ್ರಂ ಸಿದ್ಧಿ+ಅರ್ಕುಮೆ?

**ಮುದ್ದಣ** : ತಡೆ + ಏಂ + ಅಳ್ಕು + ಏಂ?

**ಮನೋರಮೆ** : ನಿನ್ನ + ಒಳಮ್ + ಒಳವೆ?

**ಮುದ್ದಣ** : ಎನ್ನೊಳ್ + ಅಂತು + ಇದು ಪಾಸು + ಪೊಕ್ಕು.

**ಮನೋರಮೆ** : ಆ ! ನೀನುಂ ಬಲ್ ಮೈಮೆಗಾಱಂ(ರಂ) ನಿನಗೆ + ಆರ + ಅತ್ತಣಿಂ + ಎಂದು ಉಪದೇಶಂ + ಆಯ್ತು?

©KTBS NOT TO BE REPUBLISHED

ಮುದ್ದಣ : ಗುರು + ಅತ್ತಣಿಂ + ಅಂದೆ + ಎಳವೆಯೊಳೆ

ಮನೋರಮೆ : ಎನ್ನ + ಎಱಿಕೆ(ರೆ)ಯ ! ಅದು + ಆವುದೊ ಮಂತ್ರಮ್ + ಎನ್ನೊಳ್ + ಉಸಿರ?

ಮುದ್ದಣ : ಎಲೆ ಪೆಣ್ಣೆ ! ನೀನು + ಆರೊಳಂ + ಎಂದು + ಎಂದಿಂಗುಂ + ಉಸಿರಲ್ + ಬಾರದು, ಜೋಕೆ !

ಮನೋರಮೆ : ಎಂದುಂ + ಎಂತುಂ + ಉಸಿರಂ + ಆಡೆಂ

ಮುದ್ದಣ : ಅಂತು + ಆದೊಡೆ + ಇಂತು + ಇದು, ಕೇಳ್....ಭ ....ವ....ಪೆಱ(ರ) ರೊಳ್ + ಆಡೆನ್ + ಎಂಬ ನಂಬುಗ್ಯೆಯಂ ಪೊಯ್

ಮನೋರಮೆ : ಇದೆ ಪಿಡಿ ನಂಬುಗ್ಯೆಯಂ, ನಿನ್ನ + ಆಣೆ, ಕುಲದ್ಯೆವದ + ಆಣೆ ! ಎಂದುಂ ಪೆಱ(ರ) ವರೊಳ್ + ಒರೆಯೆಂ

ಮುದ್ದಣ : ಉಂ ! ......ಭವತಿ......ಭಿ.....ನೀನ್ + ಎಂತೊ ಮಱ(ರ)ವೆಯೊಳ್ ಪೆಱ(ರ) ರೊಡಂ+ ಉಸಿರ್ದು ಗುಟ್ಟಂ ಬಿಟ್ಟೊಡೆ + ಎಮ್ಮನ್ನರ ಬಾೞ್(ಳ್) ಪಾೞ್(ಳ್) + ಅಕ್ಕುಂ

ಮನೋರಮೆ : ಆನ್ + ಏಂ ಮೋಡೆಯೆ ! ಪೋ ! ತನ್ನ + ಆಣೆ, ಕಣ್ಣ + ಆಣೆ, ಕೇಳ್ವೆಂ

ಮುದ್ದಣ : 'ಭವತಿ ಭಿಕ್ಷಾಂ ದೇಹಿ' ಎಂಬುದು + ಇದುವೆ ಕಬ್ಬಿಗರ್ಗೆ ಸಿದ್ಧಿಸಿದ ಪೆರ್ಮೆಯ ಸಪ್ತ + ಅಕ್ಷರೀ ಮಂತ್ರಂ. ಆರೊಳ್ + ಆನುಂ + ಉಸಿರದಿರ್

ಮನೋರಮೆ : ಪೋ ಮಾಣ್ + ಎಲೆ ರಮಣ ! ನಿನ್ನ ನುಡಿಯಂ ಸಾಜಂ ನಿಕ್ಕುವಂ + ಎಂದೇ ಬಗೆದೆಂ ಈ ತೆಱ(ರ)ನ ಮಾಟದ ಕವಡು ನುಡಿಯು ಕೊಂಕು + ಎಂಬುದನ್ + ಅರಿಯದೆ + ಆದೆಂ. ನೀಂ ಕಬ್ಬಿಗನೊ, ಸಬ್ಬವಕಾಱ(ರ)ನೊ? ನಿನ್ನ + ಈ ಕಬ್ಬದ ಸೊಗಸಂ + ಎಮ್ಮ + ಅನ್ನರ್ + ಅಪ್ಪ ಜಾಣೆಲಿ + ಪೆಣ್ಗಳೆ ಕೊಂಡಾಡುವರ್ + ಅಲ್ಲದೆ + ಬಲ್ಲರ್ + ಏನ್ + ಒಲ್ವರೇ?

ಮುದ್ದಣ : ಸಾಲ್ಗುಂ + ಈ ಪರಿಹಾಸಂ. ಮುಂ + ಕತೆಯಂ ಕೇಳ್

## ಪದಗಳ ಅರ್ಥ

ಅಂತುಟು – ಅಷ್ಟು, ಹಾಗೆ ; ಅನ್ನರ್ – ಅಂತಹವರು; ಅಭ್ಯಾಗತರು – ತಾವಾಗಿಯೇ ಬಂದವರು ; ಅಲೇ – ಅಲ್ಲವೇ ; ಅಲ್ತು – ಅಲ್ಲ ; ಅಲ್ತೆ – ಅಲ್ಲವೆ; ಅೞಿ– ನಾಶ ; ಆದ್ಯರ್– ಮೊದಲಾದವರು ; ಆರ್ತ – ಸಮರ್ಥ ; ಇಂತು – ಹೀಗೆ ; ಇನಿತು – ಇಷ್ಟು ; ಇರಕೆ – ಇರುವಿಕೆಗೆ ; ಇರ್ಕುಂ – ಇರುವರು ; ಇರ್ಕೆ – ಇರಲಿ ; ಈಗುಂ – ಕೊಡುವುದು, ಕೊಡಬಲ್ಲುದು ; ಉರದಿ – ಕೂಡಲೆ, ತಕ್ಷಣ ; ಉಸಿರು – ಹೇಳು ; ಎಂತುಟು – ಹೇಗೆ ;

ಎರಗು– ನಮಸ್ಕರಿಸು; ಎಱೆಯ – ಒಡೆಯ, ಪ್ರಿಯ ; ಎಳವೆ – ಬಾಲ್ಯ ; ಏಂ – ಏನು; ಏಕ – ಒಂದು ; ಒದವಿದ – ಒದಗಿದ ; ಒರೆ – ಹೇಳು ; ಒಲ್ವರೇ – ಮೆಚ್ಚುವರೇ ; ಒಳವು – ಇರುವುವು ; ಒಳವೆ –ಇರುವುದೇ; ಕಬ್ಬ – ಕಾವ್ಯ ; ಕವಡು – ಕಪಟ ; ಕಿತ್ತಡಿ – ತಪಸ್ವಿ ; ಕೆಮ್ಮನೆ – ಸುಮ್ಮನೆ ; ಕೊಳ್ – ಖರೀದಿಸು, ಬೆಲೆಕೊಟ್ಟು ತೆಗೆದುಕೊ, ಕೊಂಡುಕೊ ; ಗನ – ಘನ, ಶ್ರೇಷ್ಠ ; ಗೋಷ್ಠಿ – ಮಾತುಕತೆ, ಸಂಭಾಷಣೆ, ಕಥಾಲಾಪ ; ಚತುರ್ – ನಾಲ್ಕು ; ಚೆನ್ನಿಗ – ಚೆಲುವ ; ಜಾಣಿಲಿ – ಜಾಣ್ಮೆ ಇಲ್ಲದ ; ತಣಿಸಿದಂ – ತೃಪ್ತಿಪಡಿಸಿದನು ; ತಾಳ್ವ – ಅನುಭವಿಸುವ; ತುರಂಗ – ತುರಗ, ಕುದುರೆ, ಅಶ್ವ ; ತೂಳ್ವ– ನಾಶಪಡಿಸುವ ; ತೆಱ –ಅವಕಾಶ, ಸಾಮರ್ಥ್ಯ; ತ್ರಿ – ಮೂರು; ದ್ವಿ – ಎರಡು ; ನಂಬುಗೆ – ಭರವಸೆ ; ನಿಕ್ಕುವ – ನಿಶ್ಚಯ ; ನಿನ್ನೊಳಮ್ – ನಿನ್ನಲ್ಲಿಯೂ; ನೆರಮ್– ಸಹಾಯ ; ಪಂಚ –ಐದು; ಪರಿಹಾಸ – ಚೇಷ್ಟೆ, ವಿನೋದ ; ಪಾಸುವೊಕ್ಕು – ಹಾಸುಹೊಕ್ಕು ; ಪುಗುತರ್ಪುದುಂ – ಪ್ರವೇಶಿಸುವುದು, ಪ್ರವೇಶಿಸಿತು ; ಪುರುಳಂ – ದ್ರವ್ಯವನ್ನು ; ಪೂಟ್ವಿ– ಹುಗಿಯುವ, ಹೂಳುವ ; ಪೆರ್ಮೆ – ಹೆಮ್ಮೆ; ಪೆಱ – ಇತರ ; ಪೇಳ್ವ – ಆಜ್ಞಾಪಿಸುವ ; ಪೊಯ್ –ಕೊಡು; ಬಟ್ಟೆ – ದಾರಿ ; ಬಲ್ಪು – ಸಾಮರ್ಥ್ಯ ; ಬಲ್ಮೆ – ಬಲುಮೆ, ಶಕ್ತಿ ; ಬಾವನ್ನ – ಶ್ರೀಗಂಧ ; ಬಾಟ್ವಿ– ಬಾಳಿಸುವ, ಉಳಿಸುವ; ಬೆಮೆಗೊಂಡು – ಭ್ರಮೆಗೊಂಡು, ಆಸೆಪಟ್ಟು ; ಭವತಿ – ಪೂಜ್ಯಳೇ ; ಮನೆವಾಳ್ತೆ– ತನ್ನ ಸಂಸಾರ ; ಮನ್ನಿಸಿ – ಗೌರವಿಸಿ ; ಮಾಣ್ – ಬಿಡು; ಮುಂ – ಮುಂದಿನ; ಮುಂತಪ್ಪ – ಮೊದಲಾದ ; ಮೃಷ್ಟ – ರಸವತ್ತಾದ, ರುಚಿಯಾದ ; ಮೈಮೆಗಾರ – ಶ್ರೇಷ್ಠ, ಸಮರ್ಥ ; ಮೋಡೆ – ಮೂಢೆ ; ಯಥೇಚ್ಛ – ಬೇಕಾದಷ್ಟು, ; ವಿನೋದ – ಆನಂದ, ಉತ್ಸಾಹ, ಸಂಭ್ರಮ; ಷಟ್ – ಆರು ; ಸಬ್ಬವಕಾರ – ಹಾಸ್ಯಗಾರ ; ಸಾಯಿರ – ಸಾವಿರ ; ಸಿಂಗರದ – ಸೊಬಗಿನ, ಭೂಷಣ ಪ್ರಾಯವಾದ ; ಸಿದ್ಧಿ – ಕೈವಶಮಾಡಿಕೊಳ್ಳುವಿಕೆ, ಅತಿಮಾನುಷ ಶಕ್ತಿ.

© KTBS NOT TO BE REPUBLISHED

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತು?

೨. ಮನೋರಮೆಯಲ್ಲಿ ಮೂಡಿದ ಸಂದೇಹವೇನು?

೩. ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು?

೪. ತಪಸ್ವಿಗಳಿಗೆ ಬೇರೆ ಗೊಡವೆ ಇಲ್ಲದಿರಲು ಕಾರಣವೇನು?

೫. ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಹೇಗೆ ಸತ್ಕರಿಸಿದನು?

೨. ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯೇನು?

೩. ಮುದ್ದಣನಿಗೆ ಒಲಿದ ಮಂತ್ರದ ಬಗ್ಗೆ ಮನೋರಮೆಯ ಪ್ರತಿಕ್ರಿಯೆ ಏನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮುದ್ದಣನು ಪರಿಹಾಸ ಮಾಡಿದನೆಂದು ಮನೋರಮೆಯು ಹೇಳಲು ಕಾರಣವೇನು?

೨. ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ–ಹೆಂಡತಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಈ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಶತ್ರುಘ್ನಾದ್ಯರನ್ನು ಅರಣ್ಯಕನು ಸತ್ಕರಿಸಿದ ವಿಚಾರದಲ್ಲಿ ಮುದ್ದಣ ಮನೋರಮೆಯರ ಮಧ್ಯೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. 'ರಾಮಾಶ್ವಮೇಧ' ಕೃತಿಯಲ್ಲಿ ಮುದ್ದಣ ಪರೋಕ್ಷವಾಗಿ ತನ್ನ ಬಾಳಿನ ಕತೆಯನ್ನು ಬಿಚ್ಚಿಟ್ಟಿದ್ದಾನೆ ಎಂಬುದನ್ನು 'ಸಪ್ತಾಕ್ಷರಿ ಮಂತ್ರ' ಪಾಠದ ಆಧಾರದಿಂದ ಸಮರ್ಥಿಸಿ.

@KTBS NOT TO BE REPUBLISHED

**ಉ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಎನಗಿದಚ್ಚರಿ ಎಂತುಟಾರ್ತಂ"

೨. "ಅಪ್ಪುದಪ್ಪುದು ತಪ್ಪೇಂ"

೩. "ಎಮ್ಮವರೊಂದಿರಕೆ ನಗುವ?"

೪. "ಸಾಲ್ಗುಮೀ ಪರಿಹಾಸಂ"

**ಊ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ಮೃಷ್ಟಾನ್ನ : ಸವರ್ಣದೀರ್ಘ ಸಂಧಿ :: ಒಡನಿರ್ದು : ____________

೨. ಕಾವ್ಯ : ಕಬ್ಬ :: ಆಶ್ಚರ್ಯ : __________

೩. ಮನ್ನಿಸಿ : ಗೌರವಿಸಿ :: ಬಾವನ್ನ : ____________

೪. ಕುವೆಂಪು : ಕುಪ್ಪಳಿ :: ಮುದ್ದಣ : ____________

## ಸೈದ್ಧಾಂತಿಕ ಭಾಷಾಭ್ಯಾಸ

### ಲೇಖನ ಚಿಹ್ನೆಗಳು

ಬರವಣಿಗೆಯಲ್ಲಿ ಲೇಖನ ಚಿಹ್ನೆಗಳ ಪಾತ್ರ ಅತ್ಯಂತ ಮುಖ್ಯವಾದುದು. ನಾವು ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳು ಎನ್ನುತ್ತೇವೆ. ಲೇಖನ ಚಿಹ್ನೆಗಳಿಲ್ಲದ ಬರೆವಣಿಗೆ ಸ್ಪಷ್ಟಾರ್ಥವನ್ನು ಕೊಡದೆ ತೊಡಕುಗಳಿಗೆ ಕಾರಣವಾಗುವುದುಂಟು. ಹಾಗಾಗಿ ಲೇಖನ ಚಿಹ್ನೆಗಳು ಅತ್ಯಂತ ಅಗತ್ಯ. ಇಲ್ಲಿ ಕೊಟ್ಟಿರುವ ವಿವರಗಳನ್ನು ಗಮನಿಸಿ.

**ಪೂರ್ಣ ವಿರಾಮ : (.)** ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು.

**ಉದಾ :** ಮಕ್ಕಳು ಹಾಡನ್ನು ಹಾಡಿದರು.

**ಅರ್ಧ ವಿರಾಮ : (;)** ಅನೇಕ ಉಪವಾಕ್ಯಗಳು ಒಂದು ಪ್ರಧಾನವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :** ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**ಅಲ್ಪವಿರಾಮ : (,)** ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ಬೇರೆ ಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಅಲ್ಪವಿರಾಮ ಬಳಸಬೇಕು.

**ಉದಾ :** ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ.

**ಪ್ರಶ್ನಾರ್ಥಕ : (?)** ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಪ್ರಶ್ನಾರ್ಥಕ ಚಿಹ್ನೆಯನ್ನು ಬಳಸಲಾಗುವುದು.

**ಉದಾ :** ಮನೋರಮೆ ಯಾರು ?

**ಭಾವಸೂಚಕ : (!)** ಹರ್ಷ, ಆಶ್ಚರ್ಯ, ಸಂತೋಷ, ವಿಷಾದ, ದುಃಖ ಮುಂತಾದ ಭಾವನೆಗಳನ್ನು ಸೂಚಿಸುವ ಪದಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :** ಆ! ಎಮ್ಮನ್ನರಪ್ಪ ಕಬ್ಬಿಗರ್ಗೇಂ ಕೊಟಿತೆಯೊ!

**ಉದ್ಧರಣ ಚಿಹ್ನೆ : (" ")** ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :** "ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಸರ್ ಎಂ. ವಿಶ್ವೇಶ್ವರಯ್ಯನವರು ಹೇಳಿದರು.

©KTBS NOT TO BE REPUBLISHED

**ವಾಕ್ಯವೇಷ್ಟನ ಚಿಹ್ನೆ: (‘ ’)** ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು.

**ಉದಾ :** ಕನ್ನಡ ಭಾಷೆಯಲ್ಲಿ ‘ಇಂಗ್ಲಿಷ್’, ‘ಪರ್ಷಿಯನ್’, ‘ಪೋರ್ಚ್‌ಗೀಸ್’ ಭಾಷೆಗಳ ಪದಗಳನ್ನು ಬಳಸಲಾಗುತ್ತದೆ.

**ಆವರಣ ಚಿಹ್ನೆ : ( )** ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ :** ನೀರನ್ನು ವಿಭಜಿಸಿದರೆ ಆಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್) ಗಳು ಉತ್ಪತ್ತಿಯಾಗುತ್ತವೆ.

**ವಿವರಣಾತ್ಮಕ ಚಿಹ್ನೆ: (:)** ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

**ಉದಾ : ಪಂಚೇಂದ್ರಿಯಗಳು : ಕಣ್ಣು, ಮೂಗು, ಕಿವಿ, ನಾಲಗೆ ಮತ್ತು ಚರ್ಮ.**

## ಪ್ರಾಯೋಗಿಕ ಭಾಷಾಭ್ಯಾಸ

**ಅ. ಕೊಟ್ಟಿರುವ ಸಮಾಸಪದಗಳನ್ನು ವಿಗ್ರಹಿಸಿ, ಸಮಾಸವನ್ನು ಹೆಸರಿಸಿ.**

ಚಳಿಗಾಲ ಯಜ್ಞತುರಂಗ ಬಾಯುಪಚಾರ ಸವಿಗೂಳು ಮೃಷ್ಟಾನ್ನ

ಏಕಾಕ್ಷರೀ ಪಂಚಾಕ್ಷರೀ ಮೂಜಗ ಸಪ್ತಾಕ್ಷರೀ

## ಪೂರಕ ಓದು

✦ **ಪ್ರೊ. ಜಿ. ವೆಂಕಟಸುಬ್ಬಯ್ಯ** ಅವರು ಸಂಪಾದಿಸಿದ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮುದ್ರಿಸಿರುವ **ಮುದ್ದಣ ಭಂಡಾರ – ಸಂಪುಟ ಒಂದು ಮತ್ತು ಎರಡು** ಕೃತಿಯನ್ನು ಗಮನಿಸಿ.

✦ ✦ ✦ ✦ ✦

©KTBS NOT TO BE REPUBLISHED

**ಪದ್ಯ ಭಾಗ**

# ೫. ಬಹುಮಾನ

J8L1E7

– ಕುವೆಂಪು

**ಪ್ರವೇಶ :** ರಾಷ್ಟ್ರಕವಿ ಕುವೆಂಪು ಅವರು ತನ್ನ ಸಾಹಿತ್ಯಕೃಷಿಯನ್ನು ಮೊದಲು ಇಂಗ್ಲೀಷ್ ಭಾಷೆಯಲ್ಲಿ ಪ್ರಾರಂಭಿಸಿದರು. ಆದರೆ ಐರಿಷ್ ಕವಿ ಜೇಮ್ ಹೆನ್ರಿ ಕಸಿನ್ಸ್ ಅವರು "ನೀವು ಕನ್ನಡದಲ್ಲಿ ಬರೆಯಿರಿ" ಎಂದು ಕೊಟ್ಟ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿ ಬಳಿಕ ಕನ್ನಡದಲ್ಲೇ ತಮ್ಮ ಬರವಣಿಗೆಯನ್ನು ಮುಂದುವರಿಸಿದರು. ಇನ್ನೋರ್ವ ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪ ಅವರು ತಮ್ಮ ಒಂದು ಕವಿತೆಯಲ್ಲಿ "ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ, ಹಾಡುವುದು ಅನಿವಾರ್ಯ ಕರ್ಮ ನನಗೆ; ಕೇಳುವವರಿಹರೆಂದು ನಾ ಬಲ್ಲೆ ಅದರಿಂದ, ಹಾಡುವೆನು ಮೈದುಂಬಿ ಎಂದಿನಂತೆ" ಎಂದಿದ್ದಾರೆ. ಈ ಮೇಲಿನ ಎರಡೂ ಸಂದರ್ಭಗಳಿಗೆ ಹೊಂದಿಕೊಳ್ಳುವ ಭಾವವು ಪ್ರಸ್ತುತ "ಬಹುಮಾನ" ಕವಿತೆಯಲ್ಲಿದೆ.


ನಮ್ಮಲ್ಲಿ ಎಷ್ಟೋ ಜನ ಉದ್ದಾಮ ಲೇಖಕರು ಆಗಿಹೋಗಿದ್ದಾರೆ. ಅವರು ಕನ್ನಡದ ಬದಲು ಇಂಗ್ಲೀಷಿನಲ್ಲಿ ಅಥವಾ ಬೇರಾವುದಾದರೂ ವಿದೇಶೀ ಭಾಷೆಯಲ್ಲಿ ಬರೆದಿದ್ದರೆ ಲೋಕವಿಖ್ಯಾತರೂ ಲೋಕಮಾನ್ಯರೂ ಆಗುತ್ತಿದ್ದರೆಂಬ ಮಾತಿದೆ. ಹಾಗಿದ್ದೂ ಅವರೆಲ್ಲ ಅನ್ಯ ಭಾಷೆಗಳಲ್ಲಿ ಯಾಕೆ ಬರೆಯಲಿಲ್ಲ? ಯಾಕೆ ಕನ್ನಡವನ್ನೇ ಆಯ್ದುಕೊಂಡರು? ಉತ್ತರ ಸ್ಪಷ್ಟ. ಕವಿಯು ಬರೆಯುವುದು ತನ್ನ ಹೃದಯದ ಭಾವನೆಗಳನ್ನೇ ಹೊರತು ಲೋಕ ಮೆಚ್ಚಲಿ, ಪ್ರಶಸ್ತಿ ಕೊಡಲಿ ಎಂಬ ಉದ್ದೇಶದಿಂದಲ್ಲ. ಮತ್ತು ಹೃದಯದ ಭಾವನೆಗಳನ್ನು ಸಶಕ್ತವಾಗಿ ಬಿಂಬಿಸುವುದು ನಮ್ಮ ನಮ್ಮ ಮಾತೃಭಾಷೆಗಳೇ ಅಲ್ಲವೆ!

©KTBS NOT TO BE REPUBLISHED



"ಕುಹೂ! ಕುಹೂ!" – ಕೋಕಿಲವಾಣಿ!
ಜಗ ಜುಮ್ಮೆಂದುದು ಅದ ಕೇಳಿ!
ನೀರವ ಪರ್ವತ ಕಾನನ ಶ್ರೇಣಿ
ಮರುದನಿಗೈದಿತು ಮುದ ತಾಳಿ.
ಗಾನವ ಕೇಳಿ ಮಹಾಂಬರ ಸುಮ್ಮನೆ
ಮಾತಾಡದೆ ಬಣ್ಣಿಸುತಿತ್ತು!
ಕಂದರದಲ್ಲಿದ್ದೊಂದು ಸರೋವರ
ತೆರೆಗಳ ಕೈಪರೆಯಿಕ್ಕಿತ್ತು!
ಮಾಧುರ್ಯದಿ ಪಿಕ ತನ್ನನೆ ಮರೆಯುತೆ
"ಕುಹೂ! ಕುಹೂ!" ಕೂಗಿತ್ತು!

ಆಲಿಸಿದೊರ್ವನು ಗಾನಕೆ ನೊಂದು
ಸೂಚನೆ ಕೊಟ್ಟನು ಇಂತೆಂದು:–
“ಮಲೆಗಳಲುಲಿಯುವ ಓ ಕೋಗಿಲೆಯೇ,
ಬಲು ಚೆಲುವಿದೆ ನಿನ್ನೀ ಗಾನ!
ಇಂಗ್ಲೀಷಿಗೆ ತರ್ಜುಮೆ ಮಾಡಿದರೆ
ದೊರೆವುದು ನೋಬೆಲ್ ಬಹುಮಾನ!
ಅರಣ್ಯ ರೋದನ! ಸುಮ್ಮನೆ ಹಾಡುವೆ!
ಕೇಳುವರಾರಿಲ್ಲಿ?”
ಕೂಗಿತು ಕೋಗಿಲೆ “ಕುಹೂ” ಎಂದು!
ತಲ್ಲಣಿಸಿತು ಜಗ ಜುಮ್ಮೆಂದು!



## ಕೃತಿಕಾರರ ಪರಿಚಯ

**ಕುವೆಂಪು (೧೯೦೪ ಡಿಸೆಂಬರ್ ೨೯ – ೧೯೯೪ ನವೆಂಬರ್ ೧೧) –** ಕನ್ನಡದಲ್ಲಿ ಬರೆದ ರಾಷ್ಟ್ರಕವಿ. ಇವರು **ಶಿವಮೊಗ್ಗ ಜಿಲ್ಲೆಯ ಕುಪ್ಪಳಿ**ಯವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ನಂತರ ಅಲ್ಲೇ ಪ್ರಾಧ್ಯಾಪಕರಾಗಿ ಕುಲಪತಿಗಳಾಗಿ ಕೆಲಸ ಮಾಡಿದರು. **ಸಣ್ಣಕತೆ, ಕವಿತೆ, ಕಾದಂಬರಿ, ನಾಟಕ, ವಿಮರ್ಶೆ, ಮೀಮಾಂಸೆ, ಜೀವನಚರಿತ್ರೆ** ಮುಂತಾದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿರುವ ಕುವೆಂಪು ಅವರು ತಾವು ಬರೆದ **“ಶ್ರೀ ರಾಮಾಯಣ ದರ್ಶನಂ”** ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದರು. ಕೊಳಲು ಇವರ ಮೊದಲ ಕವನಸಂಕಲನ. ಅನಂತರ **ಪಾಂಚಜನ್ಯ, ನವಿಲು, ಕಲಾಸುಂದರಿ, ಕೃತ್ತಿಕೆ, ಅಗ್ನಿಹಂಸ, ಪಕ್ಷಿಕಾಶಿ, ಷೋಡಶಿ, ಅನಿಕೇತನ** ಮುಂತಾದ ಹಲವು ಕವನ ಸಂಕಲನಗಳನ್ನು ಪ್ರಕಟಿಸಿದರು. **ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು** ಇವರ ಎರಡು ಬೃಹತ್ ಕಾದಂಬರಿಗಳು. **ಕರ್ನಾಟಕರತ್ನ, ಪಂಪಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ** ಮುಂತಾದ ಹಲವು ಪ್ರಶಸ್ತಿಗಳು ಸಂದಿವೆ. ಇವರು ಕನ್ನಡದ ಎರಡನೆಯ ರಾಷ್ಟ್ರಕವಿಗಳು (ಮೊದಲನೆಯವರು ಮಂಜೇಶ್ವರ ಗೋವಿಂದ ಪೈಗಳು). ಪ್ರಸ್ತುತ ಕವಿತೆಯನ್ನು ಕುವೆಂಪು ಅವರ **“ನವಿಲು”** ಕವನ ಸಂಕಲನದಿಂದ ತೆಗೆದುಕೊಳ್ಳಲಾಗಿದೆ.

©KTBS NOT TO BE REPUBLISHED

## ಆಶಯ

ಕುವೆಂಪು ಅವರ ಈ ಪುಟ್ಟ ಕವಿತೆಯು ಒಂದು ಸುಂದರವಾದ ಚಿತ್ರವನ್ನು ನಮಗೆ ಕಟ್ಟಿಕೊಡುತ್ತದೆ. ಹಕ್ಕಿಯೊಂದು ಹಾಡುತ್ತಿದೆ. ಅದನ್ನು ಕೇಳಿದ ವ್ಯಕ್ತಿ “ನೀನು ಇಂಗ್ಲೀಷಿನಲ್ಲಿ

ಹಾಡಿದರೆ ನೊಬೆಲ್ ಪ್ರಶಸ್ತಿ ಬಂದೀತೆಂದು" ಹೇಳುತ್ತಾನೆ. ಆದರೆ ಆ ಮಾತಿಗೆ ಕೋಗಿಲೆ ಯಾವ ಪ್ರತಿಕ್ರಿಯೆಯನ್ನೂ ಕೊಡದೆ ಮತ್ತೊಮ್ಮೆ "ಕುಹೂ" ಎಂದಷ್ಟೇ ಹೇಳುತ್ತದೆ. ಆದರೆ ಆ ಧ್ವನಿಯು ಇಡೀ ಪ್ರಕೃತಿಯಲ್ಲಿ ಒಂದು ಸಂಚಲನವನ್ನು ಸೃಷ್ಟಿಸುತ್ತದೆ. ನಾವು ಯಾವ ಕೆಲಸದಲ್ಲಿ ಪರಿಣಿತರೋ ಅದನ್ನು ಅತ್ಯಂತ ನಿಸ್ವಾರ್ಥದಿಂದ, ಪ್ರಾಮಾಣಿಕತೆಯಿಂದ ಮಾಡಬೇಕು ಎಂಬುದು ಈ ಕವಿತೆಯ ಒಂದು ಧ್ವನಿ. ಲೋಕದ ಟೀಕೆ ಟಿಪ್ಪಣಿಗಳಿಗೆ ನಾವು ತಲೆಕೆಡಿಸಿಕೊಳ್ಳಬಾರದು ಎಂಬ ಧ್ವನಿಯೂ ಹೊರಡುತ್ತದೆ. ನಮ್ಮ ಅಭಿವ್ಯಕ್ತಿಯನ್ನು ನಮ್ಮ ಸಹಜಭಾಷೆ, ಮಾತೃಭಾಷೆ, ಆಡುನುಡಿಯಲ್ಲಿ ಮಾಡಿದರೆ ಅದು ಜೀವಂತಿಕೆಯಿಂದ ಕೂಡಿರುತ್ತದೆ. ಅನ್ಯ ಭಾಷೆಯಲ್ಲಿ ಅಭಿವ್ಯಕ್ತಿ ಎಷ್ಟೆಂದರೂ ಕೃತಕ – ಎಂಬ ಭಾವವೂ ಕವಿತೆಯಿಂದ ಹೊಮ್ಮುವುದು.

* * *

## ಪದಗಳ ಅರ್ಥ

ಕೋಕಿಲವಾಣಿ – ಕೋಗಿಲೆಯ ಧ್ವನಿ, ಜಗ – ಜಗತ್ತು, ಕಾನನ – ಕಾಡು, ಅರಣ್ಯ, ಕಂದರ – ಎರಡು ಬೆಟ್ಟಗಳ ನಡುವಿನ ಕಣಿವೆ, ಶ್ರೇಣಿ – ಸಾಲು, ಸರಣಿ, ಮರುದನಿ – ಮಾರ್ದನಿ, ಪ್ರತಿಧ್ವನಿ, ಮಹಾಂಬರ – ವಿಶಾಲವಾದ ಆಕಾಶ, ಕೈಪರೆ – ಚಪ್ಪಾಳೆ, ಪಿಕ – ಕೋಗಿಲೆ, ಆಲಿಸು – ಮನವಿಟ್ಟು ಕೇಳು, ತರ್ಜುಮೆ – ಭಾಷಾಂತರ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಿಸು, ಮಲೆ – ಬೆಟ್ಟ; ಕಾಡು–ಗುಡ್ಡಗಳನ್ನೊಳಗೊಂಡ ಸಹ್ಯಾದ್ರಿ, ನೋಬೆಲ್ – ನೊಬೆಲ್ (ನಿರ್ದಿಷ್ಟ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಕೊಡಲಾಗುವ, ಒಂದು ಅಂತಾರಾಷ್ಟ್ರೀಯ ಪ್ರಶಸ್ತಿ), ಅರಣ್ಯರೋದನ – ಯಾರ ಕಿವಿಗೂ ಬೀಳದ ಕೂಗು.

@KTBS NOT TO BE REPUBLISHED

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಜಗತ್ತು ಜುಮ್ಮೆಂದುದು ಯಾವ ಧ್ವನಿಗೆ?
೨. ಕೋಗಿಲೆಯ ಕೂಗನ್ನು ಯಾವುದು ಮಾರ್ದನಿಸಿತು?
೩. ಗಾನವನ್ನು ಕೇಳಿದ ನೀಲಾಕಾಶ ಏನು ಮಾಡಿತು?
೪. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ಹೇಗೆ ಪ್ರತಿಕ್ರಿಯೆ ಕೊಟ್ಟಿತು?
೫. ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ ಏನೆಂದು ಹೇಳಿದನು?
೬. ಮನುಷ್ಯನ ಮಾತಿಗೆ ಕೋಗಿಲೆ ಕೊಟ್ಟ ಉತ್ತರವೇನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?
೨. ಕೋಗಿಲೆಯ ಗಾನವನ್ನು ಆಲಿಸಿ ನೊಂದು ಮನುಷ್ಯನು ಏನೆಂದನು?
೩. ಮನುಷ್ಯನ ಮಾತಿಗೆ ಕೋಗಿಲೆಯು ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿತು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಕೋಗಿಲೆಯ ಗಾನಕ್ಕೆ ಪ್ರಕೃತಿ ಮತ್ತು ಮನುಷ್ಯರ ಪ್ರತಿಕ್ರಿಯೆಗಳು ಹೇಗಿದ್ದವು?

೨. ಕೋಗಿಲೆಯ "ಕುಹೂ" ವಾಣಿಯನ್ನು ನಾವು ಹೇಗೆ ಅರ್ಥೈಸಿಕೊಳ್ಳಬೇಕು?

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. ಮರುದನಿಗೈದಿತು ಮುದ ತಾಳಿ

೨. ಬಲು ಚೆಲುವಿದೆ ನಿನ್ನೀ ಗಾನ

೩. ಅರಣ್ಯರೋದನ! ಸುಮ್ಮನೆ ಹಾಡುವೆ!

೪. ತಲ್ಲಣಿಸಿತು ಜಗ ಜುಮ್ಮೆಂದು

**ಉ. ಹೊಂದಿಸಿ ಬರೆಯಿರಿ.**

| ಅ | ಬ |
|---|---|
| ೧. ಪರ್ವತ | ಬಣ್ಣಿಸುತಿತ್ತು |
| ೨. ಸರೋವರ | ಕೂಗುತಲಿತ್ತು |
| ೩. ವ್ಯಕ್ತಿ | ಕೈಪರೆಯಿಕ್ಕಿತು |
| ೪. ಮಹಾಂಬರ | ಮಾರ್ದನಿಸುತಿತ್ತು |
| ೫. ಕೋಗಿಲೆ | ಆಲಿಸುತಿದ್ದ |

## ಸೈದ್ಧಾಂತಿಕ ಭಾಷಾಭ್ಯಾಸ

## ಪತ್ರಲೇಖನ

ಹತ್ತಿರದಲ್ಲಿ ಇರುವವರೊಡನೆ ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರದಲ್ಲಿ ಅಥವಾ ಪರಸ್ಥಳದಲ್ಲಿರುವವರ ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಪತ್ರಲೇಖನ ಪ್ರಾರಂಭವಾಯಿತು. ಇತ್ತೀಚೆಗೆ ದೂರವಾಣಿ, ಎಸ್.ಎಂ.ಎಸ್., ಇ–ಅಂಚೆ ಮುಂತಾದ ಆಧುನಿಕ ಸೌಲಭ್ಯಗಳಿದ್ದರೂ ಪತ್ರ ವ್ಯವಹಾರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪತ್ರಗಳಲ್ಲಿ **'ಖಾಸಗಿ ಪತ್ರ'** ಹಾಗೂ **'ವ್ಯಾವಹಾರಿಕ ಪತ್ರ'** ಎಂಬುದಾಗಿ ಎರಡು ವಿಧಗಳಿವೆ. ಅವುಗಳ ರಚನಾ ಕ್ರಮವನ್ನು ನಿಮಗಿಲ್ಲಿ ಪರಿಚಯಿಸಲಾಗಿದೆ.

### ಖಾಸಗಿ ಪತ್ರ / ವೈಯಕ್ತಿಕ ಪತ್ರ

ವೈಯಕ್ತಿಕ ಪತ್ರಗಳನ್ನು ಬಂಧುಗಳಿಗೆ, ಸ್ನೇಹಿತರಿಗೆ ಬರೆಯುತ್ತೇವೆ. ಈ ಪತ್ರಗಳಲ್ಲಿ ಆರೋಗ್ಯ, ವಿದ್ಯಾಭ್ಯಾಸ, ದುಡಿಮೆ, ಹಣಕಾಸಿನ ಸ್ಥಿತಿಗತಿ, ಕಷ್ಟಸುಖ, ಹಬ್ಬ ಹರಿದಿನಗಳು, ಮದುವೆ ಮತ್ತಿತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯಗಳಾಗುತ್ತವೆ.

© KTBS NOT TO BE REPUBLISHED

## ವ್ಯಾವಹಾರಿಕ ಅಥವಾ ಮನವಿ ಪತ್ರ

ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ನಗರಸಭೆ, ಪಂಚಾಯಿತಿಗಳು, ಗ್ರಂಥಾಲಯ, ಉದ್ಯಮಿಗಳು, ಸರ್ಕಾರಿ ಕಛೇರಿ ಇತ್ಯಾದಿ ಸಂಸ್ಥೆಯಲ್ಲಿ ಕೆಲಸಮಾಡುವ ಅಧಿಕಾರಿಗಳ ಜೊತೆ ನಡೆಸುವ ಪತ್ರ ವ್ಯಾವಹಾರಗಳನ್ನು 'ವ್ಯಾವಹಾರಿಕ ಪತ್ರಗಳು' ಅಥವಾ 'ಮನವಿ ಪತ್ರಗಳು' ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಎಲ್ಲಾ ಪತ್ರಗಳು ವಿಳಾಸ, ದಿನಾಂಕ, ದೂರವಾಣಿ ಸಂಖ್ಯೆ, ಸಂಬೋಧನೆ, ವಿಷಯ ವಿವರಣೆ, ಮುಕ್ತಾಯದ ಭಾಗ, ಪತ್ರ ಬರೆದವರ ಸಹಿ, ಹೊರವಿಳಾಸ ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುತ್ತವೆ.

## ಖಾಸಗಿ ಪತ್ರ / ವೈಯಕ್ತಿಕ ಪತ್ರ

**ಕೀರ್ತಿಕುಮಾರ,**
ಒಂಬತ್ತನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
**ಶ್ರೀರಂಗಪಟ್ಟಣ** – ೫೭೧ ೪೫೮.

ದಿನಾಂಕ : ೦೫.೦೫.೨೦೨೪

**ತೀರ್ಥರೂಪರವರಿಗೆ,**

ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ಜೂನ್ ೧೦ ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ ೧೫೦/– (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

**ನಮಸ್ಕಾರಗಳೊಂದಿಗೆ,**

**ನಿಮ್ಮ ಪ್ರೀತಿಯ ಮಗ**
ಕೀರ್ತಿಕುಮಾರ

**ಇವರಿಗೆ,**
ಶ್ರೀ ಸಿದ್ದಪ್ಪ,
ಮನೆ ಸಂಖ್ಯೆ ೫೪, ೧ನೆಯ ಮುಖ್ಯರಸ್ತೆ,
ಕುವೆಂಪುನಗರ, ಹಾಸನ – ೫೭೩ ೨೦೧

© KTBS NOT TO BE REPUBLISHED

## ವ್ಯಾವಹಾರಿಕ ಅಥವಾ ಮನವಿ ಪತ್ರ

ದಿನಾಂಕ : ೦೫.೦೫.೨೦೨೪

**ಇವರಿಂದ,**
ಶ್ರೀ ಸಂಗಮೇಶ,
ಕೋಟೆ ಬೀದಿ,
ಬಿಜಾಪುರ – ೫೮೬೧೦೧.

**ಇವರಿಗೆ,**
ಜಿಲ್ಲಾಧಿಕಾರಿಗಳು,
ವಿಜಯಪುರ – ೫೮೬ ೧೦೧,
ವಿಜಯಪುರ ಜಿಲ್ಲೆ.

**ಮಾನ್ಯರೇ,**

**ವಿಷಯ :** ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಟೆ ಬೀದಿಯಲ್ಲಿ ಸುಮಾರು ೬೦ ಮನೆಗಳಿದ್ದು ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

**ವಂದನೆಗಳೊಂದಿಗೆ,**

**ತಮ್ಮ ವಿಶ್ವಾಸಿ,**

(ಸಂಗಮೇಶ)

NOT TO BE REPUBLISHED @KTBS

### ಪೂರಕ ಓದು

- ಕುವೆಂಪು ಅವರ ಇತರ ಕವಿತೆಗಳನ್ನು ಓದಿರಿ.
- ಜಿ. ಎಸ್. ಶಿವರುದ್ರಪ್ಪನವರ “ಎದೆ ತುಂಬಿ ಹಾಡುವೆನು” ಕವಿತೆಯನ್ನು ಓದಿರಿ, “ಬಹುಮಾನ” ಕವಿತೆಯೊಂದಿಗೆ ಹೋಲಿಸಿ ನೋಡಿರಿ.
- ನೊಬೆಲ್ ಪ್ರಶಸ್ತಿ ವಂಚಿತ ಸಾಧಕರ ಪಟ್ಟಿ ಮಾಡಿ. ಅವರಿಗೆ ಪ್ರಶಸ್ತಿ ಯಾಕೆ ಬರಲಿಲ್ಲ ಎಂಬುದನ್ನು ತಿಳಿಯಿರಿ.

# ೬. ಗೆಳೆತನ

– ಚೆನ್ನವೀರ ಕಣವಿ

M7R8K6

**ಪ್ರವೇಶ :** ಆಧುನಿಕ ಕಾವ್ಯದಲ್ಲಿ ಕವಿಯ ದೃಷ್ಟಿಕೋನ ಬಹಳ ವಿಸ್ತಾರವನ್ನು ಪಡೆದುಕೊಂಡಿದೆ. ಕವಿ ಸಾಹಿತ್ಯಕ ಕಟ್ಟುಪಾಡುಗಳಿಂದ ಹೊರಬಂದು ಸ್ವಚ್ಛಂದ ಹರಿವಿನ ಪ್ರವಾಹದಲ್ಲಿ ಕಂಡಿದ್ದೆಲ್ಲವನ್ನು 'ನವನವೋನ್ಮೇಷ ಶಾಲಿನಿ'ಯನ್ನಾಗಿಸಿ ಹೊಸ ಹುಟ್ಟಿಗೆ ಕಾರಣನಾಗಿದ್ದಾನೆ. ಈ ಕಾವ್ಯ ಪರಂಪರೆಯಲ್ಲಿ ಬಂದ ಕವಿಗಳಲ್ಲಿ ಚನ್ನವೀರ ಕಣವಿಯವರು ಒಬ್ಬರು.

ಇಂದು ಇಡೀ ಜಗತ್ತು ಭಯ, ಆತಂಕ, ಭಯೋತ್ಪಾದನೆಯ ಕರಿನೆರಳಿಗೆ ಸಿಲುಕಿ ನರಳುತ್ತಿದೆ. ವಿಶ್ವವನ್ನೆಲ್ಲ ಒಗ್ಗೂಡಿಸಲು ಇರುವ ಏಕಮಾತ್ರ ಸಾಧನ ಸ್ನೇಹ ಸಂಬಂಧಗಳು ಮಾತ್ರ. ಗೆಳೆತನವು ಪ್ರತಿಯೊಬ್ಬ ಮಾನವನ ಹೃದಯದ ಮಿಡಿತವಾಗಿದೆ. ಜನ್ಮನೀಡಿದ ತಂದೆ–ತಾಯಿಯರನ್ನು ಮೀರಿಸಿದ ಬಾಂಧವ್ಯ ಗೆಳತನದ್ದು. ಇದಕ್ಕೆ ಪುರಾಣ ಇತಿಹಾಸಗಳ ಹಿನ್ನಲೆಯಿದೆ. ಕೃಷ್ಣ–ಸುಧಾಮ, ಕರ್ಣ–ದುರ್ಯೋಧನ, ಚಂದನದಾಸ – ಅಮಾತ್ಯ ರಾಕ್ಷಸರವರ ನಿದರ್ಶನಗಳು ಪುರಾಣ ಇತಿಹಾಸದ್ದು ಹಾಗೂ ವೈಯಕ್ತಿಕ ಬದುಕಿನ ಪ್ರತಿಬಿಂಬಗಳಾಗಿವೆ. ಗೆಳತನಕ್ಕೆ ಮೇಲು–ಕೀಳುಗಳಾಗಲಿ, ಹೆಣ್ಣು ಗಂಡೆಂಬ ತಾರತಮ್ಯವಾಗಲಿ ಇಲ್ಲ. ಸ್ನೇಹ – ಬಾಂಧವ್ಯಗಳು ವೈಯಕ್ತಿಕ ನೆಲೆಗಟ್ಟನ್ನು ಮೀರಿ ವಿಶ್ವವನ್ನೇ ಒಗ್ಗೂಡಿಸುವ ಏಕಮಂತ್ರವಾಗಿದೆ.

@KTBS NOT TO BE REPUBLISHED

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು;
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು–ಜೀವನ್ಮೃತ!


ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲು ಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವಮಿಲ್ಲ ದ್ವೇಷ ಗುಣಮಣಮಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವ ಶುದ್ಧ ಸ್ಫಟಿಕ – ಬೆಳದಿಂಗಳು!



ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆನುಡಿ ಕೇಳಿರುವೆನು.
ಗೆಳೆತನದ ಶುಚಿರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

ಹೇಗೊ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಮೆ
ಆಗು ಹೋಗುಗಳಿಂಗೆ ಬಾಗದಂತೆ,
ಸುಖಕೆ ಸಂತಸಬಟ್ಟು ದು:ಖದಲಿ ಸಹಭಾಗಿ –
ಯಾಗೆ ಜೀವನ ರಸದ ಪಾಕದಂತೆ –
ಸರಸವಿರಸವನೆಲ್ಲ ಅಪ್ಪುಕಯ್ದು
ಬಾಳುವರು ಗಂಧದೊಲು ಜೀವ ತೆಯ್ದು!

© KTBS NOT TO BE REPUBLISHED



## ಕೃತಿಕಾರರ ಪರಿಚಯ

ಕನ್ನಡದ ಪ್ರಮುಖ ಕವಿಗಳಲ್ಲಿ **ಚೆನ್ನವೀರ ಕಣವಿ ೧೯೨೮** ಒಬ್ಬರು. **ಗದಗ ಜಿಲ್ಲೆಯ ಹೊಂಬಳ**ದವರು. ನವೋದಯ ಮತ್ತು ನವ್ಯ ಮಾರ್ಗಗಳ ಸಮನ್ವಯ ಸಾಧಿಸಿದ ಕವಿಯೆಂದೇ ಪ್ರಸಿದ್ಧರು. ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಕಟಣ ಮತ್ತು ವ್ಯಾಸಂಗ ವಿಸ್ತರಣ ವಿಭಾಗದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

**ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಕಾವ್ಯಾಕ್ಷಿ, ಚಿರಂತನ ದಾಹ** ಇವರ ಪ್ರಮುಖ ಕವನ ಸಂಕಲನಗಳು. ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ, ೧೯೮೧ ರಲ್ಲಿ **ಜೀವಧ್ವನಿ** ಕವನ ಸಂಗ್ರಹಕ್ಕೆ **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ** ದೊರಕಿವೆ. ೧೯೯೬ ರಲ್ಲಿ ಹಾಸನದಲ್ಲಿ ನಡೆದ ೬೫ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

**ಗೆಳೆತನ** ಕವನವನ್ನು **ಚೆನ್ನವೀರ ಕಣವಿ** ಅವರ **ಆಕಾಶಬುಟ್ಟಿ** ಕವನ ಸಂಕಲನ (ಪುಟ ೩೫–೩೬) ದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

@KTBS NOT TO BE REPUBLISHED

## ಆಶಯ

ಕವನದಲ್ಲಿ ಗೆಳೆತನ, ಅದರ ಸವಿ, ಮಹತ್ವ ಹಾಗೂ ಅನ್ಯೋನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೆಳೆತನಕ್ಕೆ ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ಬದುಕಿನಲ್ಲಿ ಮಿಗಿಲಾದ ಸ್ಥಾನವಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಆಧುನಿಕ ಪ್ರಪಂಚದಲ್ಲಿ ಗೆಳೆತನ ವೈಯಕ್ತಿಕ ನೆಲೆಯಿಂದ ವಿಶ್ವಸಾಮರಸ್ಯದ ನೆಲೆಗೆ ಧಾವಿಸುತ್ತಿರುವ ಸಂದರ್ಭದಲ್ಲಿ ಈ ಕವಿತೆ ಮಹತ್ವವನ್ನು ಪಡೆದಿದೆ. ಇದೇ ಕವಿತೆಯ ಆಂತರ್ಯಭಾವ.

* * *

## ಪದಗಳ ಅರ್ಥ

ಅಪ್ಪುಕಯ್– ಒಪ್ಪಿಕೊಳ್ಳು, ಸ್ವೀಕರಿಸು; ಅಹಮಿಕೆ – ಅಹಂಕಾರ ; ಇಹಲೋಕ – ಭೂಲೋಕ; ಕೂರ್ಪು – ಒಲವು, ಪ್ರೀತಿ ; ಚಂಚಲತೆ – ಸ್ಥಿರವಲ್ಲದ; ಜೀವನ್ಮೃತ – ಬದುಕಿದ್ದೂ ಸತ್ತಂತಿರುವ ; ತಂಗು – ಇಳಿದುಕೋ, ಬೀಡುಬಿಡು ; ದುರ್ಭರ – ತಾಳಲಾಗದ; ದೋಷ – ತಪ್ಪು, ಕುಂದುಕೊರತೆ; ನುಡಿ – ಮಾತು ; ನೆವ – ಕಾರಣ ; ಪಸರಿಸು – ಹರಡು, ವಿಸ್ತರಿಸು; ಬವಣೆ – ಕಷ್ಟ ; ಬಾಗು – ಮಣಿ, ಬಗ್ಗು, ಶರಣಾಗು ; ಮಿಗಿಲು – ಶ್ರೇಷ್ಠ ; ರಸಪಾಕ– ರುಚಿಯಾದ ಅಡುಗೆ; ವಂಚನೆ – ಮೋಸ ; ಹದ – ಪಕ್ವತೆ, ಸರಿಯಾದ ಸ್ಥಿತಿ.

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕವಿ ಎಲ್ಲಿ ತಂಗಿದ್ದಾರೆ?

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?

೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ?

೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು?

**ಆ ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ?

೨. ಗೆಳೆತನದ ಶುಚಿರುಚಿ ಎಂಥದ್ದು?

೩. ಜೀವನ ರಸಪಾಕವಾಗುವುದು ಹೇಗೆ?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು–ಐದು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನ ಇಹಲೋಕಕಿರುವ ಅಮೃತ ಹೇಗೆ? ತಿಳಿಸಿ.

೨. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ

೩. ಗೆಳೆಯರು ಹೇಗೆ ಬಾಳುತ್ತಾರೆ?

೪. ಗೆಳೆತನವನ್ನು ನಿನ್ನ ಮಾತುಗಳಲ್ಲಿ ವಿವರಿಸು?

**ಈ. ಕೊಟ್ಟಿರುವ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನದ ಮಹತ್ವವನ್ನು ಕಣವಿ ಅವರು ಹೇಗೆ ತಿಳಿಸಿದ್ದಾರೆ?

**ಉ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಅದನುಳಿದರೇನಿಹುದು_ ಜೀವನ್ಮೃತ!"

೨. "ಭಾವ ಶುದ್ಧ ಸ್ಫಟಿಕ_ ಬೆಳದಿಂಗಳು!"

೩. "ಕಂಡ ಕಂಡವರೇನು ಬಲ್ಲರಿದನು"

೪. "ಬಾಳುವರು ಗಂಧದೊಲು ಜೀವ ತೆಯ್ದು!"

NOT TO BE REPUBLISHED @KTBS

**ಊ. ಗುಂಪಿಗೆ ಸೇರದ ಪದವನ್ನು ಗುರುತಿಸಿ.**

೧. ಹೆಗಲುಗೊಟ್ಟು ಸಂತಸಬಟ್ಟು ಉಂಡವನು ತಿಳಿಗೊಳ

೨. ಲೋಕ ಅಮೃತ ಎದೆ ಸಾಹಸ

೩. ಭಾವಜೀವಿ ಕಾವ್ಯಾಕ್ಷಿ ದೀಪಧಾರಿ ಜೀವಧ್ವನಿ

೪. ಬಾನು ಆಕಾಶ ಭಾನು ಗಗನ

## ಪದ್ಯಾಧಾರಿತ ಚಟುವಟಿಕೆ

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ.**

೧. ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು

________________________________________

________________________________________

________________________________________

________________________________________

ಉಂಡವನು ಕಂಡಿಹನು ಇದರ ಹದನು.

## ಪೂರಕ ಓದು

- ಭಾರತೀಯ ವಿದ್ಯಾಭವನದ ಭಾರತ ಭಾರತಿ ಪುಸ್ತಕಮಾಲೆಯ **ಕೃಷ್ಣ–ಕುಚೇಲರ** ಸ್ನೇಹ ಕತೆಯನ್ನು ಓದಿ.
- ಪಂಚತಂತ್ರ ಹಾಗೂ ಇತರ ಕೃತಿಗಳಲ್ಲಿ ಗೆಳೆತನದ ಕುರಿತು ಕತೆಗಳನ್ನು ಓದಿರಿ.

NOT TO BE REPUBLISHED ©KTBS

# ೭. ವಚನಾಮೃತ

Z4D3A2

**ಪ್ರವೇಶ :** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ೧೨ನೆಯ ಶತಮಾನ ಅತ್ಯಮೂಲ್ಯವಾದುದು. ಪಾಂಡಿತ್ಯಯುಕ್ತವಾಗಿದ್ದ ಸಾಹಿತ್ಯ ಜನಸಾಮಾನ್ಯರ ದನಿಯಾಗಿ, ಶ್ರೀಸಾಮಾನ್ಯನ ಬದುಕು ಬವಣೆಯ ಪ್ರತಿನಿಧಿಯಾಗಿ ಸಾಮಾಜಿಕ, ಸಾಹಿತ್ಯಿಕ ಕ್ರಾಂತಿಯನ್ನುಂಟು ಮಾಡಿದ್ದು ವಚನಸಾಹಿತ್ಯ. ಶರಣರ ಈ ಸಾಹಿತ್ಯ ವಿಶ್ವಕ್ಕೆ ಮಾದರಿ ಮತ್ತು ಸಾಮಾಜಿಕ ಸಮಾನತೆಗೆ ಹಿಡಿದ ಕೈಗನ್ನಡಿಯಾಗಿದೆ. 'ಅರಿತರೆ ಶರಣ ಮರೆತರೆ ಮಾನವ' ಎಂಬುದು ಶರಣ ತತ್ವದ ಮಹಾವಾಕ್ಯ. 'ಶ್ರೀಸಾಮಾನ್ಯರು ಮಹಾಜ್ಞಾನವನ್ನರಿತಾಗ ನಿತ್ಯ ಮುಕ್ತನಾಗುತ್ತಾನೆ' ಎಂಬ ಶರಣರ ಮಾತುಗಳು, ವಚನ, ಸೂಳ್ನುಡಿಗಳು ಸಾಮಾನ್ಯರನ್ನು ದೈವತ್ವಕ್ಕೆ ಏರಿಸುತ್ತವೆ. ತಮ್ಮ ಕಾಯಕ ನಿಷ್ಠೆಯ ಮೂಲಕ ಸಾಮಾಜಿಕ ಜಾಗೃತಿಯನ್ನುಂಟು ಮಾಡಲು ಗಂಡು ಹೆಣ್ಣೆಂಬ ಭೇದಭಾವವಿಲ್ಲದೆ, ಮೇಲುಕೀಳೆಂಬ ತಾರತಮ್ಯವಿಲ್ಲದೆ ಶಿವಶರಣರು ತಮ್ಮ ಇಷ್ಟದೇವರ ಹೆಸರನ್ನೇ ಅಂಕಿತವಾಗಿಸಿ ವಚನಗಳನ್ನು ರಚಿಸಿದ್ದಾರೆ. ಇಂತಹ ವಚನಗಳ ಅಮೃತವನ್ನುಣಿಸುವ, ಪರಿಚಯಿಸುವ ಉದ್ದೇಶದಿಂದ ಈ ವಚನಗಳನ್ನು ಅಳವಡಿಸಲಾಗಿದೆ.

@KTBS NOT TO BE REPUBLISHED

ಕೃತಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬಡಿದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ದ್ವಾಪರಯುಗದಲ್ಲಿ ಶ್ರೀಗುರುವು ಶಿಷ್ಯಂಗೆ ಝುಂಕಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ
ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ
ಗುಹೇಶ್ವರ, ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾ ಬೆರಗಾದೆನು.

–ಅಲ್ಲಮಪ್ರಭು

ಕಾಯಕದಲ್ಲಿ ನಿರತನಾಡೆ
ಗುರುದರ್ಶನವಾದಡೂ ಮರೆಯಬೇಕು;
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು **– ಆಯ್ದಕ್ಕಿ ಮಾರಯ್ಯ**

ಕಾಗೆಯಮರಿ ಕೋಗಿಲೆಯಾಗಬಲ್ಲುದೆ ?
ಆಡಿನಮರಿ ಆನೆಯಾಗಬಲ್ಲದೆ ?
ಸೀಳ (ಳು) ನಾಯಿ ಸಿಂಹದ ಮರಿಯಾಗಬಲ್ಲುದೆ ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ. **– ಅಮುಗೆರಾಯಮ್ಮ**

NOT TO BE REPUBLISHED
@KTBS

ಮನವ ಗೆದ್ದೆಹನೆಂದು, ತನುವ ಕರಗಿಸಿ ಕಾಯವ ಮರುಗಿಸಿ,
ನಿದ್ರೆಯ ಕೆಡಿಸಿ ವಿದ್ಯೆಯ ಕಲಿತಿಹನೆಂಬ ಬುದ್ಧಿಹೀನರಿರಾ ನೀವು ಕೇಳಿರೋ
ನಮ್ಮ ಶರಣರು ಮನವನೆಂತು ಗೆದ್ದಿಹರೆಂದಡೆ
ಕಾಮ ಕ್ರೋಧವ ನೀಗಿ, ಲೋಭ ಮೋಹ ಮದಮತ್ಸರವ ಛೇದಿಸಿ,
ಆಸೆ ರೋಷವಳಿದು, ಜಗದ ಪಾಶವ ಬಿಟ್ಟು,
ಆ ಮರುಗಿಸುವ ಕಾಯವನೆ ಪ್ರಸಾದ ಕಾಯವ ಮಾಡಿ ಸಲಹಿದರು
ಕೆಡಿಸುವ ನಿದ್ರೆಯೆನೆ ಯೋಗ ಸಮಾಧಿಯ ಮಾಡಿ,
ಸುಖವನೇಡಿಸಿ ಜಗವನೆ ಗೆದ್ದ ಶರಣರ ಬುದ್ಧಿಹೀನರೆತ್ತ ಬಲ್ಲರೊ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ? **– ಶಿವಶರಣೆ ಲಿಂಗಮ್ಮ**

## ಕೃತಿಕಾರರ ಪರಿಚಯ



**ಅಲ್ಲಮಪ್ರಭು:** ಅಲ್ಲಮಪ್ರಭು ೧೨ನೇ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಶಿವಶರಣ ಮತ್ತು ವಚನಕಾರ. ಈತನು ಜನಿಸಿದ್ದು **ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ.** ಈತನ ತಂದೆ ನಿರಹಂಕಾರ ಮತ್ತು ತಾಯಿ ಸುಜ್ಞಾನಿ. ಈತ ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ **'ಶೂನ್ಯ ಪೀಠ'**ದ ಅಧ್ಯಕ್ಷನಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದವನು. ಅವನು ಒಬ್ಬ ಅನುಭಾವಿ. ಸತ್ಯಶೋಧನೆಯೇ ಅವನಜೀವನದ ಪರಮ ಗುರಿಯಾಗಿತ್ತು. ಅವನ ವಚನಗಳು ಬೆರಗು ಮತ್ತು ಬೆಡಗಿನಿಂದ ಕೂಡಿವೆ. **'ಗುಹೇಶ್ವರಾ'** ಎಂಬುದು ಈತನ ವಚನಗಳ ಅಂಕಿತ.

## ಆಶಯ

ತಂದೆ, ತಾಯಿ, ಗುರುಗಳಿಗೆ ದೈವತ್ವದ ಸ್ಥಾನ ಮಾನ ನೀಡಿರುವ ಸಂಸ್ಕೃತಿ ನಮ್ಮದು. ಗುರುವಿನ ಸ್ಥಾನ ಬಹಳ ಪವಿತ್ರವಾದದ್ದು. ಗುರುವಿಗೆ ಸೃಷ್ಟಿ, ಸ್ಥಿತಿ, ಲಯಕಾರಕರಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸ್ಥಾನವನ್ನು ನೀಡಿ ಗೌರವಿಸಲಾಗಿದೆ. ಏಕೆಂದರೆ ಶಿಷ್ಯನಿಗೆ ಸಂಸ್ಕಾರ, ವಿದ್ಯೆ, ವಿನಯ ಹಾಗೂ ಬದುಕಿನ ಮಾರ್ಗವನ್ನು ನೀಡುವವನು ಗುರು. ಪರಿವರ್ತನೆ ಜಗದ ನಿಯಮ. ಕಾಲಗತಿಯಲ್ಲಿ ಎಲ್ಲವೂ ಪರಿವರ್ತನೆಗೊಳಪಡುತ್ತದೆ ಎಂಬುದನ್ನು ಗುರುವಿನ ಸ್ಥಾನ ಹಾಗೂ ಶಿಷ್ಯನ ಕಲಿಕಾ ಪ್ರವೃತ್ತಿಗಳು ನಾಲ್ಕು ಯುಗಗಳಲ್ಲಿ ಹೇಗೆ ಪರಿವರ್ತನೆಯಾಗಿದೆ ಎಂಬುದನ್ನು ಮಾರ್ಮಿಕವಾಗಿ ಈ ವಚನದಲ್ಲಿ ಬಿಂಬಿತವಾಗಿದೆ.


© KTBS NOT TO BE REPUBLISHED



**ಆಯ್ದಕ್ಕಿ ಮಾರಯ್ಯ:** ಈತನ ಕಾಲ **ಸಾ.ಶ.ಸು ೧೧೬೦.** ಶಿವಶರಣ ಹಾಗೂ ವಚನಕಾರ, **ರಾಯಚೂರು ಜಿಲ್ಲೆ**ಯ ಅಮರೇಶ್ವರದ ಆಯ್ದಕ್ಕಿ ಲಕ್ಕಮ್ಮನ ಪತಿ. ಆಯ್ದಕ್ಕಿಮಾರಯ್ಯ ಎಂದೇ ಪ್ರಸಿದ್ಧ. ಈವರೆಗೆ ಈತನ ಸುಮಾರು **೩೨** ವಚನಗಳು ದೊರೆತಿವೆ. ಎಂಥ ಪರಿಸ್ಥಿತಿ ಎದುರಾದರು ಕಾಯಕವ ಬಿಡದೆ ಮಾಡಬೇಕು, ಕಾಯಕ ಮಾಡಿ ಬದುಕಬೇಕು, ಯಾಚನೆ ಮಾಡಬಾರದು ಹಾಗೂ ಕೂಡಿಡಬಾರದು ಎಂದು ಹೇಳುವ ಮೂಲಕ ಕಾಯಕಬದುಕಿನ ಮಹತ್ವವನ್ನು ಸಾರಿದ್ದಾರೆ. ಇಂತಹ ಆದರ್ಶವನ್ನು ಹೊಂದಿರುವ ಈತನ ಅಂಕಿತ **'ಅಮರೇಶ್ವರಲಿಂಗ' ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದುತಂದು ದಾಸೋಹ ಮಾಡುವುದೇ** ಅವರ ಕಾಯಕವಾಗಿತ್ತು.

## ಆಶಯ

ಕಾಯಕವೇ ಕೈಲಾಸ ಎಂದು ಹೇಳುವ ಮೂಲಕ ಬಸವಣ್ಣ ಅವರು ಹೇಳಿದ ಕಾಯಕದ ಮಹತ್ವ ಆಯ್ದಕ್ಕಿಮಾರಯ್ಯ ಅವರ ವಚನಗಳಲ್ಲೂ ವ್ಯಕ್ತವಾಗಿದೆ. ಮನುಷ್ಯನಿಗೆ ಕಾಯಕವೇ ಮುಖ್ಯ. ಕಾಯಕದಲ್ಲೇ ಸರ್ವಸ್ವವನ್ನೂ ಕಾಣಬಹುದು. ಇದು ಶ್ರೇಷ್ಠ ಹಾಗೂ ಸಾರ್ವಕಾಲಿಕ ಸತ್ಯ. ಕರ್ತವ್ಯ ನಿಷ್ಠೆ ಮತ್ತು ಬದ್ಧತೆಯನ್ನು ಸಾರುವ ಈ ವಚನ ಇಂದಿಗೂ ಪ್ರಸ್ತುತ.




**ಅಮುಗೆರಾಯಮ್ಮ:** ಈಕೆಯ ಕಾಲ ಸಾ.ಶ. ಸುಮಾರು ೧೧೬೦. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಈಕೆ **ಸೊನ್ನಲಿಗೆಯವಳು (ಈಗಿನ ಸೊಲ್ಲಾಪುರ),** ಪತಿ ಅಮುಗೆ ದೇವಯ್ಯ. ನೇಯ್ಗೆ ಇವರ ಕಾಯಕ. ಈಕೆಯ ಅಂಕಿತನಾಮ **'ಅಮುಗೇಶ್ವರ'**. ತಮ್ಮ ವೈಚಾರಿಕ ಪ್ರಖರತೆ ಹಾಗೂ ಸಾಮಾಜಿಕ ಕಳಕಳಿಯಿಂದ ಜೀವನವನ್ನು ವಿಭಿನ್ನ ದೃಷ್ಟಿಕೋನದಿಂದ ದರ್ಶಿಸಿ, ಚಿಂತನಗೈದು ವಚನ ರಚನೆಯ ಮಹಾಕಾಯಕವನ್ನು ರೂಢಿಸಿಕೊಂಡವರು. ಗಂಡು ಹೆಣ್ಣೆಂಬ ಸಾಂಪ್ರದಾಯಿಕ ವರ್ಗೀಕರಣದ ಚೌಕಟ್ಟಿನಿಂದ ಹೊರಬಂದು ಸಮಾನತೆಯ ತತ್ವದ ಆಧಾರದಿಂದ ತನ್ನ ಧೋರಣೆಯ ಛಾಪನ್ನು ವಚನಗಳಲ್ಲಿ ಮೂಡಿಸಿದ್ದಾಳೆ.

@KTBS NOT TO BE REPUBLISHED

## ಆಶಯ

ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿಗಳಲ್ಲಿ ವಿಶೇಷ ಗುಣಗಳು ಸಹಜವಾಗಿರುತ್ತವೆ. ಆದರೆ ಮಾನವ ಹೊಂದಿರುವ ವಿಶೇಷ ಗುಣವನ್ನು ಇತರ ಪ್ರಾಣಿ ಪಕ್ಷಿಗಳು ಅನುಕರಿಸಲು ಸಾಧ್ಯವಿಲ್ಲ ಆದರಿಂದಾಗಿ ಮಾನವನು ಅರಿವು, ಆಚಾರ, ಸಮ್ಯಜ್ಞಾನ ಇವುಗಳಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದೆಂಬುದನ್ನು ಅಮುಗೆರಾಯಮ್ಮ ಈ ವಚನದ ಮೂಲಕ ಸ್ಪಷ್ಟಪಡಿಸಿದ್ದಾಳೆ.



**ಶಿವಶರಣೆ ಲಿಂಗಮ್ಮ:** ಈಕೆಯ ಕಾಲ ಸಾ.ಶ. ಸುಮಾರು ೧೧೬೦. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಕ್ಷೌರಿಕ ವೃತ್ತಿಯ ಹಡಪದ ಅಪ್ಪಣ್ಣನವರ ಧರ್ಮಪತ್ನಿ. ಈಕೆಯ ಅಂಕಿತನಾಮ **'ಅಪ್ಪಣ್ಣಪ್ರಿಯ ಚನ್ನಬಸವಣ್ಣ'** ಎಂಬುದು. ವ್ಯಕ್ತಿಯ ಹುಟ್ಟಿಗೂ ಅವನ ಸಾಧಿಸುವ ಸಾಧನೆಗೂ ಏನೇನು ಸಂಬಂಧವಿಲ್ಲ ಎಂಬುದನ್ನು ನಿರೂಪಿಸಿದವಳು. ಈಕೆಯ **ವಚನಗಳಲ್ಲಿ ಬೋಧನೆಯ ಧಾಟಿ, ಕಂಡದರ್ಶನ, ಬೀರಿದ ಬೆಳಕು,**

**ಏರಿದ ನಿಲುವು, ಸಾಧಕರಿಗೂ ಸಾಮಾನ್ಯರಿಗೂ ಶರಣರಿಗೂ** ಇರುವ ವ್ಯತ್ಯಾಸವನ್ನು ತಿಳಿಸಿದ್ದಾಳೆ. ಎಲ್ಲೆಡೆಗೂ ಹರಿದಾಡುವ ಮನಸ್ಸನ್ನು ಸ್ವೇಚ್ಛೆಯಾಗಿ ಹರಿಯಲು ಬಿಡದೆ ಬಯಲಲ್ಲಿ ಓಡಾಡುವ ಶರಣರ ಪಾದದಲ್ಲಿ ಬೆರೆಯಬೇಕೆನ್ನುವವಳು.

## ಆಶಯ

ವಿದ್ಯೆ ಸಾಧಕನ ಸೊತ್ತು. ವಿದ್ಯೆವಿಹೀನನ ಬದುಕು ನಿರರ್ಥಕವೆಂಬುದು ಸರ್ವೇಸಾಮಾನ್ಯವಾದ ಅಭಿಪ್ರಾಯ. ಆದರೆ ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು, ಪರಿಶ್ರಮಗಳು, ವಿದ್ಯೆ ವಿನಯವನ್ನು ತಂದು ಕೊಡದೆ ಸಂಪಾದನೆಗೆ ದಾರಿಯಾಗಿರುವುದನ್ನು ನೆನೆದರೆ ವಿಷಾದವಾಗುತ್ತದೆ. ಆದರೆ ಅಂದೇ ನಮ್ಮ ಶಿವಶರಣರು ಜೀವನವೆಂಬ ಪಾಠಶಾಲೆಯಲ್ಲಿ ಅರಿಷಡ್ವರ್ಗಗಳನ್ನು ನಿಗ್ರಹಿಸಿ ತಮ್ಮ ತಮ್ಮ ಕಾಯದ ಮೂಲಕ ನಿತ್ಯ ಸುಖಿಗಳಾಗಿ ಜೀವನವನ್ನು ಸಾರ್ಥಕಗೊಳಿಸಿಕೊಂಡ ರೀತಿಯನ್ನು ತಮ್ಮ ಈ ವಚನದಲ್ಲಿ ಮಾರ್ಮಿಕವಾಗಿ ತಿಳಿಸಲಾಗಿದೆ.

ಪ್ರಸ್ತುತ ನಿಗದಿ ಪಡಿಸಿರುವ ವಚನಗಳನ್ನು **ಎಂ. ಎಂ. ಕಲಬುರ್ಗಿ** ಅವರು ಸಂಪಾದಿಸಿ ಪ್ರಕಟಿಸಿರುವ **'ಸಮಗ್ರ ವಚನ ಸಂಪುಟ'**ಗಳಿಂದ ಆಯ್ದುಕೊಂಡಿದೆ.

******

## ಪದಗಳ ಅರ್ಥ

೧. ಬಡಿದು–ಹೊಡೆತಕೊಡು, ಹೊಡೆ ; ಪ್ರಸಾದ–ಅನುಗ್ರಹ, ಹರ್ಷ; ಝುಂಕಿಸು– ಗದರಿಸು, ಬೆದರಿಸು; ವಂದಿಸು–ನಮಸ್ಕರಿಸು; ಬೆರಗು–ಆಶ್ಚರ್ಯ, ಅಚ್ಚರಿ; ಕಟ್ಟಳೆ – ಪದ್ಧತಿ, ನಿಯಮ, ಅಪ್ಪಣೆ;

೨. ಕಾಯಕ–ಕಾರ್ಯ, ಕೆಲಸ, ಉದ್ಯೋಗ; ಜಂಗಮ–ಚಲನಶೀಲ, ಲೋಕಸಂಚಾರಿ, ವೀರಶೈವ ಧರ್ಮಾನುಸಾರ ವಿರಕ್ತ. ಹಂಗು–ಋಣ;

೩. ಅರಿವು–ತಿಳಿವಳಿಕೆ, ಜ್ಞಾನ; ಸೀಳುನಾಯಿ–ಕಾಡುನಾಯಿ; ಆಚಾರ–ಒಳ್ಳೆಯ ನಡತೆ; ನಾಮ–ಹೆಸರು; ಗಾವಿಲ–ಹೆಡ್ಡ, ಗಾಂಪ;

೪. ತನು–ಕಾಯ, ದೇಹ, ಶರೀರ; ಮರುಗಿಸು–ದುಃಖಪಡು; ಕಾಮ–ಬಯಕೆ;

ಕ್ರೋಧ–ಸಿಟ್ಟು, ಕೋಪ; ಲೋಭ–ಅತಿಯಾಸೆ; ಮೋಹ–ಮಮತೆ, ಭ್ರಾಂತಿ; ಮದ–ಗರ್ವ, ಸೊಕ್ಕು, ಅಮಲು; ಮತ್ಸರ–ಅಸೂಯೆ, ಹೊಟ್ಟೆಕಿಚ್ಚು; ಛೇದಿಸು–ಬೇರ್ಪಡಿಸು, ತುಂಡರಿಸು; ರೋಷ–ಸಿಟ್ಟು, ಕೋಪ; ಪಾಶ–ಬಂಧನ, ಕಟ್ಟುಪಾಡು; ಸಲಹು–ಕಾಪಾಡು, ರಕ್ಷಿಸು;

© KTBS NOT TO BE REPUBLISHED

## ಟಿಪ್ಪಣಿ

**ಸಮ್ಯಜ್ಞಾನ** : ಸುಜ್ಞಾನ, ಒಳ್ಳೆಯ ತಿಳಿವಳಿಕೆ, ಸದಾಚಾರ, (ಜೈನಧರ್ಮದಲ್ಲಿ ರತ್ನತ್ರಯಗಳೆಂದು ಕರೆಯುವ ಸಮ್ಯಜ್ಞಾನ, ಸಮ್ಯಕ್‌ದರ್ಶನ ಹಾಗೂ ಸಮ್ಯಕ್ ಚಾರಿತ್ರಗಳಲ್ಲಿ ಒಂದು.)

**ಜಂಗಮ** : ವೀರಶೈವ ಧರ್ಮದ ಅಷ್ಟಾವರಣಗಳಲ್ಲಿ ಒಂದು. ಗುರು ಮತ್ತು ಲಿಂಗ ಈ ಎರಡರ ಅನುಭಾವ ಶಿವ ಸ್ವರೂಪಿಯೇ ಜಂಗಮ.

**ಪ್ರಸಾದ** : ವೀರಶೈವ ಧರ್ಮದ ಅಷ್ಟಾವರಣಗಳಲ್ಲಿ ಒಂದು. ಪೃಥ್ವಿ ತತ್ವದ ಶುದ್ಧಿಯನ್ನುಂಟು ಮಾಡುವುದೇ ಪ್ರಸಾದ.

## ಅಭ್ಯಾಸ

NOT TO BE REPUBLISHED ©KTBS

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧.ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ?

೨.ಕಾಯಕದಲಿ ನಿರತನಾದವನು ಯಾವುದನ್ನು ಮರೆಯಬೇಕು?

೩.ಆಯ್ದಕ್ಕಿ ಮಾರಯ್ಯನ ಪ್ರಕಾರ ಕೈಲಾಸ ಯಾವುದು?

೪.ಕಾಗೆಯು ಏನಾಗಲು ಸಾಧ್ಯವಿಲ್ಲ?

೫.ಯಾರ ಮುಖವನ್ನು ನೋಡಲಾಗದು?

೬.ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಶ್ರೀಗುರುವು ಶಿಷ್ಯರಿಗೆ ಬುದ್ಧಿ ಕಲಿಸುವುದು ಕಾಲಕಟ್ಟಳೆಗೆ ಹೇಗೆ ಒಳಪಟ್ಟಿದೆ? ವಿವರಿಸಿ.

೨. ಆಯ್ದಕ್ಕಿ ಮಾರಯ್ಯನು ಕಾಯಕದ ಮಹತ್ವವನ್ನು ಹೇಗೆ ನಿರೂಪಿಸಿದ್ದಾನೆ?

೩. ಅರಿವು, ಆಚಾರ, ಸಮ್ಯಜ್ಞಾನದ ಬಗ್ಗೆ ಅಮುಗೆರಾಯಮ್ಮನ ಅನಿಸಿಕೆ ಏನು?

೪. ಬುದ್ಧಿ ಹೀನರು ಹೇಗೆ ವಿದ್ಯೆಯನ್ನು ಸಂಪಾದಿಸುತ್ತಾರೆ?

೫. ಶಿವಶರಣರು ಜಗವನ್ನೇ ಗೆದ್ದಿಹ ವಿಚಾರದಲ್ಲಿ ಲಿಂಗಮ್ಮನ ಅನಿಸಿಕೆಯೇನು?

**ಇ. ಕೊಟ್ಟಿರುವ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ವಚನಾಮೃತದಲ್ಲಿ ವ್ಯಕ್ತವಾಗಿರುವ 'ಕಾಯಕ ತತ್ವದ' ಮಹತ್ವವನ್ನು ವಿವರಿಸಿ.

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆ"

೨. "ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು"

೩. "ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು"

೪. " ಕಾಯಕವನೆ ಪ್ರಸಾದ ಕಾಯಕ ಮಾಡಿ ಸಲಹಿದರು "

**ಉ. ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರ ಪದವನ್ನು ಆರಿಸಿ ಬರೆಯಿರಿ.**

೧. ತ್ರೇತಾಯುಗದಲ್ಲಿ ಶ್ರೀಗುರುವು ಶಿಷ್ಯನಿಗೆ ಬುದ್ಧಿಯನ್ನು ಹೀಗೆ ಕಲಿಸುತ್ತಿದ್ದರು :

ಅ) ಬಡಿದು ಆ) ಬೈದು ಇ) ವಂದಿಸಿ ಈ) ಝುಂಕಿಸಿ

೨. ಆಯ್ದಕ್ಕಿ ಮಾರಯ್ಯನ ಅಂಕಿತ ನಾಮ :

ಅ) ಗುಹೇಶ್ವರ ಆ) ಅಮುಗೇಶ್ವರ ಇ) ಅಮರೇಶ್ವರಲಿಂಗ ಈ) ಅಪ್ಪಣ್ಣಪ್ರಿಯ.

೩. **'ಕೋಗಿಲೆ'** ಪದದ ತದ್ಭವ ರೂಪ :

ಅ) ಕೋಕಿಲ ಆ) ಸಂಕಿಲಾ ಇ) ಕೋಕಿಲೆ ಈ) ಕೊಕಿಲಾ

೪. **'ಜಂಗಮ'** ಪದದ ವಿರುದ್ಧಾರ್ಥಕ ಪದ :

ಅ) ವಿರಕ್ತಿ ಆ) ವಿದ್ವಾಂಸ ಇ) ಗುರು ಈ) ಸ್ಥಾವರ

೫. **"ತನುವ ಕರಗಿಸಿ ಕಾಯ ಮರುಗಿಸಿ ವಿದ್ಯೆಯನ್ನು ಕಲಿತಿಹೆ"** ಎನ್ನುವವರು :

ಅ) ಶಿವಶರಣರು ಆ) ಬುದ್ಧಿಹೀನರು ಇ) ಸಾಮಾನ್ಯರು ಈ) ವಿದ್ಯಾರ್ಥಿಗಳು

©KTBS NOT TO BE REPUBLISHED

**ಊ. ಗುಂಪಿಗೆ ಸೇರದ ಪದಗಳನ್ನು ಆಯ್ದು ಬರೆಯಿರಿ.**

೧. ಆನೆ ಗಜ ಹಯ ಕರಿ

೨. ಬಸವಣ್ಣ ಕನಕದಾಸರು ಅಲ್ಲಮಪ್ರಭು ಅಮುಗೆ ರಾಯಮ್ಮ

೩. ಕಾಮ ಕ್ರೋಧ ಧನ ಲೋಭ

೪. ದ್ವಾಪರಯುಗ ಕೃತಯುಗ ಸುವರ್ಣಯುಗ ಕಲಿಯುಗ

೫. ತನು ದೇಹ ಮಾಯ ಕಾಯ

## ಚಟುವಟಿಕೆ

**ಅ. ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ.**

ಕಾಯಕದಲ್ಲಿ ನಿರತನಾಡೆ

________________________________

________________________________

________________________________

________________________________

ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಕಾಗೆಯಮರಿ ಕೋಗಿಲೆಯಾಗಬಲ್ಲುದೆ ?

________________________________

________________________________

________________________________

________________________________

ಮುಖವ ನೋಡಲಾಗದು ಅಮುಗೇಶ್ವರಾ.

## ಪ್ರಬಂಧ ರಚನೆ

ಪ್ರಬಂಧವು ಗದ್ಯ ಸಾಹಿತ್ಯದ ಒಂದು ಪ್ರಕಾರವಾಗಿದೆ. ಪ್ರಬಂಧಗಳನ್ನು ಓದುವುದರಿಂದ ಹಾಗೂ ಬರೆಯುವುದರಿಂದ ವಿಷಯ ಮತ್ತು ಭಾಷೆಗಳೆರಡರ ಜ್ಞಾನ ಏಕಕಾಲದಲ್ಲಿ ಲಭಿಸುತ್ತದೆ. ಪ್ರಬಂಧ ಸಾಹಿತ್ಯವು ಸರಳವೂ ಉಪಯುಕ್ತವೂ ಆಗಿದ್ದು, ಸಮಕಾಲೀನ ಜಗತ್ತನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

**ಪ್ರಬಂಧದ ಅರ್ಥ :**

ಪ್ರಬಂಧವು ತರ್ಕಬದ್ಧ ವಾಕ್ಯ ಹಾಗೂ ವಿಚಾರಗಳಿಂದ ಸುಸಂಬದ್ಧವಾಗಿ ಬರೆಯಲ್ಪಟ್ಟ ಬಂಧವೇ ಪ್ರಬಂಧ. ಅಂದರೆ ವಿಚಾರಗಳನ್ನು ಕ್ರಮಬದ್ಧವಾಗಿ ಅರ್ಥಪೂರ್ಣವಾಗಿ ಬರೆಯುವುದನ್ನು ಪ್ರಬಂಧ ಎನ್ನುತ್ತೇವೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಿ ತನ್ನ ಅನುಭವ ಕಲ್ಪನೆ ಹಾಗು ವಿಚಾರಗಳನ್ನು ಬೆರೆಸಿ ಸುಸಂಬದ್ಧ ರೀತಿಯ ಪ್ರೌಢ ಬರೆವಣಿಗೆಯನ್ನು ಪ್ರಬಂಧ ಎನ್ನಬಹುದು.

NOT TO BE REPUBLISHED @KTBS

**ಪ್ರಬಂಧ ರಚನೆಯ ಹಂತಗಳು :**

**೧. ವಿಷಯದ ಆಯ್ಕೆ :**

ಪ್ರಬಂಧ ರಚಿಸಲು ಒಂದು ವಸ್ತು ವಿಷಯ ಇರಲೇ ಬೇಕು. ನಮ್ಮ ಆಸಕ್ತಿ ಹಾಗು ಅನುಭವಗಳಿಗೆ ನಿಲುಕುವ ವಸ್ತು ವಿಚಾರಗಳನ್ನು ಆಯ್ಕೆಮಾಡಿಕೊಂಡು ಪ್ರಬಂಧವನ್ನು ಬರೆಯಲು ಮುಂದಾಗಬೇಕು. ಪ್ರಬಂಧಕ್ಕೆ ವಿಷಯ ಇಂತಹದ್ದೇ ಇರಬೇಕು ಎಂದೇನಿಲ್ಲ. ವ್ಯಕ್ತಿ, ವಸ್ತು, ಪ್ರಾಣಿ, ಪಕ್ಷಿ, ನೆಲ, ಜಲ,  ಭಾವನೆಗಳು, ಮೌಲ್ಯಗಳು, ಪ್ರಚಲಿತ ಘಟನೆಗಳು, ಸಮಸ್ಯೆಗಳು, ಇತಿಹಾಸ, ವಿಜ್ಞಾನ, ಸಮಾಜ ಯಾವುದಾದರೂ ಆಗಿರಬಹುದು.

**೨. ಮಾಹಿತಿಯ ಸಂಗ್ರಹಣೆ :**

ಪ್ರಬಂಧ ಬರೆಯಲು ವಿಷಯ ಆಯ್ಕೆ ಮಾಡಿಕೊಂಡನಂತರ ವಿಷಯಕ್ಕೆ ಪೂರಕವಾದ ಮಾಹಿತಿಗಳನ್ನು ಪುಸ್ತಕಗಳು, ಪತ್ರಿಕೆಗಳು, ಅಂತರ್ಜಾಲ, ಸಂದರ್ಶನ ಇಲ್ಲವೆ ಖುದ್ದು ಸ್ಥಳಗಳಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಬೇಕು. ಇದರಿಂದ ನಮ್ಮ ವಿಚಾರಗಳಿಗೆ ಇನ್ನೂ ಹೆಚ್ಚಿನ ಪುಷ್ಟಿ ಸಿಕ್ಕಂತಾಗುತ್ತದೆ.

**೩. ವಿಷಯವನ್ನು ಕ್ರಮ ಬದ್ಧವಾಗಿ ಜೋಡಿಸುವುದು :**

ಸಂಗ್ರಹಿಸಿದ ಮಾಹಿತಿಯನ್ನು ಕ್ರಮಬದ್ಧವಾಗಿ ಜೋಡಿಸಿಕೊಳ್ಳಬೇಕು. ಅಂದರೆ ದೊರೆತ ಅಂಕಿ ಅಂಶಗಳ ನಡುವೆ ಸಂಬಂಧವಿರುವಂತೆ ನೋಡಿಕೊಳ್ಳಬೇಕು.

**೪. ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯದ ಮಂಡನೆ :**

ಪ್ರಬಂಧವನ್ನು ಮಾಹಿತಿಗಳು ಲಭ್ಯವಾದ ನಂತರ ನಮ್ಮದೇ ಆದ ಶೈಲಿಯಲ್ಲಿ ವಿಚಾರಗಳನ್ನು ನಿರೂಪಿಸಬೇಕು. ಭಾಷೆ ಮತ್ತು ವಿಷಯಗಳ ಸಮಾಗಮ ಆಗಬೇಕು. ಬರೆಯುವ ಸಂದರ್ಭದಲ್ಲಿ ಗಾದೆ ಮಾತುಗಳನ್ನು, ನುಡಿಗಟ್ಟುಗಳನ್ನು, ಹೇಳಿಕೆಗಳನ್ನು ಹಾಗು ಚಿಕ್ಕ ಕಥೆ ಹಾಗು ಘಟನೆಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಬೇಕು. ಇಡೀ ಪ್ರಬಂಧ ತಮ್ಮ ಸ್ವಂತ ವಿಚಾರಾನುಭವಗಳನ್ನೆ ಒಳಗೊಂಡಿರಬೇಕು. ಯಾರೋ ಬರೆದ ಪ್ರಬಂಧವನ್ನು ಕಂಠಪಾಠಮಾಡಿ ಬರೆಯುವುದು ಪ್ರಬಂಧ ಅನ್ನಿಸುವುದಿಲ್ಲ. ಪರೀಕ್ಷೆಗೂ ಮುನ್ನ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿ ಪರೀಕ್ಷೆಯಲ್ಲಿ ಬರೆಯುವ ಸಿದ್ಧತೆ ನಡೆಸಿರಬೇಕು. ಪ್ರಬಂಧ ಬರೆಯುವಾಗ ಆರಂಭ, ವಿಷಯ ಬೆಳವಣಿಗೆ ಹಾಗೂ ಮುಕ್ತಾಯಗಳು ಇರಬೇಕು.

@KTBS NOT TO BE REPUBLISHED

**೫. ಪರಿಶೀಲನೆ :**

ಪ್ರಬಂಧವನ್ನು ಬರೆದ ನಂತರ ಮತ್ತೊಮ್ಮೆ ಅದನ್ನು ಪರಿಶೀಲಿಸಬೇಕು. ಭಾಷೆ ಹಾಗು ವಿಷಯದ ದೋಷಗಳು ಇದ್ದಲ್ಲಿ ಸರಿಪಡಿಸಿ ಬರೆಯಬೇಕು. ಪರಿಶೀಲನೆಯನ್ನು ನಮ್ಮ ಗೆಳೆಯರು ಹಾಗು ನಮಗಿಂತ ಹೆಚ್ಚು ಬಲ್ಲವರಿಂದ ಮಾಡಿಸಬೇಕು. ಇದರಿಂದ ಪ್ರಬಂಧವು ಇನ್ನೂ ಹೆಚ್ಚು ಉತ್ತಮವಾಗಿ ಮೂಡಿಬರುತ್ತದೆ.

**೬. ಪ್ರಕಟಣೆ :**

ಪ್ರಬಂಧವನ್ನು ರಚಿಸಿದ ನಂತರ ಅದನ್ನು ನಿಮ್ಮ ಶಾಲಾ ಭಿತ್ತಿ ಪತ್ರ, ಶಾಲಾ ಸಂಚಿಕೆ ಇಲ್ಲವೆ ಸ್ಥಳೀಯ ಪತ್ರಿಕೆಗಳಿಗೆ ಪ್ರಕಟಿಸಲು ಸಂಬಂಧಿಸಿದವರಿಗೆ ನೀಡಿ ಮನವಿ ಮಾಡಿಕೊಳ್ಳಬೇಕು. ಇದರಿಂದ ನಿಮ್ಮ ವಿಚಾರಗಳು ಇತರರಿಗೆ ತಿಳಿಯುವುದಲ್ಲದೆ ನಿಮ್ಮ ಗೌರವವೂ ಹೆಚ್ಚಾಗುತ್ತದೆ.

ಸಾಮಾನ್ಯವಾಗಿ ಪರೀಕ್ಷೆಯಲ್ಲಿ ಎರಡು ಮೂರು ವಿಷಯಗಳನ್ನು ನೀಡಿ ಯಾವುದಾದರೊಂದು ವಿಷಯದ ಮೇಲೆ ಪ್ರಬಂಧ ಬರೆಯಲು ಸೂಚಿಸಲಾಗಿರುತ್ತದೆ. ನೀವು ನಿಮ್ಮ ಅನುಭವದ ನೆಲೆಯಲ್ಲಿ ಬರೆಯಬಹುದಾದ ವಿಷಯವೊಂದನ್ನು ಆಯ್ಕೆಮಾಡಿಕೊಂಡು ನಿಮ್ಮ ವಿಚಾರಗಳನ್ನು ಸುಸಂಬದ್ಧವಾಗಿ, ಅರ್ಥಪೂರ್ಣವಾಗಿ ತಪ್ಪಿಲ್ಲದಂತೆ ಬರೆಯಬೇಕು.

**ಮೇಲಿನ ಹಂತಗಳನ್ನು ಅನುಸರಿಸಿ ಈ ಕೆಳಗಿನ ವಿಷಯಗಳ ಮೇಲೆ ಪ್ರಬಂಧಗಳನ್ನು ಬರೆಯಿರಿ.**

1. ರಾಷ್ಟ್ರೀಯ ಹಬ್ಬಗಳು
2. ಜಾಗತಿಕ ತಾಪಮಾನ
3. ಪರಿಸರ ಮಾಲಿನ್ಯ
4. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ
5. ಗ್ರಂಥಾಲಯದ ಮಹತ್ತ್ವ
6. ನನ್ನ ನೆಚ್ಚಿನ ಪುಸ್ತಕ

**ಪೂರಕ ಓದು**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ** ಪ್ರಕಟಿಸಿರುವ ಸಮಗ್ರ ವಚನ ಸಂಪುಟದಲ್ಲಿರುವ ಕೆಲವು ಜನಪ್ರಿಯ ವಚನಗಳನ್ನು ಸಂಗ್ರಹಿಸಿ.

✦ ✦ ✦ ✦ ✦

©KTBS NOT TO BE REPUBLISHED

# ೮. ರಾಮಧಾನ್ಯ ಚರಿತೆ

W4F7Y5

– ಕನಕದಾಸರು


**ಪ್ರವೇಶ :** ಸಾಹಿತ್ಯವು ಸಾಮಾಜಿಕ ವ್ಯವಸ್ಥೆಯ ಕೈಗನ್ನಡಿಯಾಗಿದೆ. ಈ ಕಾರಣದಿಂದಾಗಿ ಸಮಾಜ ಸುಧಾರಣೆಯಲ್ಲಿ ಸಾಹಿತ್ಯ ಪ್ರಮುಖ ಪಾತ್ರ ವಹಿಸುತ್ತದೆ. ಸಾಹಿತ್ಯದ ಮೂಲಕ ಸಮಾಜದ ಓರೆ–ಕೋರೆಗಳನ್ನು ತಿದ್ದಿ ತೀಡಬೇಕೆಂಬ ಆಶಯವೂ ಇದೆ. ಈ ನಿಟ್ಟಿನಲ್ಲಿ ೧೫–೧೬ನೇ ಶತಮಾನದಲ್ಲಿ ಮೂಡಿಬಂದ ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣಾ ಸಾಹಿತ್ಯ ಪ್ರಕಾರವೇ ದಾಸಸಾಹಿತ್ಯ. ಈ ಶತಮಾನದಲ್ಲಿ ವ್ಯಾಸರಾದಿಯಾಗಿ ಪುರಂದರದಾಸರು, ಕನಕದಾಸರು, ವಿಜಯದಾಸರು ಮೊದಲಾದವರು ಹರಿದಾಸ ಪರಂಪರೆಯನ್ನು ಹುಟ್ಟುಹಾಕಿ ಸಾಮಾಜಿಕ ಪರಿವರ್ತನೆಗೆ ನಾಂದಿ ಹಾಡಿದ್ದಾರೆ.

ರಾಮಧಾನ್ಯ ಚರಿತೆಯು ಅತ್ಯಂತ ಚರ್ಚಿತವಾದ ಕೃತಿ. ಇದಕ್ಕೆ ಕಾರಣ ಇದರಲ್ಲಿ ಬರುವ ವ್ರಿಹಿ (ಭತ್ತ) ಹಾಗೂ ನರೆದಲಗ (ರಾಗಿ)ಗಳ ಸಂವಾದ ಜಾತಿಗಳ ನಡುವಿನ ವಿಷಮತೆಯನ್ನೂ, ಬಂಡಾಯದ ಧ್ವನಿಯಾಗಿಯೂ, ಶ್ರೀಮಂತ ಬಡವರ ಪ್ರತಿನಿಧಿಗಳಾಗಿ ಮತ್ತು ಸಂಸ್ಕೃತ ಕನ್ನಡ ಭಾಷೆಗಳ ವಾದವಾಗಿಯೂ ನೋಡುವುದರಿಂದ ಈ ಕೃತಿಗೆ ಹೆಚ್ಚಿನ ಹೆಗ್ಗಳಿಕೆ ಇದೆ. ಭತ್ತ ಮತ್ತು ರಾಗಿಗಳ ಜಗಳ, ಇದು ಪರಿಹಾರಗೊಂಡ ರೀತಿಯನ್ನು ಇಲ್ಲಿ ನಿರೂಪಿಸಲಾಗಿದೆ.

©KTBS
NOT TO BE REPUBLISHED

ಕೆಲರು ಗೋದಿಯ ಸಾಮೆಯನು ಕೆಲ
ಕೆಲರು ನವಣೆಯ ಕಂಬು ಜೋಳವ
ಕೆಲರು ಹಾರಕವೆಂದು ಕೆಲವರು ನೆಲ್ಲನತಿಶಯವ
ಕೆಲರು ನರೆದಲೆಗನನು ಪತಿಕರಿ
ಸಲದ ನೋಡಿದ ನೃಪತಿಯದರೊಳು
ಹಲವು ಮತವೇಕೊಂದನೇ ಪೇಳೆನಲು ಗೌತಮನು. ॥ ೧ ॥

ದಾಶರಥಿ ಚಿತ್ತೈಸು ನಮ್ಮಯ
ದೇಶಕತಿಶಯ ನರೆದಲೆಗನೇ
ವಾಸಿಯುಳ್ಳವನೀತ ಮಿಕ್ಕಿನ ಧಾನ್ಯವೇಕೆನಲು
ಲೇಸನಾಡಿದೆ ಮುನಿಪ ಗೌತಮ
ದೋಷರಹಿತನು ಪಕ್ಷಪಾತವ
ನೀಸು ಪರಿಯಲಿ ಮಾಡುವರೆ ಶಿವಯೆಂದನಾವ್ರಿಹಿಗ ॥ ೨ ॥



ಎಲ್ಲ ಧರ್ಮದ ಸಾರವನು ನೀವ್
ಬಲ್ಲಿರರಿಯಿರೆ ಎಲ್ಲರನು ನೀ
ವಿಲ್ಲಿ ನುಡಿವ ಉಪೇಕ್ಷೆಯುಂಟೇ ಸಾಕದಂತಿರಲಿ
ನೆಲ್ಲು ನಾನಿರೆ ಗೋದಿ ಮೊದಲಾ
ದೆಲ್ಲ ಧಾನ್ಯಗಳಿರಲು ಇದರಲಿ
ಬಲ್ಲಿದನು ನರೆದಲೆಗನೆಂಬುದಿದಾವ ಮತವೆಂದ ॥ ೩ ॥

ಏನೆಲವೊ ನರೆದಲಗ ನೀನು ಸ
ಮಾನನೇ ಎನಗಿಲ್ಲಿ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚು ಕುಂದುಗಳ
ಜಾನಕೀ ಪತಿ ಸನಿಹದಲಿ ಕುಲ
ಹೀನ ನೀನು ಪ್ರತಿಷ್ಠ ಸುಡು ಮತಿ
ಹೀನ ನೀನೆಂದೆನುತ ಖತಿಯಲಿ ಬೈದು ಭಂಗಿಸಿದ ॥ ೪ ॥

ಕ್ಷಿತಿಯಮರರುಪನಯನದಲಿ ಸು
ವ್ರತ ಸುಭೋಜನ ಪರಮ ಮಂತ್ರಾ
ಕ್ಷತೆಗಳಲಿ ಶುಭಶೋಭನದಲಾರತಿಗೆ ಹಿರಿಯರಲಿ
ಕ್ರತುಗಳೆಡೆಯೊಳಗರಮನೆಯಲಿ
ಪ್ರತಿದಿನವು ರಂಜಿಸುತ ದೇವರಿ
ಗತಿಶಯದ ನೈವೇದ್ಯ ತಾನಿಹೆನೆಂದನಾ ವ್ರಿಹಿಗ ॥ ೫ ॥

NOT TO BE REPUBLISHED @KTBS

ಸತ್ಯಹೀನನು ಬಡವರನು ಕ
ಣ್ಣೆತ್ತಿನೋಡೆ ಧನಾಢ್ಯರನು ಬೆಂ
ಬತ್ತಿ ನಡೆವ ಅಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ ॥ ೬ ॥

ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವರಿಯೆ
ಎಲವೊ ನೀನೆಲ್ಲಿಹೆಯೊ ನಿನ್ನಯ
ಬಳಗವದು ತಾನೆಲ್ಲಿಹುದು ಈ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ ॥ ೭ ॥

ಮಸೆದುದಿತ್ತಂಡಕ್ಕೆ ಮತ್ಸರ
ಪಿಸುಣ ಬಲರತಿ ನಿಷ್ಠುರರು ವಾ
ದಿಸಲು ಕಂಡನು ನೃಪತಿ ಮನದಲಿ ನೋಡಿ ನಸುನಗುತ
ಹಿಸುಣರಿವದಿರ ಮತ್ಸರವ ಮಾ
ಣಿಸುವ ಹದನೇನೆನುತ ಯೋಚಿಸಿ
ದ ಸುರ ಮುನಿಪರ ನೋಡೆ ಗೌತಮ ಮುನಿಪನಿಂತೆಂದ ॥ ೮ ॥

ಅರಸುಗಳು ನಾವೆಲ್ಲ ಭೂಮೀ
ಸುರರು ನೆರೆದಿಹ ದಾನವರು ವಾ
ನರರು ನಮಗೀ ನ್ಯಾಯವನು ಪರಿಹರಿಸಲಳವಲ್ಲ
ಕರೆಸುವೆವು ಹರಿಹರವಿರಂಚಾ
ದ್ಯರನಯೋಧ್ಯೆಗೆ ಅವರ ಗುಣವಾ
ಧರಿಸಿ ಪೇಳ್ವರು ನಯದೊಳೆಂದನು ರಾಮ ನಸುನಗುತ ॥ ೯ ॥

NOT TO BE REPUBLISHED ©KTBS

ಪರಮ ಧಾನ್ಯದೊಳಿಬ್ಬರೇ ಇವ
ರಿರಲಿ ಸೆರೆಯೊಳಗಾರು ತಿಂಗಳು
ಹಿರಿದು ಕಿರಿದೆಂಬಿವರ ಪೌರುಷವರಿಯಬಹುದಿನ್ನು
ಪುರಕೆ ಗಮನಿಸಿ ನಾವು ನಿಮ್ಮನು
ಕರೆಸುವೆವು ಕೇಳೆನುತಯೋಧ್ಯಾ
ಪುರಿಗೆ ಪಯಣವ ಮಾಡಹೇಳಿದನಾ ವಿಭೀಷಣಗೆ ॥ ೧೦ ॥



## ಕೃತಿಕಾರರ ಪರಿಚಯ

ಸಂತ ಕವಿ, ಹರಿದಾಸ ಪರಂಪರೆಯ ಮತ್ತು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರೆನಿಸಿದ ಖ್ಯಾತಿಗೆ ಭಾಜನರಾದವರು ಕನಕದಾಸರು. ಇವರ ಮೊದಲ ಹೆಸರು ತಿಮ್ಮಪ್ಪನಾಯಕ. ಇವರ ಕಾಲ ಸಾ.ಶ. **೧೫೦೮.** ಜನ್ಮಸ್ಥಳ **ಹಾವೇರಿ ಜಿಲ್ಲೆಯ ಬಾಡ ಗ್ರಾಮ.** ತಂದೆ ಬೀರಪ್ಪ ಹಾಗೂ ತಾಯಿ ಬಚ್ಚಮ್ಮ. ಇವರ ಆರಾಧ್ಯ ದೈವ ಹಾಗೂ ಅಂಕಿತನಾಮ ಕಾಗಿನೆಲೆ ಆದಿಕೇಶವ. ವಿಜಯನಗರ ಸಾಮ್ರಾಜ್ಯದಲ್ಲಿ ಸಣ್ಣ ಮಂಡಲವೊಂದರ ಡಣ್ಣಾಯಕರಾಗಿದ್ದ ತಿಮ್ಮಪ್ಪನಾಯಕನಿಗೆ ಕೊಪ್ಪರಿಗೆ ಹೊನ್ನು ದೊರೆ, ಆ ಬಂಗಾರವನ್ನೆಲ್ಲ ಬಡವರಿಗೆ ದಾನಮಾಡಿ ವೈರಾಗ್ಯ ಹೊಂದಿ ಕನಕದಾಸರಾದರು. ಇವರ ವಿಶಿಷ್ಟ ಗುಣಗಳಾದ ಭಕ್ತಿ, ವೈರಾಗ್ಯ, ಕಾವ್ಯ ರಚನಾ ಗುಣಗಳು ವ್ಯಾಸರಾಯರ ಶಿಷ್ಯರಾಗುವಂತೆ ಮಾಡಿತು. ಇವರು ರಚಿಸಿರುವ ಕೃತಿಗಳು **ಹರಿಭಕ್ತಿಸಾರ, ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ಮತ್ತು ನಳಚರಿತ್ರೆ.** ಇವಲ್ಲದೆ ನೂರಾರು **ಕೀರ್ತನೆಗಳು, ಉಗಾಭೋಗ, ಸುಳಾದಿಗಳು ಮತ್ತು ಮಂಡಿಗೆ**ಗಳನ್ನು ರಚಿಸಿದ್ದಾರೆ.

## ಆಶಯ

ಪ್ರತಿಯೊಂದು ಜೀವಿಯ ಬದುಕಿಗೆ ಅತ್ಯಗತ್ಯವಾಗಿರುವ ವಸ್ತುಗಳಲ್ಲಿ ಆಹಾರವು ಒಂದು. ಆಹಾರವಿಲ್ಲದೇ ಯಾವುದೇ ಜೀವಿಯು ಬದುಕಲಾರದು. ಇಂಥ ಆಹಾರ ಧಾನ್ಯಗಳ ಮಹತ್ವವನ್ನು ತಿಳಿಸುವ ಮೂಲಕ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಪರಂಪರೆಯನ್ನು ಇಲ್ಲಿ

ಮಾರ್ಮಿಕವಾಗಿ ಬಿಂಬಿತವಾಗಿದೆ. ರಾಮಧಾನ್ಯ ಚರಿತ್ರೆ ನರೆದಲಗ (ರಾಗಿ) ವ್ರಿಹಿ (ಭತ್ತ) ಯರ ನಡುವಿನ ಜಗಳದ ಕಥೆ ಹಾಗೂ ಪರಿಹಾರಗೊಂಡ ರೀತಿಯ ನಿರೂಪಣೆ ಇದರ ಕಥಾವಸ್ತು. ಇದು ಪುರಾಣಗಳಲ್ಲಿ ಮತ್ತು ಸಾಮಾಜಿಕ ವಸ್ತುಗಳ ರೂಪಕ ವಿಧಾನದಲ್ಲಿ ಸಹಜವಾಗಿ ಮಿಳಿತಗೊಂಡಿದೆ. ಇಲ್ಲಿಯ ಪಾತ್ರಗಳು ಪ್ರಾಣಿಗಳು ಅಥವಾ ಮಾನವರಲ್ಲ. ಧಾನ್ಯ, ಜೀವ ಬೀಜಗಳಾಗಿವೆ.

ಭತ್ತ ಹಾಗೂ ರಾಗಿಯ ನಡುವಿನ ಸಂಭಾಷಣೆಯ ಮೂಲಕ ರಾಗಿ ಹೇಗೆ ತನ್ನ ಔಚಿತ್ಯವನ್ನು ಸಾಬೀತು ಪಡಿಸುತ್ತದೆ ಹಾಗೂ ರಾಮಧಾನ್ಯವೆಂಬ ಹೆಸರು ಪಡೆಯುತ್ತದೆ ಎಂಬುದನ್ನು ನಾಟಕೀಯವಾಗಿ ಈ ಕೃತಿಯಲ್ಲಿ ನಿರೂಪಿಸಲಾಗಿದೆ. ಕನಕದಾಸರು ರಾಗಿಯ ನೆಪ ಹಿಡಿದು ತಮ್ಮ ಆತ್ಮಚರಿತ್ರೆಯನ್ನು ಹೇಳುತ್ತಿರುವಂತೆ ತೋರುತ್ತದೆ. ವ್ರಿಹಿ (ಭತ್ತ) ಹಾಗೂ ನರೆದಲಗ (ರಾಗಿ) ಯ ನಡುವಿನ ಸಂಭಾಷಣೆಯು ಕನಕದಾಸರ ಸೃಜನಶೀಲತೆ, ಅತಿಶಯವನ್ನು ಸಾರುತ್ತದೆ. ರಾಮಧಾನ್ಯ ಚರಿತ್ರೆ ಈ ಕೃತಿಯು ಬಂಡಾಯ ಸಾಹಿತ್ಯದ ಬೇರು ಹಾಗೂ ನವ್ಯೋತ್ತರದ ಸೂರು ಎಂದರೆ ತಪ್ಪಾಗಲಾರದು.

ಡಾ. ಸಾ.ಶಿ. ಮರುಳಯ್ಯ ಅವರು ಸಂಪಾದಿಸಿರುವ ಕನಕದಾಸರ ಕಾವ್ಯಭಾಗ–೧ ಕೃತಿಯಿಂದ ಆಯ್ದು ನಿಗದಿಪಡಿಸಿದೆ. (ಕನಕ ಸಾಹಿತ್ಯ ದರ್ಶನ ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.)

@KTBS NOT TO BE REPUBLISHED

* * *

## ಪೂರ್ವ ಕಥೆ

ಧರ್ಮರಾಯನು ತಮ್ಮಂದಿರನೊಡಗೂಡಿ ಹನ್ನೆರಡು ವರ್ಷ ವನವಾಸಕ್ಕಾಗಿ ಕಾಮ್ಯಕ ವನದಲ್ಲಿರುವ ಸಂದರ್ಭ. ಶಾಂಡಿಲ್ಯ ಮುನಿಗಳು ತಮ್ಮ ಮುನಿಪರಿವಾರದೊಂದಿಗೆ ಆಗಮಿಸುತ್ತಾರೆ. ಧರ್ಮಜನು ಯಥಾರ್ಥವಾಗಿ ಸತ್ಕರಿಸುತ್ತಾನೆ. ಅರಣ್ಯವಾಸದ ಕ್ಲೇಶ ಸಂಕಷ್ಟಗಳ ಪರಿಹಾರಾರ್ಥಕವಾಗಿ ಶಾಂಡಿಲ್ಯಮುನಿಗಳು ಶ್ರೀರಾಮಚಂದ್ರನ ಚರಿತ್ರೆಯನ್ನು ನರೆದಲಗ (ರಾಗಿ) ಮತ್ತು ವ್ರೀಹಿ(ಭತ್ತ)ಯರ ಕಥೆಯನ್ನು ವಿವರಿಸುತ್ತಾರೆ. ರಾಮನ ಜನನದಿಂದ ಆರಂಭಿಸಿ, ರಾವಣನನ್ನು ಸಂಹರಿಸಿ, ವಿಭೀಷಣನಿಗೆ ಪಟ್ಟಾಭಿಷೇಕ ಮಾಡಿ ದಾನವ ವಾನರ ಮುಖ್ಯರನ್ನು ಕೂಡಿಕೊಂಡು ಅಯೋಧ್ಯಾ ಅಭಿಮುಖವಾಗಿ ಪ್ರಯಾಣ ಬೆಳೆಸುತ್ತಾನೆ. ಪ್ರಯಾಣ ಕಾಲದಲ್ಲಿ ಸೀತೆಗೆ ರಮಣೀಯ ದೃಶ್ಯಗಳನ್ನು ತೋರಿಸುತ್ತಾ, ಋಷಿಗಳನ್ನು ಸಂದರ್ಶಿಸಿ ಅವರ ಆಶೀರ್ವಾದ ಪಡೆಯುತ್ತಾ ಮುಂದುವರೆಯುತ್ತಾನೆ. ಗೌತಮ ಮುನಿಯ ಆಶ್ರಮದಲ್ಲಿ ಬೆಲ್ಲ, ಸಕ್ಕರೆ, ಜೇನುತುಪ್ಪದ ರಸಾಯನಗಳು ಹಾಗೂ ವಿವಿಧ ಧಾನ್ಯಗಳಿಂದ ತಯಾರಿಸಿದ ಭಕ್ಷ್ಯಗಳ ಸಮಾರಾಧನೆಯಾಗುತ್ತದೆ. ಈ ಭಕ್ಷ್ಯಗಳ ರುಚಿ ತಾರತಮ್ಯದ ಬಗೆಗೆ ಮಾತುಕತೆಯಾಗುತ್ತದೆ.

ಶ್ರೀರಾಮ ಹನುಮಂತನೊಡನೆ ಈ ವಿಷಯವನ್ನು ಪ್ರಸ್ತಾಪಿಸಿದಾಗ, ಅವನು ನಾನು ಸವಿದ ಧಾನ್ಯದ ತನುವನೀಕ್ಷಿಸಬೇಕು ತರಿಸಿ, ಎಂದು ಕೇಳಿಕೊಳ್ಳುತ್ತಾನೆ. ಗೌತಮನು ಧಾನ್ಯಗಳನ್ನು ತರಿಸುತ್ತಾನೆ. ಧಾನ್ಯಗಳ ಶ್ರೇಷ್ಠತೆಯ ಬಗ್ಗೆ ಚರ್ಚಿತವಾಗುತ್ತದೆ.

**ಪದವಿಂಗಡಣಾ ಓದು**

೧. ಕೆಲರು ಗೋದಿಯ ಸಾಮೆಯನು ಕೆಲ ಕೆಲರು ನವಣೆಯ ಕಂಬು ಜೋಳವ ಕೆಲರು ಹಾರಕ+ಎಂದು ಕೆಲವರು ನೆಲ್ಲನು + ಅತಿಶಯವ ಕೆಲವರು ನರೆದಲಗನನು ಪತಿಕರಿಸಲು + ಅದ ನೋಡಿದ ನೃಪತಿಯು + ಅದರೊಳು ಹಲವು ಮತವು + ಏಕೆ + ಒಂದನೇ ಪೇಳು + ಎನಲು ಗೌತಮನು.

೨. ದಾಶರಥಿ ಚಿತ್ತೈಸು ನಮ್ಮಯ ದೇಶಕೆ + ಅತಿಶಯ ನರೆದಲಗನೇ ವಾಸಿ + ಉಳ್ಳವನು + ಈತ ಮಿಕ್ಕಿನ ಧಾನ್ಯವು + ಏಕೆ + ಎನಲು ಲೇಸನು + ಆಡಿದೆ ಮುನಿಪ ಗೌತಮ ದೋಷರಹಿತನು ಪಕ್ಷಪಾತವನು + ಈಸು ಪರಿಯಲಿ ಮಾಡುವರೆ ಶಿವ + ಎಂದನು ಆ ವ್ರಿಹಿಗ.

೩. ಎಲ್ಲ ಧರ್ಮದ ಸಾರವನು ನೀವ್ ಬಲ್ಲಿರಿ ಅರಿಯಿರೆ ಎಲ್ಲರನು ನೀವು + ಇಲ್ಲಿ ನುಡಿವ ಉಪೇಕ್ಷೆ + ಉಂಟೇ ಸಾಕು + ಅದಂತಿರಲಿ ನೆಲ್ಲು ನಾನು + ಇರೆ ಗೋದಿ ಮೊದಲಾದ + ಎಲ್ಲ ಧಾನ್ಯಗಳು + ಇರಲು ಇದರಲಿ ಬಲ್ಲಿದನು ನರೆದಲಗನು + ಎಂಬುದು + ಇದು + ಆವ ಮತ + ಎಂದ.

೪. ಏನು + ಎಲವೊ ನರೆದಲಗ ನೀನು ಸಮಾನನೇ ಎನಗೆ + ಇಲ್ಲಿ ನಮ್ಮನು ದಾನವಂತಕ ಬಲ್ಲನು + ಇಬ್ಬರ ಹೆಚ್ಚು ಕುಂದುಗಳ ಜಾನಕೀ ಪತಿ ಸನಿಹದಲಿ ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು + ಎಂದು + ಎನುತ ಖತಿಯಲಿ ಬೈದು ಭಂಗಿಸಿದ.

೫. ಕ್ಷಿತಿಯಮರರ + ಉಪನಯನದಲಿ ಸುವ್ರತ ಸುಭೋಜನ ಪರಮ ಮಂತ್ರಾಕ್ಷತೆಗಳಲಿ ಶುಭ ಶೋಭನದಲಿ + ಆರತಿಗೆ ಹಿರಿಯರಲಿ ಕ್ರತುಗಳ + ಎಡೆಯ + ಒಳಗೆ + ಅರಮನೆಯಲಿ ಪ್ರತಿ ದಿನವು ರಂಜಿಸುತ ದೇವರಿಗೆ + ಅತಿಶಯದ ನೈವೇದ್ಯ ತಾನು + ಇಹೆನು + ಎಂದನು + ಆ ವ್ರಿಹಿಗ.

೬. ಸತ್ಯಹೀನನು ಬಡವರನು ಕಣ್ಣೆತ್ತಿ ನೋಡೆ ಧನಾಢ್ಯರನು ಬೆಂಬತ್ತಿ ನಡೆವ ಅಪೇಕ್ಷೆ ನಿನ್ನದು ಹೇಳಲು + ಏನು + ಅದನು ಹೆತ್ತ ಬಾಣಂತಿಯರು ರೋಗಿಗೆ ಪತ್ಯ ನೀನು + ಇಹೆ ಹೆಣದ ಬಾಯಿಗೆ ತುತ್ತು ನೀನು + ಇಹೆ ನಿನ್ನ ಜನ್ಮ ನಿರರ್ಥಕರವು + ಎಂದ.

NOT TO BE REPUBLISHED ©KTBS

೭. ಮಳೆ + ತೆಗೆದು ಬೆಳೆಯು + ಅಡಗಿ ಕ್ಷಾಮದ ವಿಲಯ ಕಾಲದೊಳ್ + ಅನ್ನ + ಇಲ್ಲದೆ ಅಳಿವ ಪ್ರಾಣಿಗಳ + ಆದರಿಸಿ ಸಲಹುವೆನು ಜಗವು + ಅರಿಯೆ ಎಲವೊ ನೀನು + ಎಲ್ಲಿ + ಇಹೆಯೊ ನಿನ್ನಯ ಬಳಗವದು ತಾನು + ಎಲ್ಲಿ + ಇಹುದು ಈ ಹಲವು ಹುಲು ಧಾನ್ಯಗಳು + ಎನಗೆ ಸರಿದೊರೆಯೆ ಕೇಳು + ಎಂದ.

೮. ಮಸೆದುದು + ಇತ್ತಂಡಕ್ಕೆ ಮತ್ಸರ ಪಿಸುಣ ಬಲರು + ಅತಿ ನಿಷ್ಠುರರು ವಾದಿಸಲು ಕಂಡನು ನೃಪತಿ ಮನದಲಿ ನೋಡಿ ನಸು ನಗುತ ಹಿಸುಣರ್ + ಇವದಿರ ಮತ್ಸರವ ಮಾಣಿಸುವ ಹದನ + ಏನು + ಎನುತ ಯೋಚಿಸಿದ ಸುರ ಮುನಿಪರ ನೋಡೆ ಗೌತಮ ಮುನಿಪನು + ಇಂತು + ಎಂದ.

೯. ಅರಸುಗಳು ನಾವೆಲ್ಲ ಭೂಮೀ ಸುರರು ನೆರೆದಿಹ ದಾನವರು ವಾನನರು ನಮಗೆ + ಈ ನ್ಯಾಯವನು ಪರಿಹರಿಸಲು + ಅಳವಲ್ಲ ಕರೆಸುವೆವು ಹರಿ ಹರ ವಿರಂಚಿ + ಆದ್ಯರನು + ಅಯೋಧ್ಯೆಗೆ ಅವರ ಗುಣವ + ಆಧರಿಸಿ ಪೇಳ್ವರು ನಯದೊಳ್ + ಎಂದನು ರಾಮ ನಸು ನಗುತ.

೧೦. ಪರಮ ಧಾನ್ಯದೊಳ್ + ಇಬ್ಬರೇ ಇವರು + ಇರಲಿ ಸೆರೆಯೊಳಗೆ + ಆರು ತಿಂಗಳು ಹಿರಿದು ಕಿರಿದು + ಎಂಬ + ಇವರ ಪೌರುಷವ + ಅರಿಯಬಹುದು + ಇನ್ನು ಪುರಕೆ ಗಮನಿಸಿ ನಾವು ನಿಮ್ಮನು ಕರೆಸುವೆವು ಕೇಳು + ಎನುತ + ಅಯೋಧ್ಯಾ ಪುರಿಗೆ ಪಯಣವ ಮಾಡ ಹೇಳಿದನು + ಆ + ವಿಭೀಷಣಗೆ.

## ಪದಗಳ ಅರ್ಥ

ಕ್ರತು – ಯಾಗ, ಯಜ್ಞ; ಕ್ಷಿತಿಯಮರರು – ಬ್ರಾಹ್ಮಣರು; ಖತಿ – ಕೋಪ, ದುಃಖ, ಅಳಲು; ನೆರೆದಲೆ – ರಾಗಿ; ನೆಲ್ಲು, – ಭತ್ತ; ಪಕ್ಷಪಾತ – ಭೇದಭಾವ ಪತಿಕರಿಸಲು – ಅಂಗೀಕರಿಸಲು; ಪಿಸುಣ – ಚಾಡಿಕೋರ, ನೀಚ; ಪ್ರತಿಷ್ಠ – ಗರ್ವ; ವಿರಂಚಿ – ಬ್ರಹ್ಮ, ಅಜ; ವ್ರಿಹಿಗ – ಭತ್ತ; ಹದನು – ರೀತಿ, ಕ್ರಮ; ಹಿಸುಣ – ಕುತ್ಸಿತ ಬುದ್ಧಿಯವ;

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ದೇಶಕೆ ಅತಿಶಯವಾದ ಧಾನ್ಯ ಯಾವುದು?

೨. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದೆ?

೩. ದಾಶರಥಿ ಎಂದರೆ ಯಾರು?

NOT TO BE REPUBLISHED © KTBS

೪. ನರೆದಲಗ ಯಾರನ್ನು ಆದರಿಸಿ ಸಲಹುತ್ತದೆ?

೫. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?

೬. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಶ್ರೇಷ್ಠವೆಂದು ಹೇಳಲಾಗಿರುವ ಧಾನ್ಯಗಳಾವುವು?

೨. ಗೌತಮರು ನರೆದಲಗನೆ ಶ್ರೇಷ್ಠವೆನ್ನಲು ವ್ರಿಹಿಯು ಹೇಳಿದ್ದೇನು?

೩. ವ್ರಿಹಿಯನ್ನು ಯಾವ ಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ?

೪. ನರೆದಲಗವು ವ್ರಿಹಿಯನ್ನು ಏನೆಂದು ಹೀಯಾಳಿಸಿತು?

೫. ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು?

**ಇ. ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಶ್ರೀರಾಮನು ನರೆದಲಗ ಹಾಗೂ ವ್ರಿಹಿಯನ್ನು ಸೆರಮನೆಗೆ ಹಾಕಲು ಕಾರಣವೇನು?

೨. ನರೆದಲಗ ಹಾಗೂ ವ್ರಿಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

©KTBS NOT TO BE REPUBLISHED

**ಈ. ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ನಮ್ಮಯ ದೇಶಕತಿಶಯ ನರೆದಲಗ"

೨. "ಕುಲಹೀನ ನೀನು ಪ್ರತಿಷ್ಠ ಸುಡು ಮತಿಹೀನ ನೀನು"

೩. "ವಿಲಯಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳಾಧರಿಸಿ ಸಲಹುವೆ"

೪. "ಇವರಿರಲಿ ಸೆರೆಯೊಳಗಾರು ತಿಂಗಳು"

**ಉ. ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಪುರಂದರದಾಸರು : ಪುರಂದರವಿಠಲ : : ಕನಕದಾಸರು : ____________

೨. ವ್ರಿಹಿ : ಭತ್ತ : : ನರೆದಲಗ : : ____________

೩. ಬಾಣಂತಿಯರಿಗೆ : ಪಥ್ಯ : : ಹೆಣದ ಬಾಯಿಗೆ : ____________

೪. ಕ್ಷಿತಿ : ಭೂಮಿ : : ವಿರಂಚಿ : ____________

೫. ಸೆರೆಯೊಳಗೆ : ಆಗಮಸಂಧಿ : : ತಾನೆಲ್ಲಿ : ____________

**ಊ. ಗುಂಪಿಗೆ ಸೇರದ ಪದಗಳನ್ನು ಆಯ್ದು ಬರೆಯಿರಿ.**

| | | | |
|---|---|---|---|
| ೧. ಹರಿಭಕ್ತಸಾರ | ರಾಮಧಾನ್ಯಚರಿತ್ರೆ | ರಾಮಾಶ್ವಮೇಧಂ | ನಳಚರಿತ್ರೆ |
| ೨. ಕನಕದಾಸರು | ಪುರಂದರದಾಸರು | ವ್ಯಾಸರಾಯರು | ಬಸವಣ್ಣ. |
| ೩. ವ್ರಿಹಿ | ಗೋಧಿ | ನೆಲ್ಲು | ಭತ್ತ |
| ೪. ಗುಣಸಂಧಿ | ಲೋಪಸಂಧಿ | ಆಗಮಸಂಧಿ | ಆದೇಶಸಂಧಿ. |

## ಸೈದ್ಧಾಂತಿಕ ಭಾಷಾಭ್ಯಾಸ

### ಮಾತ್ರಾಗಣ : ಪರಿಚಯಾತ್ಮಕ ವಿವರ

**ಮಾತ್ರೆ** : ಛಂದಶ್ಶಾಸ್ತ್ರದಲ್ಲಿ ಮಾತ್ರೆ, ಎಂದರೆ ಕಾಲವನ್ನು ಅಳೆಯುವ ಮಾನ. ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವೇ **ಒಂದು ಮಾತ್ರಾಕಾಲ**. ಮಾತ್ರೆಗಳಲ್ಲಿ **ಲಘು** ಮತ್ತು **ಗುರು** ಎಂಬ ಎರಡು ವಿಧಗಳಿವೆ. ಲಘುವನ್ನು **'U'** ಎಂತಲೂ ಗುರುವನ್ನು '—' ಎಂತಲೂ ಗುರುತಿಸಲಾಗುವುದು.

ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಲಘು**. ಎರಡು ಅಥವಾ ಎರಡಕ್ಕಿಂತ ಹೆಚ್ಚು ಮಾತ್ರಾ ಕಾಲದಲ್ಲಿ ಉಚ್ಚರಿಸಬಹುದಾದ ಅಕ್ಷರವೇ **ಗುರು**.

**ಮಾತ್ರಾಗಣ** : ಮಾತ್ರೆಗಳ ಆಧಾರದಿಂದ ಗಣವಿಭಾಗ ಮಾಡಲಾಗುವ **ಮಾತ್ರಾಗಣ**ದಲ್ಲಿ **ಮೂರು ಮಾತ್ರೆಯ ಗಣ, ನಾಲ್ಕು ಮಾತ್ರೆಯ ಗಣ ಮತ್ತು ಐದು ಮಾತ್ರೆಯ ಗಣ** ಎಂಬುದಾಗಿ ಮೂರು ವಿಧಗಳಿವೆ.. **ಕಂದ, ಷಟ್ಪದಿ, ರಗಳೆ** ಛಂದಸ್ಸುಗಳು **ಮಾತ್ರಾಗಣ** ಆಧಾರಿತ ಛಂದಸ್ಸುಗಳು.

**ಗುರು ಎನಿಸುವ ಅಕ್ಷರಗಳು :**

| | | | |
|---|---|---|---|
| | | — U | — U U |
| ✦ **ದೀರ್ಘಾಕ್ಷರಗಳು** | = | ಕಾ ಲು | ಆ ಗ ಸ |
| | | — U U | — U U |
| ✦ **ಸಂಯುಕ್ತಾಕ್ಷರದ ಹಿಂದಿನ ಅಕ್ಷರ** | = | ಅ ಕ್ಷ ರ | ಭ ಕ್ಷ ಣೆ |
| | | — U U | — U |
| ✦ **ಅನುಸ್ವಾರ, ವಿಸರ್ಗಗಳಿಂದ ಕೂಡಿರುವ ಅಕ್ಷರ** | = | ಬಂ ದ ನು | ದುಃಖ |
| | | U U— | U U— |
| ✦ **ವ್ಯಂಜನಾಕ್ಷರದ ಹಿಂದಿನ ಅಕ್ಷರ** | = | ಬರುವಳ್ | ಮರಗಳ್ |
| | | — U | — U U |
| ✦ **ಐ, ಔ ಸಹಿತವಾದ ಅಕ್ಷರ** | = | ಗೈ ಮೆ | ಔ ಷ ಧ |

©KTBS NOT TO BE REPUBLISHED

✦ **ಷಟ್ಪದಿಯ ಮೂರು ಮತ್ತು ಆರನೆಯ ಪಾದಗಳ ಕೊನೆಯ ಅಕ್ಷರ** : ಈ ಅಕ್ಷರಗಳು ಒಂದು ಮಾತ್ರಾ ಲಕ್ಷಣ ಕೂಡಿದ್ದರೂ ಹಾಡುವಾಗ ಎರಡು ಮಾತ್ರಾಕಾಲಗಳಲ್ಲಿ ಉಚ್ಚರಿಸಲ್ಪಡುತ್ತವೆ. ಹಾಗಾಗಿ ಈ ಅಕ್ಷರಗಳು **ಗುರು** ಎನಿಸಿಕೊಳ್ಳುವ ಯಾವುದೇ ಲಕ್ಷಣಗಳನ್ನು ಪಡೆಯದಿದ್ದರೂ **ಗುರುವಾಗಿಯೇ** ಪರಿಗಣಿಸಲ್ಪಡುತ್ತವೆ.

## ಕಂದಪದ್ಯ

ಮಾತ್ರಾಗಣ ಆಧಾರಿತ ಛಂದಸ್ಸುಗಳಲ್ಲಿ **ಕಂದ** ಕೂಡಾ ಒಂದು. ಇದು **ನಾಲ್ಕು ಪಾದಗಳಿಂದ** ಕೂಡಿರುತ್ತದೆ. ಕೊಟ್ಟಿರುವ ಪದ್ಯದ ಆಧಾರದಿಂದ ಇದರ ಲಕ್ಷಣಗಳನ್ನು ತಿಳಿದುಕೊಳ್ಳಬಹುದು.

ಳ ಳ ಳ<br>
— — | U — U | — — | = ೧೨<br>
ಕಾ ವೇ | ರಿ ಯಿಂದ | ಮಾ ಗೋ |

ಳ ಳ ಳ ಳ ಳ<br>
— U U | U U — | U — U | — — | U U — | = ೨೦<br>
ದಾ ವ ರಿ | ವ ರ ಮಿ | ರ್ದ ನಾಡ | ದಾ ಕ | ನ್ನ ಡ ದೊಳ್ |

ಳ ಳ ಳ<br>
— U U | U U U U | — U U | = ೧೨<br>
ಭಾ ವಿ ಸಿ | ದ ಜ ನ ಪ | ದಂ ವ ಸು |

ಳ ಳ ಳ ಳ ಳ<br>
— U U | U U — | U U U U | U U U U | — — | = ೨೦<br>
ಧಾ ವ ಳ | ಯ ವಿ ಲೀ | ನ ವಿ ಶ ದ | ವಿ ಷ ಯ ವಿ | ಶೇ ಷಂ |

NOT TO BE REPUBLISHED @KTBS

**ಲಕ್ಷಣ :**

✦ ನಾಲ್ಕು ಪಾದಗಳಿರಬೇಕು.

✦ ಒಂದು ಮತ್ತು ಮೂರನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳಿರಬೇಕು.

✦ ಎರಡು ಮತ್ತು ನಾಲ್ಕನೆಯ ಪಾದಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ತಲಾ ಐದೈದು ಗಣಗಳಿರಬೇಕು.

✦ ಪ್ರತಿ ಪಾದವೂ ಆದಿಪ್ರಾಸದಿಂದ ಕೂಡಿರಬೇಕು.

**ಷಟ್ಪದಿ** : ಆರು ಪಾದಗಳಿಂದ ಕೂಡಿರುವ ಪದ್ಯವೇ **ಷಟ್ಪದಿ**. ಷಟ್ಪದಿಯಲ್ಲಿ **ಶರ, ಕುಸುಮ, ಭೋಗ, ಭಾಮಿನಿ, ವಾರ್ಧಕ, ಪರಿವರ್ಧಿನಿ** ಎಂಬ ಆರು ವಿಧಗಳಿವೆ.

**ಭಾಮಿನಿ ಷಟ್ಪದಿ :**

| ೩ | ೪ | ೩ | ೪ | |
|---|---|---|---|---|
| UUU | UUUU | UUU | UU— | = ೧೪ |
| ಕ್ಷಿತಿಯ | ಮರರುಪ | ನಯನ | ದಲಿಸು | |

| ೩ | ೪ | ೩ | ೪ | |
|---|---|---|---|---|
| UUU | —UU | UUU | — — | = ೧೪ |
| ವ್ರತಸು | ಭೋಜನ | ಪರಮ | ಮಂತ್ರಾ | |

| ೩ | ೪ | ೩ | ೪ | ೩ | ೪ | ಗು | |
|---|---|---|---|---|---|---|---|
| UUU | UUUU | — U | UU — | UUU | UUUU | — | = ೨೩ |
| ಕ್ಷ ತೆಗ | ಳಲಿಶುಭ | ಶೋಭ | ನದಲಾ | ರತಿಗೆ | ಹಿರಿಯರ | ಲಿ | |

| ೩ | ೪ | ೩ | ೪ | |
|---|---|---|---|---|
| UUU | UUUU | UUU | UU— | = ೧೪ |
| ಕ್ರತುಗ | ಳೆಡೆಯೊಳ | ಗರಮ | ನೆಯಲಿ | |

| ೩ | ೪ | ೩ | ೪ | |
|---|---|---|---|---|
| UUU | UU— | UUU | —UU | = ೧೪ |
| ಪ್ರತಿದಿ | ನವುರಂ | ಜಿಸುತ | ದೇವರಿ | |

| ೩ | ೪ | ೩ | ೪ | ೩ | ೪ | ಗು | |
|---|---|---|---|---|---|---|---|
| UUU | UU— | —U | —UU | —U | —UU | — | = ೨೩ |
| ಗತಿಶ | ಯದನ್ನೈ | ವೇದ್ಯ | ತಾನಿಹೆ | ನೆಂದ | ನಾಪ್ರಿಹಿ | ಗ | |

@KTBS NOT TO BE REPUBLISHED

ಈ ಪದ್ಯದಲ್ಲಿ ಆರು ಪಾದಗಳಿವೆ. ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳಲ್ಲಿ ತಲಾ ೧೪ ಮಾತ್ರೆಗಳಿವೆ. ಮೂರು ಮತ್ತು ಆರನೆಯ ಪಾದಗಳಲ್ಲಿ ತಲಾ ೨೧ ಮಾತ್ರೆ ಮತ್ತು ಒಂದು ಗುರು ಇದೆ. ಮಾತ್ರಾಸಂಖ್ಯೆಯ ಆಧಾರದಿಂದ ನೋಡಿದಾಗ ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಒಂದಕ್ಕೊಂದು ಸಮ. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮ.

ಒಂದು, ಎರಡು ಮತ್ತು ಮೂರನೆಯ ಪಾದಗಳನ್ನು **ಪೂರ್ವಾರ್ಧ**ವೆಂತಲೂ ನಾಲ್ಕು, ಐದು ಮತ್ತು ಆರನೆಯ ಪಾದಗಳನ್ನು **ಉತ್ತರಾರ್ಧ**ವೆಂತಲೂ ಕರೆಯಬಹುದು. ಪ್ರತಿಪಾದಗಳ ಮಾತ್ರೆಗಳನ್ನು ಮೂರರ ಅನಂತರ ನಾಲ್ಕು ಮಾತ್ರೆಗಳ ಗಣಗಳಂತೆ ವಿಭಾಗಿಸಲಾಗಿದೆ. ಮೂರು ಮತ್ತು ಆರನೆಯ ಪಾದದ ಕೊನೆಯ ಅಕ್ಷರವನ್ನು ಗಣಕ್ಕೆ ಗಣಿಸಲಾಗಿಲ್ಲ. ಆದರೂ ಅದಕ್ಕೆ ಗಣದ ಸ್ಥಾನವಿದೆ.

**ಲಕ್ಷಣಗಳು :**

- ಆರು ಪಾದಗಳಿರಬೇಕು.
- ಒಂದು, ಎರಡು, ನಾಲ್ಕು ಮತ್ತು ಐದನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ತಲಾ ಎರಡೆರಡು ಗಣಗಳಿರಬೇಕು. ಮೂರು ಮತ್ತು ಆರನೆಯ ಪಾದಗಳು ಪರಸ್ಪರ ಸಮವಾಗಿದ್ದು ಮೂರು ಮಾತ್ರೆಗಳ ಅನಂತರ ನಾಲ್ಕು ಮಾತ್ರೆಗಳ ತಲಾ ಮೂರು ಮೂರು ಗಣಗಳು ಮತ್ತು ಒಂದು ಗುರು ಇರಬೇಕು.
- ಪ್ರತಿಪಾದವೂ ಆದಿಪ್ರಾಸದಿಂದ ಕೂಡಿರಬೇಕು.

## ಅಭ್ಯಾಸ ಚಟುವಟಿಕೆ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಮಾತ್ರೆ ಎಂದರೇನು? ಉದಾಹರಣೆ ಸಹಿತ ವಿವರಿಸಿ.

೨. ಮಾತ್ರಾಗಣ ಎಂದರೇನು? ಅದರ ವಿಧಗಳಾವುವು? – ತಿಳಿಸಿ

೩. ಕಂದಪದ್ಯದ ಲಕ್ಷಣಗಳೇನು?

೪. ಷಟ್ಪದಿ ಎಂದರೇನು? ಭಾಮಿನಿ ಷಟ್ಪದಿಯ ಲಕ್ಷಣಗಳೇನು?

ಆ. **'ರಾಮಧಾನ್ಯ ಚರಿತೆ'** ಪದ್ಯದ ಮೊದಲನೆಯ (ಕೆಲರು __ __ __ __ __ __ಗೌತಮನು) ಮೂರು ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ.

**ಇ. ಕೊಟ್ಟಿರುವ ಪದ್ಯಭಾಗವನ್ನು ಕಂಠಪಾಠ ಮಾಡಿ.**

ಮಳೆದೆಗೆದು ಬೆಳೆಯಡಗಿ ಕ್ಷಾಮದ

______________________________

______________________________

______________________________

______________________________

ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ

## ಪೂರಕ ಓದು

- ಕನಕದಾಸರು ರಚಿಸಿರುವ 'ರಾಮಧಾನ್ಯ ಚರಿತೆ' ಕೃತಿಯನ್ನು ಓದಿರಿ.

© KTBS NOT TO BE REPUBLISHED

# ಪಠ್ಯ ಪೂರಕ ಅಧ್ಯಯನ

## ೪. ಕಟ್ಟುವೆವು ನಾವು

– ಎಂ. ಗೋಪಾಲಕೃಷ್ಣ ಅಡಿಗ

ಕಟ್ಟುವೆವು ನಾವು ಹೊಸ ನಾಡೊಂದನು,
– ರಸದ ಬೀಡೊಂದನು.
ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು !




ನಮ್ಮೆದೆಯ ಕನಸುಗಳೇ ಕಾಮಧೇನು
ಆದಾವು, ಕರೆದಾವು ವಾಂಛಿತವನು;
ಕರೆವ ಕೈಗಿಹುದದೋ ಕಣಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ !

ಜಾತಿಮತಭೇದಗಳ ಕಂದಕವು ಸುತ್ತಲೂ,
ದುರ್ಭೇದ್ಯವೆನೆ ಕೋಟೆಕೊತ್ತಲಗಳು;
ರೂಢಿರಾಕ್ಷಸನರಸುಗೈಯುವನು, ತೋಳ್ತಟ್ಟಿ
ತೊಡೆತಟ್ಟಿ ಕರೆಯುವನು ಸಂಗ್ರಾಮಕೆ !

ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,
ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು
ಆದಾವು; ಅಂಜುವೆದೆ ನಮ್ಮದಲ್ಲ;
ಸೋಲುಬಗೆ ವೀರನಿಗೆ ಸಲ್ಲ, ಹೊಲ್ಲ !

©KTBS NOT TO BE REPUBLISHED

ಎಡರುಗಳ ಕಡಲುಗಳನೀಸಿ ಬರುವೆವು, ಘೋರ
ನೈರಾಶ್ಯದಗ್ನಿಮುಖದಲ್ಲು ಕೂಡ
ಹೊಕ್ಕು ಹೊರಡುವೆವೆಲ್ಲ ತೊಡುಕುಗಳ ಒಡಕುಗಳ
ಬಿಡಿಸಿ ಇಡಿಗೊಳಿಸಿ ಕಟ್ಟುವೆವು ನಾಡ !

ಉತ್ಸಾಹ ಉದ್ವೇಗ ಉದ್ರೇಕಗಳ ವೀರ
ಯುವಜನದ ನಾಡ ಗುಡಿಯು;
ಅದರ ಹಾರಾಟಕ್ಕೆ ಬಾನೆ ಗಡಿಯು;
ಬರಲು ಬಿಡೆವೆಂದಿಗೂ ಅದಕೆ ತಡೆಯು !
ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ,
ಕೆಡೆನುಡಿವ ಕೆಡೆಬಗೆವ ಕೆಡಕು ಜನರೇ ಬನ್ನಿ !
ಕೊಟ್ಟೆವಿದೊ ವೀಳೆಯವನು;
ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು,
– ಸುಖದ ಬೀಡೊಂದನು.

NOT TO BE REPUBLISHED
@KTBS



## ಕೃತಿಕಾರರ ಪರಿಚಯ

ಕನ್ನಡ ನಾಡಿನ ಪ್ರಮುಖ ನವ್ಯ ಕವಿಗಳಲ್ಲಿ ಒಬ್ಬರೆನಿಸಿದವರು **ಎಂ. ಗೋಪಾಲಕೃಷ್ಣ ಅಡಿಗರು.** ಇವರು **ಕುಂದಾಪುರ ತಾಲ್ಲೂಕು ಕೆರ್ಗಾಲು ಗ್ರಾಮದ ಮೊಗೇರಿ** ಎಂಬಲ್ಲಿ **೧೮.೦೨.೧೯೧೮** ರಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಿ.ಎ. ಆನರ್ಸ್ ಪದವಿಯನ್ನು ಹಾಗೂ ನಾಗಪುರ ವಿಶ್ವವಿದ್ಯಾಲಯಲ್ಲಿ ಇಂಗ್ಲಿಷ್ ಎಂ.ಎ. ಪದವಿ ಪಡೆದು ಹೈಸ್ಕೂಲು ಅಧ್ಯಾಪಕರಾಗಿ, ಇಂಗ್ಲಿಷ್ ಉಪನ್ಯಾಸಕರಾಗಿ, ಪ್ರೊಫೆಸರ್ ಮತ್ತು ಪ್ರಿನ್ಸಿಪಲ್‌ರಾಗಿ ಕಾರ್ಯನಿರ್ವಸಿಹಿದರು. ಬೆಂಗಳೂರಿನಲ್ಲಿ ನಿವೃತ್ತ ಜೀವನ ಕಳೆದ ಅಡಿಗರು ೦೪.೧೧.೧೯೯೨ರಲ್ಲಿ ನಿಧನರಾದರು. **ಭಾವತರಂಗ, ಕಟ್ಟುವೆವು ನಾವು, ನಡೆದುಬಂದ ದಾರಿ, ಚಂಡೆಮದ್ದಳೆ, ಭೂಮಿಗೀತ, ಆಕಾಶದೀಪ, ಅನಾಥೆ, ಹುಲಿರಾಯ ಮತ್ತು ಇತರ ಕಥೆಗಳು** ಮೊದಲಾದವು ಅಡಿಗರ ಮುಖ್ಯ ಕೃತಿಗಳು. ಇವರಿಗೆ **ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಬೀರ್ ಸಮ್ಮಾನ್ ಪ್ರಶಸ್ತಿ, ೧೯೯೩ ರಲ್ಲಿ ಮರಣೋತ್ತರ ಪಂಪ ಪ್ರಶಸ್ತಿ**ಗಳು ಸಂದಿವೆ.

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಯಾವುದು ಬತ್ತಿಹೋಗುವ ಮುನ್ನ ಹೊಸನಾಡೊಂದನ್ನು ಕಟ್ಟಬೇಕು?

೨. ನಮ್ಮೆದೆಯ ಕಾಮಧೇನು ಯಾವುದು?

೩. ನಮ್ಮ ಸುತ್ತಲೂ ಇರುವ ಕಂದಕಗಳಾವುವು?

೪. ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು?

೫. ಕವಿ ಯಾರಿಗೆ ವೀಳೆಯವನು ಕೊಡುವೆನೆಂದಿದ್ದಾರೆ?

೬. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು?

✦ ✦ ✦ ✦ ✦

@KTBS NOT TO BE REPUBLISHED

# ೫. ಆಟೋರಿಕ್ಷಾದ ರಸಪ್ರಸಂಗಗಳು

**– ಎಚ್. ನರಸಿಂಹಯ್ಯ**

ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದೇ ಒಂದು ಪ್ರಯಾಸದ ಕೆಲಸ. ಕಾರ್ ಇರುವ ಕೆಲವೇ ಮಂದಿಗೆ, ಸ್ಕೂಟರಿರುವ ಸಾಕಷ್ಟು ಮಂದಿಗೆ ಇದೇನು ಅಂತಹ ಸಮಸ್ಯೆ ಅಲ್ಲ. ಆದರೆ ನನ್ನಂತಹವನಿಗೆ ಇದೊಂದು ತಾಪತ್ರಯದ ಕೆಲಸ. ಸಮೀಪದ ಸ್ಥಳಗಳಿಗೆ ಹೋಗುವಾಗ ನಾನು ಸಾಮಾನ್ಯವಾಗಿ ನಡೆದೇ ಹೋಗುತ್ತೇನೆ. ಸಾಕಷ್ಟು ಕಾಲಾವಕಾಶ ಇಲ್ಲದೇ ಹೋದರೆ ನನಗಿರುವ ಮಾರ್ಗಗಳು ಎರಡು. ಒಂದು ಬಸ್ ಅಥವಾ ಆಟೋರಿಕ್ಷಾ. ಬಸ್‌ಗಳ ಟೈಮ್ ಅನಿಶ್ಚಿತ ಹಾಗೂ ತುಂಬಾ ಕಾಯಬೇಕಾಗಿದ್ದು ಆ ನೂಕುನುಗ್ಗಲಲ್ಲಿ ಬಸ್ ಸಂಚಾರ ಬಹಳ ದುಸ್ತರ.




NOT TO BE REPUBLISHED

ಇನ್ನು ಉಳಿದಿರುವುದು ಒಂದೇ ಮಾರ್ಗ, ಆಟೋರಿಕ್ಷಾ. ನನಗೆ ಆಟೋರಿಕ್ಷಾ ಕಂಡರೆ ತುಂಬಾ ಭಯ. ಅವು ಪಾದರಸದಂತೆ ಚಲಿಸುತ್ತವೆ. ಆದರೆ ಒಂದು ವ್ಯತ್ಯಾಸ. ಪಾದರಸ ತಗ್ಗಿದ್ದ ಕಡೆ ಹೋಗುತ್ತೆ, ಆಟೋರಿಕ್ಷಾಕ್ಕೆ ಅಂತಹ ಸೀಮಿತ ಅಭ್ಯಾಸ, ಉದ್ದೇಶವಿಲ್ಲ. ತಗ್ಗು ಉಬ್ಬುಗಳ ಭೇದಭಾವವಿಲ್ಲದೆ, ಲಂಗುಲಗಾಮಿಲ್ಲದ ಕುದುರೆಯಂತೆ ಧಾವಿಸುತ್ತದೆ.

ನನಗೆ ಜೀವದ ಮೇಲೆ ತುಂಬಾ ಆಸೆ. ಬಹಳ ವರ್ಷ ಆರೋಗ್ಯವಾಗಿ ಬದುಕಬೇಕೆಂಬ ಹಂಬಲ ಚಪಲ. ಆಟೋರಿಕ್ಷಾ ಪ್ರಯಾಣದಿಂದ ಎರಡು ವಿಧವಾದ ಅಪಘಾತಗಳಾಗಬಹುದು. ಮೊದಲನೆಯದಾಗಿ ಕೈಕಾಲು ಮುರಿಯಬಹುದು. ಎರಡನೆಯದಾಗಿ ಅಲ್ಲಿಯೇ ಕೊನೆಯ ಉಸಿರೆಳೆಯಬಹುದು. ಬಹು ವರ್ಷ ಬದುಕಬೇಕೆಂಬ ಉತ್ಕಟ ಆಸೆ ಇದ್ದರೂ, ಕೈಕಾಲು ಮುರಿದುಕೊಂಡು ಮೂಳೆ ವೈದ್ಯರ ಕೈಗೆ ಸಿಕ್ಕಿ ದೇಹದಲ್ಲಿ ನಟ್ಟೂ, ಬೋಲ್ಟೂ ಹಾಕಿಸಿಕೊಂಡು

ಬದುಕುವುದಕ್ಕಿಂತ ಅಲ್ಲಿಯೇ ಭಗವಂತನ ಪಾದಾರವಿಂದವನ್ನು ಸೇರುವುದೇ ಲೇಸು ಎಂದು ನನ್ನ ಅಭಿಪ್ರಾಯ. ಇದೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಅಪಘಾತಗಳಿಂದ ಪಾರಾಗಲು ನನಗೆ ತೋಚಿದ ಎಲ್ಲಾ ಮುಂಜಾಗ್ರತೆ ಕ್ರಮಗಳನ್ನೂ ತೆಗೆದುಕೊಳ್ಳುತ್ತೇನೆ. ಆಟೋರಿಕ್ಷಾ ಪ್ರಯಾಣ ನನಗೆ ವಿಧವಿಧವಾದ ಅನುಭವಗಳನ್ನು ತಂದುಕೊಡುತ್ತದೆ.

ಆಟೋರಿಕ್ಷಾ ಹತ್ತುವುದಕ್ಕಿಂತ ಮುಂಚೆ "ಸ್ವಲ್ಪ ನಿಧಾನವಾಗಿ ಓಡಿಸಪ್ಪ, ಇನ್ನೂ ೫೦ ಪೈಸೆ ಜಾಸ್ತಿ ಕೊಡುತ್ತೇನೆ. ನನಗೆ ವಯಸ್ಸಾಗಿದೆ, ಎತ್ತಿಹಾಕುವುದನ್ನು ತಡೆದುಕೊಳ್ಳಲು ಆಗುವುದಿಲ್ಲ" ಅಂತ ಒಮ್ಮೆ ಅಂದೆ. "ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ. ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು. ಹತ್ತುವುದಕ್ಕಿಂತ ಮುಂಚೇನೆ ಅಪಶಕುನ" ಎಂದು ಸಿಡುಕಿ ಗಾಡಿ ಸ್ಟಾರ್ಟ್ ಮಾಡಿದ. ಇನ್ನೊಂದು ಸಲ ಇನ್ನೊಬ್ಬ ಚಾಲಕ "ಸ್ವಾಮಿ ನಿಶ್ಚಿಂತೆಯಾಗಿ ಕುಳಿತುಕೊಳ್ಳಿ, ಏನು ಭಯಪಡಬೇಡಿ. ಆಗೋದನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ. ಎಲ್ಲಾ ಹಣೇಬರಹ. ಹೋಗಬೇಕೂಂತ ಇದ್ದರೆ ಎಷ್ಟೇ ನಿಧಾನವಾಗಿ ಓಡಿಸಿದರೂ ಅನಾಹುತ ಆಗೇ ಆಗುತ್ತದೆ. ಮನೆಯಲ್ಲಿ ಮಲಗಿದ್ದಾಗ ಆಯುಸ್ಸು ಮುಗಿದರೆ ಹಾಗೇ ಹೋಗುತ್ತದೆ." ಎಂದು ನಿರರ್ಗಳವಾಗಿ ಈ ಧರ್ಮಭೂಮಿಯ ಸಂಜಾತರಲ್ಲಿ ರಕ್ತಗತವಾಗಿರುವ ಕರ್ಮಸಿದ್ಧಾಂತವನ್ನು ಬೋಧಿಸಲು ಮೊದಲು ಮಾಡಿದ. ಅಪಘಾತಕ್ಕೆ ನಾವಾಗಲೀ, ವೇಗವಾಗಲೀ ಕಾರಣವಲ್ಲ. ಇದೆಲ್ಲಾ ವಿಧಿಲಿಖಿತ ಎಂಬ ಅಪಾಯ ಸಿದ್ಧಾಂತವನ್ನು ಕೇಳಿ ನನಗೆ ಇನ್ನೂ ಭಯವಾಯಿತು. ಈ ವೇದಾಂತಿಯ ಹಿಡಿತದಿಂದ ಕ್ಷೇಮವಾಗಿ ಪಾರಾದರೆ ಪುನರ್ಜನ್ಮ ಬಂದ ಹಾಗೆ ಎಂದುಕೊಂಡು ಇನ್ನು ಹೆಚ್ಚು ಮಾತಾಡದೆ ಜೀವವನ್ನು ಕೈಲಿ ಹಿಡಿದುಕೊಂಡು ಕುಳಿತುಕೊಂಡೆ.

ಮತ್ತೊಬ್ಬ ಆಟೋರಿಕ್ಷಾ ಚಾಲಕ "ಅಯ್ಯೋ! ಕುಳಿತುಕೊಳ್ಳಿ ಸ್ವಾಮಿ. ನಿಮಗೆ ಒಬ್ಬರಿಗೇನೆ ಜೀವದ ಮೇಲೆ ಆಸೆ ಇದೆ ಎಂದು ತಿಳಿದುಕೊಳ್ಳಬೇಡಿ. ನಮಗೂ ಇದೆ. ನಮಗೂ ಹೆಂಡತಿ ಮಕ್ಕಳು ಇದ್ದಾರೆ" ಎಂದು ಸಮಾಧಾನಪಡಿಸಿದ. "ನನಗೆ ಯಾವ ಹೆಂಡತಿ ಮಕ್ಕಳೂ ಇಲ್ಲಪ್ಪ. ನಿನಗೆ ಇದ್ದಾರೆ ಅಂತಲೇ ಅವರ ಯೋಗಕ್ಷೇಮಕ್ಕಾಗಿಯೇ ನಾನು ನಿನಗೆ ಎಚ್ಚರಿಕೆ ಕೊಟ್ಟೆ" ಎಂದು ಹೇಳಿದೆ.

ಇನ್ನೊಂದು ಸಲ ಒಬ್ಬ ಆಟೋ ಚಾಲಕ ಕೇಳಿದ : "ಏನು ಸ್ವಾಮಿ, ಈ ವೇಗಕ್ಕೇನೇ ಭಯಪಡುತ್ತೀರಿ. ನೀವು ಅಮೆರಿಕಾಕ್ಕೆಲ್ಲಾ ಹೋಗಿದ್ದಿರಿ ಅಂತ ಕೇಳಿದ್ದೇನೆ, ವಿಮಾನದಲ್ಲಿ ಹೋಗುವಾಗ ನಿಮಗೆ ಭಯವಾಗಲಿಲ್ಲವೇ" ಎಂದು ಪ್ರಶ್ನಿಸಿದ. "ಇಲ್ಲಪ್ಪ, ನನಗೇನೂ ಅಲ್ಲಿ ಭಯವಾಗುವುದಿಲ್ಲ. ಯಾಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರಲಿಲ್ಲ. ಜೊತೆಗೆ ವಿಮಾನವನ್ನು ಓವರ್‌ಟೇಕ್ ಮಾಡಿದ ಪ್ರಸಂಗವೂ ಇಲ್ಲ" ಅಂದೆ. "ಕರೆಕ್ಟ್ ಸಾರ್ ನೀವು ಹೇಳಿದ್ದು" ಎಂದು ಒಪ್ಪಿದ. ಇನ್ನೊಂದು ಸಲ ಇನ್ನೊಬ್ಬ "ಸಾರ್, ನೀವು ಆ ಶಿವ

@KTBS NOT TO BE REPUBLISHED

ಬಾಲಯೋಗಿಗೆ ಸರಿಯಾದ ಸವಾಲ್ ಹಾಕಿದಿರಿ. ಆತನ ಪ್ರಾರ್ಥನೆಯಿಂದ ಬರೋ ಮಳೆಯೂ ತಪ್ಪಿಹೋಯಿತು. ನೀವು ಹಿಂದೆ ಆ ಸಾಯಿಬಾಬಾಗೂ ಹೀಗೆ ಬುದ್ಧಿ ಕಲಿಸಿದಿರಿ." ಎಂದು ನಮ್ಮ ದೇಶದ ಯೋಗಿ, ಬಾಬಾಗಳನ್ನು ಸಾಕಷ್ಟು ಕಠಿಣ ಶಬ್ದಗಳಲ್ಲಿ ವರ್ಣಿಸಿದ.

ಒಂದು ಸಲ ವಿಧಾನಸೌಧದ ಬಳಿ ಆಟೋಗಾಗಿ ಪರದಾಡುತ್ತಿದ್ದೆ. ದೂರದಲ್ಲಿ ಹೋಗುತ್ತಿದ್ದ ಒಬ್ಬ ಆಟೋಚಾಲಕರು ನಾನಿದ್ದ ಕಡೆ ಬಂದರು. "ಏನ್‌ಸಾರ್, ನೀವು ನರಸಿಂಹಯ್ಯನವರಲ್ಲವೆ? ಆಟೋ ಬೇಕೆ? ಎಲ್ಲಿಗೆ ಹೋಗಬೇಕು?" ಎಂದು ತುಂಬಾ ವಿಶ್ವಾಸದಿಂದ ಕೇಳಿದರು. ನನಗಂತೂ ಪರಮಾಶ್ಚರ್ಯವಾಯಿತು. ಹಿಂದಿನ ಕಹಿ ಅನುಭವಗಳಿಗಿಂತ ತೀರ ಭಿನ್ನವಾದ ಅನುಭವ. "ಬಸವನಗುಡಿ ನ್ಯಾಷನಲ್ ಕಾಲೇಜಿಗೆ ಹೋಗಬೇಕಪ್ಪಾ" ಎಂದೆ. "ಕುಳಿತುಕೊಳ್ಳಿ" ಅಂದರು. "ಏನ್ ಸಾರ್, ನೀವು ವೈಸ್ ಚಾನ್ಸಲರ್ ಆಗಿದ್ದೀರಿ, ಎಂ.ಎಲ್.ಸಿ. ಆಗಿದ್ದೀರಿ, ಒಂದು ಕಾರ್ ಇಟ್ಟುಕೊಳ್ಳೋದಕ್ಕೆ ಆಗಲಿಲ್ಲವೇ? ಈ ವಯಸ್ಸಿನಲ್ಲಿ ಈ ಬಿಸಿಲಿನಲ್ಲಿ ಆಟೋ ಹುಡುಕುತ್ತಿದ್ದೀರಿ. ಯಾರು ಯಾರೋ ಕಾರ್ ಇಟ್ಟುಕೊಂಡಿದ್ದಾರೆ" ಎಂದು ತನ್ನ ಆಗ್ರಹ ಅನುಕಂಪವನ್ನು ವ್ಯಕ್ತಪಡಿಸಿದರು. "ನನಗೆ ಅವಶ್ಯಕತೆಯೂ ಇಲ್ಲ, ನನ್ನಲ್ಲಿ ದುಡ್ಡೂ ಇಲ್ಲಪ್ಪ" ಅಂದೆ. "ಇದು ಅಯೋಗ್ಯರಿಗೆ ಕಾಲಾ ಸಾರ್" ಎಂಬುದಾಗಿ ಹೇಳಿ ಅದೇ ಧಾಟಿಯಲ್ಲಿಯೇ ಮುಂದುವರೆದು ಸಾರ್ವಜನಿಕ ಕ್ಷೇತ್ರದ ಆಯಕಟ್ಟಿನಲ್ಲಿ ಕುಳಿತಿರುವ ಎಲ್ಲಾ 'ಸೇವಕ'ರನ್ನೂ ವಾಚಾಮಗೋಚರವಾಗಿ ಬೈದುಕೊಂಡು ಬಂದರು.

ಒಂದು ಸಂಜೆ ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಒಂದು ಕಾರ್ಯಕ್ರಮವಿತ್ತು. ಅದು ಮುಗಿಯುವುದು ರಾತ್ರಿ ೧೦ ಘಂಟೆಯಾಯಿತು. ಆಟೋಗಾಗಿ ಕಾಲೇಜಿನ ಹತ್ತಿರ ಅಲ್ಲಿಯ ಕೆಲವು ಉಪಾಧ್ಯಾಯರೊಂದಿಗೆ ಕಾದು ನಿಂತಿದ್ದೆ. "ಇಷ್ಟು ಹೊತ್ತಿನಲ್ಲಿ ಹಾಸ್ಟೆಲ್‌ನಲ್ಲಿ ಊಟ ಇರುವುದಿಲ್ಲ; ಆದುದರಿಂದ ನಮ್ಮ ಮನೆಗೆ ಬಂದು ಊಟಮಾಡಿಕೊಂಡು ಹೋಗಿ" ಎಂದು ಒಬ್ಬಿಬ್ಬ ಉಪಾಧ್ಯಾಯರು ಒತ್ತಾಯಪಡಿಸುತ್ತಿದ್ದರು. "ಪರವಾಗಿಲ್ಲ, ಒಂದು ಹೊತ್ತು ಊಟ ಇಲ್ಲದೇ ಇದ್ದರೆ ಚಿಂತೆ ಇಲ್ಲ. ತುಂಬಾ ಹೊತ್ತಾಗಿದೆ" ಎಂದು ಹೇಳಿ ಅಲ್ಲಿಂದ ಹೊರಟೆ. ಆಟೋ ಚಾಲಕರು ಸ್ವಲ್ಪ ವಯಸ್ಸಾದವರು. ಇದೆನ್ನೆಲ್ಲಾ ಸಾವಧಾನವಾಗಿ ಕೇಳುತ್ತಿದ್ದರು. 'ಯಾಕೆ ಸಾರ್, ನಿಮಗೆ ಮನೆ ಇಲ್ಲವೇ? ಊಟ ಇಲ್ಲದೇ ಇದ್ದರೂ ಪರವಾಗಿಲ್ಲ ಅಂತ ಹೇಳುತ್ತಿದ್ದೀರಿ" ಎಂದು ಕೇಳಿದರು. "ಇಲ್ಲಪ್ಪ, ನನಗೆ ಮನೆ-ಗಿನೆ ಇಲ್ಲ, ನ್ಯಾಷನಲ್ ಕಾಲೇಜ್ ಹಾಸ್ಟೆಲಿನಲ್ಲಿದ್ದೇನೆ" ಅಂದೆ. "ಇಷ್ಟು ಹೊತ್ತಿನಲ್ಲಿ ಉಪವಾಸ ಮಲಗಿಕೊಳ್ಳಬಾರದು ಸಾರ್. ವಿಶ್ವೇಶ್ವರಪುರದಲ್ಲಿರುವ ಸಜ್ಜನರಾವ್ ಸರ್ಕಲ್‌ಗೆ ಹೋಗೋಣ ಬನ್ನಿ. ಅಲ್ಲಿ ಇಡ್ಲಿ ಮಾರುತ್ತಾರೆ. ನೀವು ಇಡ್ಲಿ ತಿನ್ನುವ ತನಕ ಕಾಯುತ್ತೇನೆ" ಎಂದು ತುಂಬಾ ಆತ್ಮೀಯವಾಗಿ ವಿನಂತಿಸಿಕೊಂಡ. "ತುಂಬಾ ಥ್ಯಾಂಕ್ಸ್, ನಿಮ್ಮಂತಹವರು ಬಹಳ ಅಪರೂಪ. ಆಟೋದವರಿಗೆ ಮಾನವೀಯತೆ ಇಲ್ಲ ಎಂದು ಹೇಳುತ್ತಾರೆ. ನೀವು ಅದಕ್ಕೆ ಅಪವಾದ" ಎಂದು ವಂದಿಸಿದೆ.

NOT TO BE REPUBLISHED @KTBS



## ಕೃತಿಕಾರರ ಪರಿಚಯ

ಡಾ|| ಎಚ್. ಎನ್. ಎಂದೇ ಜನಪ್ರಿಯರಾದ **ಹೊಸೂರು ನರಸಿಂಹಯ್ಯನವರು ಜೂನ್ ೬-೧೯೨೦ ರಂದು ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ, ಹೊಸೂರು ಗ್ರಾಮ**ದಲ್ಲಿ ಒಂದು ಬಡ ಹಿಂದುಳಿದ ಕುಟುಂಬದಲ್ಲಿ ಜನಿಸಿದರು. ತಂದೆ ಹನುಮಂತಪ್ಪ ತಾಯಿ ವೆಂಕಟಮ್ಮ. ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಹೊಸೂರಿನಲ್ಲಿ ಮುಗಿಸಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಬಿ.ಎಸ್ಸಿ. ಮತ್ತು ಎಂ.ಎಸ್ಸಿ. ಪದವಿಗಳಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಬಸವನಗುಡಿ ಕಾಲೇಜಿನಲ್ಲಿ ಭೌತಶಾಸ್ತ್ರ ಅಧ್ಯಾಪಕರಾಗಿ ಹಾಗೂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬೆಂಗಳೂರಿನ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದರು. ಇವರು **'ಪದ್ಮಭೂಷಣ'** ಪ್ರಶಸ್ತಿ ಪಡೆದಿದ್ದಾರೆ. ಅನೇಕ ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ಮತ್ತು **'ತೆರೆದ ಮನ'** ಮತ್ತು **'ಹೋರಾಟದ ಹಾದಿ'** ಇವರ ಕೃತಿಗಳು.

@KTBS NOT TO BE REPUBLISHED

## ಅಭ್ಯಾಸ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು?

೨. ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು?

೩. ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ ಏನೆಂದು ಹೇಳಿದ?

೪. ಲೇಖಕರಿಗೆ ವಿಮಾನ ಯಾನದ ಬಗ್ಗೆ ಭಯವಿಲ್ಲವೇಕೆ?

೫. ಪ್ರಾರ್ಥನೆಯಿಂದ ಮಳೆಬರಿಸುವುದಾಗಿ ಹೇಳಿದ್ದವನಾರು?

೬. ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನರಿತ ಪ್ರಸಂಗದ ಬಗ್ಗೆ ತಿಳಿಸಿ.

✦ ✦ ✦ ✦ ✦

# ೬. ಸೀಮೆ

**– ಡಾ. ಚಂದ್ರಶೇಖರ ಕಂಬಾರ**

**ಪ್ರವೇಶ :** ಪರಿಸರದ ಜೀವನಾಡಿ ಮರಗಳಾಗಿವೆ. ಅತಿಯಾಸೆ ಸ್ವಾರ್ಥಗಳಿಂದ ಮನುಷ್ಯ ಮರಗಳನ್ನು ಕಡಿಯುತ್ತಿರುವುದು ವಿಪರ್ಯಾಸ. 'ಹಸಿರೇ ಉಸಿರು' ಎನ್ನುವುದು ತಿಳಿದಿದ್ದರೂ ಸಕಲ ಜೀವಿಗಳಿಗೆ ಅಗತ್ಯವಾದ ಮರಗಳನ್ನು ಅವಿವೇಕದಿಂದ ಮನುಷ್ಯ ಕಡಿಯುತ್ತಾ ಆತ್ಮಹತ್ಯೆಯ ಹಾದಿಯ ಸಾಗುತ್ತಿರುವುದನ್ನು ಈ ಜಾನಪದ ಕಥೆ ಮಾರ್ಮಿಕವಾಗಿ ನಿರೂಪಿಸುತ್ತದೆ.

ನಮ್ಮೂರು ಶಿವಾಪುರದ ಅಂಚಿನಲ್ಲಿ, ಮರಡಿ ಸುರುವಾಗುವಲ್ಲಿ ವಿಚಿತ್ರವಾದ ಒಬ್ಬ ಮುದುಕ ಕೂತಿರುತ್ತಾನೆ. ಅವನು ಯಾವಾಗಲೂ ತಲೆಯ ಮ್ಯಾಲೆ ಕೈಹೊತ್ತುಕೊಂಡು ಇನ್ನೇನು ಆಕಾಶ ತನ್ನ ತಲೆಮೇಲೇ ಹರಿದು ಬೀಳುತ್ತದೆ ಎಂಬಂತೆ ಭೀತನಾಗಿ ಕೂತಿರುವುದೇ ಅವನ ವಿಶೇಷ. ನಾವು ಯಾರಾದರೂ ಆ ಕಡೆ ಸುಳಿದರೆ "ಎಷ್ಟು ನಿರಾತಂಕವಾಗಿ ಅಲೆದಾಡುತ್ತೀರೋ! ಆಕಾಶ ಹರಿದು ಬೀಳುವ ವಿಚಾರ ನಿಮಗೆ ತಿಳಿಯದೆ?" ಎಂಬಂತೆ ಕ್ರೂರವಾಗಿ ನೋಡುತ್ತಾನೆ. ನಾವು ಅವನನ್ನು ನಿರ್ಲಕ್ಷಿಸಿ ನಡೆದರೆ ತಲೆಯ ಮೇಲಿನ ಕೈ ತೆಗೆದು ಹಣೆ ಹಣೆ ಗಿಟ್ಟಿಸಿಕೊಂಡು ಮತ್ತೆ ಅದೇ ಜಾಗದಲ್ಲಿ ಅಂದರೆ ತಲೆಯ ಮ್ಯಾಲೇ ಇಟ್ಟುಕೊಳ್ಳುತ್ತಾನೆ. ಈಗೀಗ ಕೋಪದಲ್ಲಿ ಜುಪ್ಪರಿ ಕಿತ್ತಿಕೊಳ್ಳೋದೂ ಸುರುವಾಗಿದೆ. ಒಂದು ದಿನ ನಿಮ್ಮಂಥವನೊಬ್ಬ "ಯಾಕೆ ಹೀಗೆ ಮಾಡುತ್ತಿ?" ಅಂತ ಸಹಾನುಭೂತಿಯಿಂದ ಕೇಳಿದಾಗ ಆತ ಹೇಳಿದ ಕತೆ ಇದು:

ಇದು ಒಂದಾನೊಂದು ಕಾಲದಲ್ಲಿ ನಡೆದ ಕತೆಯಲ್ಲಪ್ಪ. ನಿನ್ನೆ ಮೊನ್ನೆ ನಡೆದ ಕತೆ. ಕತೆ ಅಂದ ಮೇಲೆ ಅದು ಒಂದಾನೊಂದು ಕಾಲದಲ್ಲಿ ನಡೆಯಬೇಕಲ್ಲ? ಏನೊ ನಿನ್ನ ಒಂದಾನೊಂದು ಕಾಲದಲ್ಲಿ ನಿನ್ನಂತವನೇ ಒಬ್ಬಾನೊಬ್ಬ ಬಡವ ಇದ್ದ, ಹೆಸರು ತಿಮ್ಮರಾಯ. ಬಡವನಾದ್ದರಿಂದ ಹಳ್ಳಿಯಲ್ಲಿ ಮಳೆ ಇಲ್ಲದೆ ಪಟ್ಟಣಕ್ಕೆ ಹೋಗಿ ದುಡಿಯೋಣವೆಂದು ಕೊಂಡು ಪಯಣವಾದ. ಕೆಟ್ಟು ಪಟ್ಟಣ ಸೇರು ಅಂತಾರಲ್ಲ, ಹಾಗೆ ಇವನೂ ಅಷ್ಟೋ ಇಷ್ಟೋ ಕೆಟ್ಟೇ ಪಟ್ಟಣಕ್ಕೆ ಹೊರಟ.

ಮಳೆ ಇರಲಿಲ್ಲವಾದ್ದರಿಂದ ರಣ ರಣ ಬಿಸಿಲು, ರೊಟ್ಟಿ ಹಂಚಿನಂತೆ ಸುಡುವ ನೆಲ, ಬಿಸಿಯುಸಿರಿನಂಥ ಗಾಳಿ. ಸತ್ತೆನೋ ಕೆಟ್ಟೆನೋ ಅಂತ ನಡೆದು ದಣಿದು ಹೈರಾಣಾಗಿ ಬರುತ್ತಿದ್ದ. ದಾರಿಯಲ್ಲಿ ಒಂದು ದೊಡ್ಡ ಮರ ಸಿಕ್ಕದ್ದೇ ತಡ ನೆರಳಲ್ಲಿ ತಂಗಿದ. ಕರುಳನ್ನೇ ಹರಿದು ತಿನ್ನುವ ಹಸಿವು, ಬಾಯಾರಿಕೆ. ಬಾಯಿ ಬಾಯಿ ಬಿಡುತ್ತ ಆ ಕಡೆ ನೋಡಿದ. ಮರದ ಇನ್ನೊಂದು ಬದಿಯಲ್ಲಿ ಒಬ್ಬಳು ಹಣ್ಣು ಹಣ್ಣು ಮುದುಕಿ ತನ್ನ ನಾಯಿಯೊಂದಿಗೆ ಕೂತಿದ್ದಳು.

**ತಿಮ್ಮರಾಯ :** ಗುಟುಕು ಅಂಬಲಿ ಇದೆಯಾ ಅಜ್ಜಿ? ಎಂದು ಅಂಗಲಾಚಿದ.

©KTBS NOT TO BE REPUBLISHED

**ಮುದುಕಿ** ನಾತಿ ದೂರ ನಾತಿ ಸಮೀಪದ ಒಂದು ಮರ ತೋರಿಸಿ,

**ಮುದುಕಿ :** ಆ ಮರದಲ್ಲಿ ಹಣ್ಣಿದೆ. ಹಸಿವು ತೀರುವಷ್ಟು ಹರಿದು ತಿನ್ನು.

ತಿಮ್ಮ ಈ ಮಾತು ಕೇಳಿದ್ದೇ ಎದ್ದ. ಆ ಮರದ ತುಂಬ ಹಣ್ಣಿದ್ದವು. ಅವಸರವಸರವಾಗಿ ಹೋಗಿ ತೃಪ್ತಿಯಾಗುವತನಕ ಹಣ್ಣು ತಿಂದು ಬಂದು ?


**ತಿಮ್ಮರಾಯ :** ತೊಟ್ಟು ನೀರಿದೆಯಾ ಅಜ್ಜಿ? ಎಂದ. ಆ ಮುದುಕಿ ಹಣ್ಣಿನ ಮರದಾಚೆ ನಾತಿ ದೂರ ನಾತಿ ಸಮೀಪದ ಇನ್ನೊಂದು ಮರ ತೋರಿಸಿ

**ಮುದುಕಿ :** ಆ ಮರಕ್ಕೆ ಕೊಡಲಿಯಿಂದ ಒಂದೇಟು ಹಾಕು; ನೀರು ಸುರಿಸುತ್ತದೆ. ಹಾಗೇ ಮಾಡಿ ತೃಪ್ತಿಯಾಗುವಷ್ಟು ನೀರು ಕುಡಿದು, ಅಜ್ಜಿಗೆ ಕೃತಜ್ಞತೆ ಹೇಳಿ, ಮರದ ನೆರಳಲ್ಲಿ ಒರಗಿದ. ಸಂಜೆ ಪಟ್ಟಣಕ್ಕೆ ಹೋಗದೇ ತನ್ನ ಮನೆಗೇ ವಾಪಸಾಗುವಾಗ ಅಜ್ಜಿಗೆ ಹೇಳಿದ:

**ತಿಮ್ಮರಾಯ :** ಅಜ್ಜೀ ಕುಟುಂಬ ರಕ್ಷಣೆಗಾಗಿ ಪಟ್ಟಣಕ್ಕೆ ಹೋಗೋಣ ಅಂತಿದ್ದೆ. ಆದರೆ ಅಲ್ಲಿಗಿಂತ ಇಲ್ಲಿಯೇ ಹೆಚ್ಚು ನೆಮ್ಮದಿಯಿದೆ. ಕುಟುಂಬ ಸಮೇತ ನಾನಿಲ್ಲಿ ಇರಬಹುದ?

**ಮುದುಕಿ :** ಇರಪ್ಪ ಅದಕ್ಕೇನಂತೆ. ತಿಮ್ಮರಾಯ ಹಳ್ಳಿಗೆ ಹೋಗಿ ಮಕ್ಕಳು ಮರಿ ಸಮೇತ ಅದೇ ಮರಕ್ಕೆ ಬಂದು ಹಾಜರಾದ. ಮುದುಕಿ ಈಗಲೇ ಅದೇ ಮರದಡಿ ಕೂತಿದ್ದಳು. ತಿಮ್ಮರಾಯನ ಹೆಂಡತಿ, ಮಕ್ಕಳನ್ನು ನೋಡಿ ಸಂತೋಷಪಟ್ಟಳು. ಅವನನ್ನು ಕರೆದು ಹೇಳಿದಳು.

@KTBS NOT TO BE REPUBLISHED



**ಮುದುಕಿ :** ನೋಡಪ್ಪ, ಈ ಕಾಡಿನಲ್ಲಿರಬೇಕಾದರೆ ನೀನು ತಿಳಿದಿರಲೇಬೇಕಾದ ಸೀಮೆಗಳಿವೆ. ಸೀಮೆ ಮೀರಿ ನೀನು ಬಂದರೆ ನಿನಗೂ ಒಳ್ಳೆಯದಲ್ಲ. ನನಗೂ ಒಳ್ಳೆಯದಲ್ಲ. ಅದಕ್ಕೇ ಹೇಳ್ತೇನೆ ಕೇಳು; ಅಕಾ ಆ ನೀರು ಕೊಡುವ ಮರ ಇದೆಯಲ್ಲ, ಒಂದೇಟು ಹಾಕಿದರಾಯ್ತು, ನೀರು ಕೊಡುತ್ತದೆ. ಬೇಕಾದಷ್ಟು ನೀರು ಕುಡಿಯಬಹುದು. ಅದು ನೀರಿನ ಮರ.

ಅದರಾಚೆ ನಾತಿ ದೂರ ನಾತಿ ಸಮೀಪದ ಹಣ್ಣಿನ ಮರ ಇದೆ. ನೀನು ಮಕ್ಕಳೊಂದಿಗೆ, ನಿಮಗೆ ಸಾಕಾಗುವಷ್ಟು ಹಣ್ಣು ಕೊಡುತ್ತದೆ. ಹಣ್ಣಿನ ಮರದಾಚೆ ನಾತಿ ದೂರ ನಾತಿ ಸಮೀಪ ಇನ್ನೊಂದು ಮರ ಇದೆಯಲ್ಲ. ಆ ಮರಕ್ಕೆ ನೀನು ಒಂದೇಟು ಹಾಕಿದರೆ ನಿನ್ನ ಕುಟುಂಬಕ್ಕೆ ಸಾಲುವಷ್ಟು ಹಾಲು ಸುರಿಸುತ್ತದೆ. ಅದು ಹಾಲಿನ ಮರ. ಇಲ್ಲಿಗೆ ನಿನ್ನ ಸೀಮೆ ಮುಗಿಯಿತಪ್ಪ. ನೆನಪಿನಲ್ಲಿಡು ಹಣ್ಣಿನ ಮರ ಕಡಿಯಲೇ ಬೇಡ. ನೀರಿನ ಮರಕ್ಕೆ ಒಂದಕ್ಕಿಂತ ಹೆಚ್ಚಿಗೆ ಏಟು ಹಾಕಲೇಬೇಡ. ಆದರೆ ನೆನಪಿರಲಣ್ಣ ? ಮೂರನೇ ಹಾಲಿನ ಮರಕ್ಕೆ ಒಂದಕ್ಕಿಂತ ಹೆಚ್ಚು ಏಟು ಹಾಕಿದರೆ ನನ್ನ ನಾಯಿ ಬೊಗಳುತ್ತದೆ. ಆಗ ನನಗೆ ಕೋಪ ಬರುತ್ತದೆ. ಇದಿಷ್ಟು ನಿನ್ನ ಸೀಮೆ, ತಿಳಿಯಿತೇನಪ್ಪ?"


**ತಿಮ್ಮರಾಯ :** ನೆನಪಿನಲ್ಲಿದೆ ತಾಯಿ, ತಪ್ಪಿ ಕೂಡ ನೀನು ತೋರಿಸಿದ ಗೆರೆಗಳನ್ನು ದಾಟಲಾರೆ. ಎಂದು ಮಾತು ಕೊಟ್ಟು ಮರದಡಿ ಸಂಸಾರ ಮಾಡಿಕೊಂಡಿದ್ದ.

ಇಂತೀ ರೀತಿಯಲ್ಲಿ ತಿಮ್ಮರಾಯ ಅನೇಕ ದಿವಸ ಮುದುಕಿ ಹೇಳಿದಂತೆ ಸುಖವಾಗಿದ್ದ. ಆದರೆ ಆಮೇಲಾಮೇಲೆ ಮಕ್ಕಳು ಹೆಚ್ಚಾಗಿ, ಆಸೆ ಮಿತಿಮೀರಿ ನಾಯಿ ಬೊಗಳಿದರೂ ಕ್ಯಾ-ರೇ ಮಾಡದ ಸ್ಥಿತಿಗೆ ಬಂದ. ಹಾಲಿನ ಮರಕ್ಕೆ ಮತ್ತೆ ಮತ್ತೆ ಎರಡನೇ, ಹಲವೇಟು ಹಾಕಿ ಪಟ್ಟಣಕ್ಕೊಯ್ದು ಹಾಲು ಹಣ್ಣು ಮಾರತೊಡಗಿದ. ಮುದುಕಿ ಕೋಪ ಮಾಡಿಕೊಂಡರೆ ಮತ್ತೆ ಏಟು ಹಾಕುತ್ತಿದ್ದ. ಒಂದು ದಿನ ಹಾಲು ಸಾಲದೆ ಮುದುಕಿಯ ಎದುರಿನಲ್ಲೇ ಹಾಲಿನ ಮರಕ್ಕೆ ನೂರೇಟು ಹಾಕಿದ. ಮರ ಕೆಳಗುರುಳಿ ಬಿದ್ದು ಅದರೊಳಗಿಂದ ಹಾಲಿನ ಬದಲು ರಕ್ತ ಚಿಮ್ಮತೊಡಗಿತು! ರಕ್ತ ಮಡುಗಟ್ಟಿ ಕೆರೆಯಾಗಿ ಹಳ್ಳ ಕೊಳ್ಳ ತೊರೆ ನದಿಯಾಗಿ ಕೊನೆಗೆ ಸಮುದ್ರವೂ ಆಗಿ ಭೂಮಿಯೆಲ್ಲ ರಕ್ತದ ಕಡಲಿನಲ್ಲಿ ಮುಳುಗಿ ಹೋಯಿತು. ಅದರಲ್ಲಿ ತಿಮ್ಮನೂ ಮುಳುಗಿ ಸತ್ತುಹೋದನೆಂದು ಹೇಳಲೇಬೇಕಿಲ್ಲವಲ್ಲ!

**ಕತೆ ಮುಗಿದ ಮೇಲೆ ಮುದುಕ ಹೇಳಿದ:**

ನೋಡ್ರೆಪಾ ಕತೆಯಲ್ಲಿಯ 'ರಕ್ತದ ಮಡುವಿನಲ್ಲಿ ಭೂಮಿ ಮತ್ತು ತಿಮ್ಮನ ಸಂಸಾರ ಮುಳುಗಿ ಹೋದರು' ಅಂತಲ್ಲವ ಕತೆಯ ಕೊನೆಯಲ್ಲಿ ಹೇಳಿದ್ದು? ಕತೆಗೊಂದು ಕೊನೆ ಕೊಡಬೇಕೆಂದು ಹಾಗೆ ಹೇಳಿದ್ದು. ನಿಜ ಸಂಗತಿ ಏನೆಂದರೆ; ಆ ತಿಮ್ಮ ಇನ್ನೂ ಜೀವಂತವಾಗಿದ್ದಾನೆ ನಿಮ್ಮ ಮಧ್ಯದಲ್ಲಿ! ನೀವೀಗಲೂ ದೊಡ್ಡ ಮನಸ್ಸು ಮಾಡಿ ಭೂಮಿಯನ್ನ ಮತ್ತು ನಿಮ್ಮನ್ನ ಉಳಿಸಿಕೊಳ್ಳಬಹುದು? ಹಾಲಿನ ಮರಕ್ಕೆ ಏಟು ಹಾಕುವುದನ್ನ ನಿಲ್ಲಿಸಿ! ಏನು ಮಾಡುತ್ತೀರೋ ನೋಡಿಕೊಳ್ಳಿ!

© KTBS NOT TO BE REPUBLISHED



## ಕೃತಿಕಾರರ ಪರಿಚಯ

**ಡಾ. ಚಂದ್ರಶೇಖರ ಕಂಬಾರರು** ಜನವರಿ 2, 1937ರಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರೆ ಗ್ರಾಮದಲ್ಲಿ ಜನಿಸಿದರು. ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ. ಕಂಬಾರರು 24 ನಾಟಕಗಳು, 10 ಕವನ ಸಂಕಲನಗಳು, 5 ಕಾದಂಬರಿಗಳು ಮತ್ತು ಹಲವು ಕೃತಿಗಳನ್ನು ರಚಿಸಿದ್ದಾರೆ. **'ಚಕೋರಿ'** ಅವರ ಮಹಾಕಾವ್ಯ. **ಸಂಗ್ಯಾ ಬಾಳ್ಯಾ, ಜೋಕುಮಾರಸ್ವಾಮಿ, ಸಿರಿ ಸಂಪಿಗೆ, ಶಿವರಾತ್ರಿ** ಮುಂತಾದ ನಾಟಕಗಳು, **ಕರಿಮಾಯಿ, ಸಿಂಗಾರಮ್ಮ ಮತ್ತು ಅರಮನೆ, ಶಿಖರ ಸೂರ್ಯ** ಮುಂತಾದ ಕಾದಂಬರಿಗಳು ಇವರ ಕೃತಿಗಳು. ಇವರಿಗೆ 2010ರಲ್ಲಿ **ಜ್ಞಾನಪೀಠ ಪ್ರಶಸ್ತಿ** ಸಂದಿದೆ. **ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿ ಪ್ರಶಸ್ತಿ** ಮೊದಲಾದ ಪ್ರಶಸ್ತಿಗಳು ಇವರಿಗೆ ಲಭಿಸಿವೆ. ಪ್ರಸ್ತುತ **'ಸೀಮೆ'** ಜನಪದ ಕಥೆಯನ್ನು ಅವರ **'ಮರವೇ ಮರ್ಮರವೇ'** ಎಂಬ ಸಂಕಲನದ **'ಆತ್ಮಹತ್ಯೆ'** ಎಂಬ ಕತೆಯಿಂದ ಆಯ್ದುಕೊಳ್ಳಲಾಗಿದೆ.

©KTBS NOT TO BE REPUBLISHED

## ಅಭ್ಯಾಸ

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?

೨. ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ.

೩. ಶಿವಪುರದಲ್ಲಿನ ಮುದುಕ ಚಿಂತಿಸುತ್ತಿದ್ದರು ಏಕೆ?

೪. ಮುದುಕನು ಹೇಳುವಂತೆ ಕಥೆಯ ನಿಜ ಸಂಗತಿ ಯಾವುದು?

೫. ಆಸೆ ಮಿತಿಮೀರಿ ತಿಮ್ಮರಾಯ ಮಾಡಿದ್ದೇನು?